ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 21 ಶನಿವಾರ 2023

43

ಸಂಪುಟ: 43 | ಸಂಚಿಕೆ: 274 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com

ವಲಯವಾರು ಪಾಲಿಕೆ ಅದಾಲತ್‌ಗೆ ಮೇಯರ್ ಚಾಲನೆ

ಶಾರದಾದೇವಿನಗರ ವಲಯ ಕಚೇರಿ-3ರಲ್ಲಿ ನಡೆದ ಪ್ರಥಮ ಅದಾಲತ್‌ಗೆ ಉತ್ತಮ ಪ್ರತಿಕ್ರಿಯೆ





ಮೈಸೂರು, ಜ. 20(ಆರ್‌ಕೆ)-ಮೈಸೂರು ಮಹಾನಗರ ಪಾಲಿಕೆಯು ಆಯೋಜಿಸಿರುವ ವಲಯವಾರು ಅದಾಲತ್ ಇಂದಿನಿಂದ ಆರಂಭವಾಯಿತು.

ಮೈಸೂರಿನ ಶಾರದಾದೇವಿನಗರದ ಪಾಲಿಕೆ ವಲಯ ಕಚೇರಿ-3ರಲ್ಲಿ ನಡೆದ ಪ್ರಥಮ ಅದಾಲತ್‌ಗೆ ಮೇಯರ್ ಶಿವಕುಮಾರ್ ಚಾಲನೆ ನೀಡಿದರು.

ಉಪಮೇಯರ್ ಡಾ.ಜಿ.ರೂಪಾ, ಕಾರ್ಪೊರೇಟರ್‌ಗಳಾದ ಶಿವಕುಮಾರ್, ಸವಿತಾ ಸುರೇಶ್, ನಿರ್ಮಲಾ ಹರೀಶ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತರೆಡ್ಡಿ ಅವರ ಉಪಸ್ಥಿತಿಯಲ್ಲಿ ನಡೆದ ಅದಾಲತ್‌ನಲ್ಲಿ 11 ಮಂದಿ ನಾಗರಿಕರು ಅರ್ಜಿ ಸಲ್ಲಿಸಿ ಸೇವೆಗಳನ್ನು ಪಡೆದುಕೊಂಡರು ಎಂದು ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ತಿಳಿಸಿದರು.

ನಿವೇಶನ-ಮನೆಗಳ ಖಾತೆ ವರ್ಗಾವಣೆ, ಕಂದಾಯ ನಿಗದಿ, ಬಿಲ್ಡಿಂಗ್ ಪ್ಲಾನ್, ಸಿಆರ್, ಡೇ-ನಲ್ಮಾ ಯೋಜನೆ, ಟ್ರೇಡ್ ಲೈಸೆನ್ಸ್, ನೀರು ಸರಬರಾಜು, ಒಳಚರಂಡಿ, ಆಶ್ರಯ ಯೋಜನೆಯಡಿ ಮನೆ ಮಂಜೂರಾಗಿದ್ದವರಿಗೆ ಸ್ವಾಧೀನ ಪತ್ರ, ಜನನ-ಮರಣ ಪತ್ರ ಸೇರಿದಂತೆ ಇನ್ನಿತರ ಸೇವೆ ಕೋರಿ ಬಂದ ಅರ್ಜಿಗಳ ದಾಖಲೆ ಪತ್ರಗಳನ್ನು ಪರಿಶೀಲಿಸಿ ಸ್ಥಳದಲ್ಲೇ ಕೆಲವು ಸೇವೆ ಒದಗಿಸಲಾಯಿತು. ಸಮಸ್ಯೆ ಇರುವ ಅರ್ಜಿಗಳ ಸಂಬಂಧ ಅಗತ್ಯ ದಾಖಲೆ ಸಲ್ಲಿಸುವಂತೆ ಹಿಂಬರಹ ನೀಡಲಾಯಿತು ಎಂದು ಸತ್ಯಮೂರ್ತಿ ತಿಳಿಸಿದರು. ವಲಯ ಕಚೇರಿಗಳಲ್ಲಿ ದಿನನಿತ್ಯ ಬರುವ ಅರ್ಜಿಗಳಿಗೆ ವಿಳಂಬ ಮಾಡದೇ ಸೇವೆ ಒದಗಿಸಬೇಕು. ಅನಗತ್ಯವಾಗಿ ಜನರನ್ನು ಅಲೆದಾಡಿಸುವುದು, ಹಣಕ್ಕಾಗಿ ಒತ್ತಾಯಿಸುವುದು, ಬ್ರೋಕರ್‌ಗಳಿಗೆ ಪ್ರೋತ್ಸಾಹ ನೀಡುವುದು ಕಂಡು ಬಂದಲ್ಲಿ ಅಂತಹ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮೇಯರ್ ಅದಾಲತ್‌ನಲ್ಲಿ ಎಚ್ಚರಿಕೆ ನೀಡಿದರು.

ಪಾಲಿಕೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಮಧುಸೂದನ್, ರಂಜಿತ್‌ಕುಮಾರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್ ಕುಮಾರ್, ವಲಯಾಧಿಕಾರಿ ಪ್ರಕಾಶ್ ಹಾಗೂ ಸಿಬ್ಬಂದಿ ಅದಾಲತ್‌ನಲ್ಲಿ ಹಾಜರಿದ್ದರು.

ಅನಧಿಕೃತ ಪಾರ್ಕಿಂಗ್: ಪೊಲೀಸ್ ವಾಹನ ಚಾಲಕರಿಬ್ಬರಿಗೆ ದಂಡ



ಮೈಸೂರು, ಜ. 20 (ಆರ್‌ಕೆ)- ನೋ ಪಾರ್ಕಿಂಗ್ ನಿಯಮ ಉಲ್ಲಂಘಿಸಿದ ಪೊಲೀಸ್ ವಾಹನಗಳ ಚಾಲಕರಿಬ್ಬರಿಗೆ ತಲಾ 1000 ರೂ. ದಂಡ ವಿಧಿಸಲಾಗಿದೆ.

ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಬುಧವಾರ ಸಂಜೆ ದ್ವಿಚಕ್ರ ವಾಹನ ನಿಲುಗಡೆ ಸ್ಥಳದಲ್ಲಿ ಆಲನಹಳ್ಳಿ ಮತ್ತು ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್‌ಗಳ ಜೀಪುಗಳನ್ನು ನಿಲುಗಡೆ ಮಾಡಲಾಗಿತ್ತು. ಅದನ್ನು ಗಮನಿಸಿದ ಸಾರ್ವಜನಿಕರು ಮೊಬೈಲ್‌ನಲ್ಲಿ ಫೋಟೋ ತೆಗೆದು ಪೊಲೀಸ್ ಆಟೋಮೇಷನ್ ಸೆಂಟರ್‌ಗೆ ಕಳುಹಿಸಿದ್ದರು. ನೋ ಪಾರ್ಕಿಂಗ್ ಉಲ್ಲಂಘನೆ ಆರೋಪದಡಿ ನೋಟೀಸ್ ಸೃಜನವಾಗಿದ್ದರಿಂದ ಆ ಪೊಲೀಸ್ ವಾಹನಗಳ ಚಾಲಕರಿಗೆ ತಲಾ 1000 ರೂ. ದಂಡ ವಸೂಲಿ ಮಾಡಲಾಗಿದೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಾರ್ವಜನಿಕರಿಗೆ ಸಂಚಾರ ನಿಯಮ ಪಾಲಿಸಿ ಎಂದು ಹೇಳಿ ದಂಡ ವಸೂಲಿ ಮಾಡುವ ಪೊಲೀಸರೇ ನಿಯಮ ಉಲ್ಲಂಘಿಸಿದರೆ ಸುಮ್ಮನಿರಲಾಗದು. ಕಾನೂನು ಎಲ್ಲರಿಗೂ ಅನ್ವಯಿಸುತ್ತದೆಯಾದ್ದರಿಂದ ಇನ್ಸ್‌ಪೆಕ್ಟರ್‌ಗಳ ವಾಹನ ಚಾಲಕರಿಗೂ ದಂಡ ವಿಧಿಸಲಾಗಿದೆ ಎಂದರು.

ನಕಲಿ ರಸಗೊಬ್ಬರ ಘಟಕ: ಓರ್ವನ ವಿರುದ್ಧ ಕೇಸ್

ಮೈಸೂರು, ಜ.20-ಮೈಸೂರಿನ ಶ್ಯಾದನಹಳ್ಳಿ ಗ್ರಾಮದಲ್ಲಿ ನಕಲಿ ರಸಗೊಬ್ಬರ ತಯಾರಿಕೆ ಘಟಕ ಪತ್ತೆಯಾಗಿದ್ದು, ಪೊಲೀಸರ ಸಹಕಾರದೊಂದಿಗೆ ಕೃಷಿ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ನಕಲಿ ರಸಗೊಬ್ಬರ ತಯಾರಿಕಾ ವಸ್ತುಗಳನ್ನು ವಶಪಡಿಸಿಕೊಂಡು ಓರ್ವನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಶ್ಯಾದನಹಳ್ಳಿಯ ಯಶವಂತ್ ಎಂಬುವರ ಅಡಿಕೆ ತಟ್ಟೆ ತಯಾರಿಸುವ ಘಟಕದಲ್ಲಿ ನಕಲಿ ರಸಗೊಬ್ಬರ ತಯಾರಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಮೈಸೂರು ತಾಲೂಕು ಕಸಬಾ ಹೋಬಳಿಯ ಪ್ರಭಾರ ಕೃಷಿ ಅಧಿಕಾರಿ ಸಿ.ಎಂ. ಕಾರ್ತಿಕ್ ಅವರು ಮೇಟಗಳ್ಳಿ ಠಾಣೆ ಪೊಲೀಸರ ಸಹಕಾರದೊಂದಿಗೆ ದಾಳಿ ನಡೆಸಿದ್ದಾರೆ. ಆದರೆ ಯಶವಂತ್ ಅವರ ಗೋದಾಮನ್ನು ಪ್ರಸನ್ನ ಎಂಬುವರು ಬಾಡಿಗೆಗೆ ಪಡೆದು ಅಡಿಕೆ ತಟ್ಟೆ ತಯಾರಿಸುವ ಕಾರ್ಖಾನೆ ನಡೆಸುತ್ತಿದ್ದು, ಗೋದಾಮಿನ ಒಂದು ಭಾಗವನ್ನು ಮಹೇಶ್ ಹಾಗೂ ಸಿಂಧು ಎಂಬುವರು ಅಡಿಕೆ ತಟ್ಟೆ ತಯಾರಿಸುವುದಾಗಿ ಬಾಡಿಗೆಗೆ ಪಡೆದಿರುವುದು ಗೊತ್ತಾಗಿದೆ. ಮಹೇಶ್ ಮತ್ತು ಸಿಂಧು ಬಾಡಿಗೆಗೆ ಪಡೆದಿದ್ದ ಗೋದಾಮನ್ನು ಪರಿಶೀಲಿಸಿದಾಗ 50 ಕೆ.ಜಿ. ಐಪಿಎಲ್ ಬ್ರಾಂಡ್‌ನಲ್ಲಿ ಒಡೆದಿರುವ ಎಂಓಪಿ ಚೀಲಗಳು, 20 ಕೆ.ಜಿ.ಯ ಎರಡು ರೆಡ್ ಆಕ್ಸೈಡ್ ಬಣ್ಣವಿರುವ ಚೀಲಗಳು, ಐಪಿಎಲ್ ಹಾಗೂ ಗ್ರೋಮರ್ ಬ್ರಾಂಡ್‌ನ ಒಂದು ಬಂಡಲ್‌ನಲ್ಲಿ 40 ರಿಂದ 50 ಚೀಲವಿರುವ 8 ಬಂಡಲ್‌ಗಳು, ಬೆಲ್ ಕಂಪನಿಯ ತೂಕದ ಯಂತ್ರ, ರಿವೋ ಕಂಪನಿಯ ಚೀಲ ಹೊಲೆಯುವ ಯಂತ್ರ ಅಡಿಗೆ ಉಪ್ಪು ಮಾದರಿಯ ಬಿಳಿ ಬಣ್ಣದ ತಲಾ 50 ಕೆ.ಜಿ. ತೂಕದ 104 ಚೀಲಗಳು ಪತ್ತೆಯಾಗಿದ್ದು, ಈ ಘಟಕದಲ್ಲಿ ನಕಲಿ ಗೊಬ್ಬರ ತಯಾರಿಸುತ್ತಿರುವುದು ಕಂಡು ಬಂದಿದೆ. ಸದರಿ ವಸ್ತುಗಳನ್ನು ವಶಪಡಿಸಿಕೊಂಡು ಮಹೇಶ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇದೇ ಮಹೇಶ್ ಎಂಬಾತನ ವಿರುದ್ಧ 2022ರ ಜುಲೈ 24ರಂದು ಮೈಸೂರು ಗ್ರಾಮಾಂತರ ಠಾಣೆಯಲ್ಲಿ ನಕಲಿ ರಸಗೊಬ್ಬರ ತಯಾರಿಕೆ ಸಂಬಂಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಕೃಷಿ ಅಧಿಕಾರಿ ಕಾರ್ತಿಕ್ ತಿಳಿಸಿದ್ದಾರೆ. ಈ ಸಂಬಂಧ ಮೇಟಗಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜ.21ರಂದು ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ

ಮೈಸೂರು, ಜ.20- ಸರ್ಕಾರದ ನಿರ್ದೇಶನದಂತೆ ಜಿಲ್ಲಾಧಿಕಾರಿಗಳು ಪ್ರತಿ ಮಾಹೆ 3ನೇ ಶನಿವಾರದಂದು ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ ಗ್ರಾಮ ಭೇಟಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಜ.21 ರಂದು ಹುಣಸೂರು ತಾಲೂಕು ಹನಗೋಡು ಹೋಬಳಿಯ ನೇರಳಕುಪ್ಪೆ ಗ್ರಾಮದಲ್ಲಿ ಗ್ರಾಮ ಭೇಟಿ ಕಾರ್ಯಕ್ರಮವನ್ನು ನಿಗದಿಪಡಿಸಲಾಗಿದೆ. ಹುಣಸೂರು ತಾಲೂಕು ಹನಗೋಡು ಹೋಬಳಿಯ ನೇರಳಕುಪ್ಪೆ ಗ್ರಾಮದ ಗ್ರಾಮಸ್ಥರು, ಗ್ರಾಮಕ್ಕೆ ಸಂಬಂಧಿಸಿದಂತಹ ಸಮಸ್ಯೆಗಳ ಬಗ್ಗೆ ಮುಂಚಿತವಾಗಿಯೇ ಸಂಬಂಧಪಟ್ಟ ನಾಡಕಛೇರಿ, ಉಪತಹಶೀಲ್ದಾರ್ ಅಥವಾ ರಾಜಸ್ವ ನಿರೀಕ್ಷಕರಿಗೆ ತಮ್ಮ ಮನವಿಗಳನ್ನು ಸಲ್ಲಿಸಿ ಸಮಸ್ಯೆ ಇತ್ಯರ್ಥ ಪಡಿಸಿಕೊಳ್ಳಬಹುದು.

ಜಿಲ್ಲಾಧಿಕಾರಿಗಳು ಭೇಟಿ ನೀಡಲಿರುವ ತಾಲೂಕನ್ನು ಹೊರತುಪಡಿಸಿ, ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ಮೈಸೂರು ತಾಲೂಕಿನ ವರುಣಾ ಹೋಬಳಿಯ ಚಟ್ನಹಳ್ಳಿಪಾಳ್ಯ, ಕೆ.ಆರ್.ನಗರ ತಾಲೂಕು ಮತ್ತು ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಹೋಬಳಿಯ ಮಾರಗೌಡನಹಳ್ಳಿ, ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿಯ ಹೊಳಹುಂಡಿ, ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿಯ ಹಲಗನಹಳ್ಳಿ, ನಂಜನಗೂಡು ತಾಲೂಕಿನ ಕೌಲಂದೆ ಹೋಬಳಿಯ ನೇರಳೆ, ಟಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿಯ ಯಾಚೇನಹಳ್ಳಿ ಹಾಗೂ ಸರಗೂರು ತಾಲೂಕಿನ ಹಾದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಶವಂತಪುರ ಗ್ರಾಮಗಳಲ್ಲಿ ಕಾರ್ಯಕ್ರಮ ನಡೆಸಲಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಸುರಕ್ಷತೆಗಾಗಿ ವಾಕಥಾನ್



ಮೈಸೂರು, ಜ. 20 (ಆರ್‌ಕೆ)- ರಸ್ತೆ ಸುರಕ್ಷತೆ ಸಂಬಂಧ ಜನರಿಗೆ ಜಾಗೃತಿ ಮೂಡಿಸಲು ಇಂದು ಮೈಸೂರಲ್ಲಿ ಸಂಚಾರ ಪೊಲೀಸರು ವಾಕಥಾನ್ ನಡೆಸಿದರು. ಮೈಸೂರು ನಗರ ಸಂಚಾರ ಪೊಲೀಸ್ ವತಿಯಿಂದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ-2023ರ ಅಂಗವಾಗಿ ಮೈಸೂರಿನ ಅರಮನೆ ಉತ್ತರ ದ್ವಾರದ ಬಳಿಯಿಂದ ಆಯೋಜಿಸಿದ್ದ ವಾಕಥಾನ್‌ಗೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಮಣಿಪಾಲ್ ಆಸ್ಪತ್ರೆ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ, ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ, ಸಂಚಾರ ಎಸಿಪಿ ಪರಶುರಾಮಪ್ಪ, ಎಲ್ಲಾ ಉಪವಿಭಾಗಗಳ ಎಸಿಪಿಗಳು, ಸಂಚಾರ ಠಾಣೆಗಳ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳು ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದರು. ಕೆ.ಆರ್.ಸರ್ಕಲ್, ಸಯ್ಯಾಜಿರಾವ್ ರಸ್ತೆ ಇರ್ವಿನ್ ರೋಡ್, ನೆಹರು ಸರ್ಕಲ್, ಅಶೋಕ ರಸ್ತೆ ಮೂಲಕ ಪುರಭವನದವರೆಗೆ ವಾಕ್ ಮಾಡಿದ ಪೊಲೀಸ್ ಅಧಿಕಾರಿಗಳು, ಸಂಚಾರ ನಿಯಮ ಪಾಲಿಸಿ ಅಪಘಾತ ತಪ್ಪಿಸಿ ಎಂಬ ಘೋಷಣೆಯೊಂದಿಗೆ ಸಾರ್ವಜನಿಕರಿಗೆ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಿದರು.

ನಾನು ವಿದ್ಯಾರ್ಥಿಯಾಗಿದ್ದಾಗ ಬೀದಿಬದಿ ವ್ಯಾಪಾರಿಗಳಲ್ಲಿ ಚಿತ್ರಾನ್ನ ತಿನ್ನುತ್ತಿದ್ದೆ!

ಬೆಂಗಳೂರು, ಜ.20 (ಕೆಎಂಶಿ)-



ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ರಾತ್ರಿ ವೇಳೆ ಬೀದಿ ಬದಿ ವ್ಯಾಪಾರಿಗಳ ಬಳಿ ಚಿತ್ರಾನ್ನ ತಿಂದು ಬದುಕುತ್ತಿದ್ದೆವು. ಆಗ 1 ರೂ.ಗೆ ಒಂದು ಪ್ಯಾಕೆಟ್ ಚಿತ್ರಾನ್ನ ಸಿಗುತ್ತಿತ್ತು. ಎಷ್ಟೇ ಎತ್ತರಕ್ಕೆ ಬೆಳೆದರು ನಾವು ಬಂದ ಹಾದಿ ಮರೆಯಬಾರದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಬೀದಿಬದಿ ವ್ಯಾಪಾರಿ ಸಂಘಟನೆಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಬೀದಿಬದಿಯಲ್ಲಿ ವ್ಯಾಪಾರ ಮಾಡುತ್ತಿರುವ ಜನರಿಗೆ ಕಾಂಗ್ರೆಸ್ ಪಕ್ಷ ಮಾತ್ರ ನೆಮ್ಮದಿ ಬದುಕು ನೀಡಲಿದೆ ಎಂದು ನಂಬಿಕೆ ಇಟ್ಟು ಇಲ್ಲಿಗೆ ಬಂದಿದ್ದೀರಿ. ನಿಮಗೆ ಕೋಟಿ ನಮನಗಳು ಎಂದರು.

ಬೆಂಗಳೂರು ಎಂದೆಂದಿಗೂ ಉದ್ಯಾನ ನಗರಿಯಾಗಿಯೇ ಇರಲು ಕ್ರಮ







ಬೆಂಗಳೂರು, ಜ.20 (ಕೆಎಂಶಿ)-ಬೆಂಗಳೂರು ಉದ್ಯಾನನಗರ ಎಂದು ಈಗಾಗಲೇ ಪ್ರಸಿದ್ಧಿಯಾಗಿದೆ. ಅಭಿವೃದ್ಧಿಯಲ್ಲಿ ಈ ಹೆಸರು ಹಿಂದೆ ಸರಿದಿದ್ದು, ಮತ್ತೊಮ್ಮೆ ಉದ್ಯಾನ ನಗರದ ಗತ ವೈಭವವನ್ನು ಮರುಕಳಿಸು ವಂತೆ ಸರ್ಕಾರ ಕ್ರಮ ವಹಿಸಲಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅವರು ಇಂದು ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನಕಲಾ ಸಂಘದ ವತಿಯಿಂದ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ ಬೆಂಗಳೂರು ನಗರದ ಇತಿಹಾಸ ವಿಷಯಾಧಾರಿತದ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನ-2023 ಉದ್ಘಾಟಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು. ಬೆಂಗಳೂರಿನ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಸೇರಿದಂತೆ ಪ್ರಮುಖ ಉದ್ಯಾನಗಳನ್ನು ಉತ್ತಮವಾಗಿಟ್ಟುಕೊಂಡು ಬಿಬಿಎಂಪಿ ನಿರ್ವಹಿಸುವ ಹೊಸ ಉದ್ಯಾನವನಗಳಲ್ಲಿ ಹೆಚ್ಚಿನ ಸಸ್ಯ ಸಂಪತ್ತನ್ನು ಬೆಳೆಸುವುದು ಹಾಗೂ ಹೊರವಲಯದಲ್ಲಿ ಹೊಸ ಉದ್ಯಾನಗಳನ್ನು ನಿರ್ಮಿಸುವ ಮೂಲಕ ಉದ್ಯಾನನಗರ ಹೆಸರನ್ನು ಖಾಯಂಗೊಳಿಸಲು ಕ್ರಮಕೈಗೊಳ್ಳಲಾಗುವುದು ಎಂದರು.

ಫಲಪುಷ್ಪ ಪ್ರದರ್ಶನ ಅತ್ಯಂತ ಜನಪ್ರಿಯವಾಗಿದ್ದು, ಪ್ರತಿ ವರ್ಷ ಲಕ್ಷಾಂತರ ಜನ ಭೇಟಿ ನೀಡುತ್ತಾರೆ. ಈ ಬಾರಿ 10- 15 ಲಕ್ಷ ಜನ ಬರುವ ನಿರೀಕ್ಷೆ ಇದೆ. ಅದಕ್ಕಾಗಿ ತೋಟಗಾರಿಕಾ ಇಲಾಖೆ ವ್ಯವಸ್ಥೆಗಳನ್ನು ಮಾಡಿಕೊಂಡಿದೆ.

ಫಲಪುಷ್ಪ ಎಲ್ಲರಿಗೂ ಬಹಳ ಪ್ರಿಯವಾಗಿರುವಂಥದ್ದು. ಇಲ್ಲಿ ಪ್ರದರ್ಶನದ ಮುಖಾಂತರ ರಾಜ್ಯದ ಸಸ್ಯಸಂಪತ್ತು ಎಷ್ಟು ದೊಡ್ಡದಿದೆ, ವಿಭಿನ್ನ, ವಿಸ್ತಾರವಾಗಿದೆ ಎಂದು ಪ್ರದರ್ಶನವಾಗುತ್ತದೆ. ಸಸ್ಯಸಂಪತ್ತನ್ನು ಹೆಚ್ಚಿಗೆ ಮಾಡುವುದು ನಮ್ಮ ಉದ್ದೇಶ. ರಾಜ್ಯದಲ್ಲಿ ಹಸಿರು ಪದರ ವಿಸ್ತರಣೆಯಾಗಬೇಕು. ಅದಕ್ಕಾಗಿ ಹಸಿರು ಆಯವ್ಯಯವನ್ನು ರೂಪಿಸಲಾಗಿದೆ. 100 ಕೋಟಿ ರೂ.ಗಳನ್ನು ಹಸಿರು ವಿಸ್ತರಣೆಗಾಗಿ ಮೀಸಲಿರಿಸಿದೆ. ಅದರ ಅನುಷ್ಠಾನವೂ ಆಗುತ್ತಿದೆ.

ಗುಡ್ಡಗಾಡು ಪ್ರದೇಶಗಳನ್ನು ಸಂಪೂರ್ಣ ಹಸಿರು ಮಾಡಿ ಪರಿಸರ ಸಮತೋಲನ ಕಾಯ್ದುಕೊಳ್ಳಲು ರಾಜ್ಯದಲ್ಲಿ ಪ್ರಥಮ ಬಾರಿಗೆ ದೊಡ್ಡ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರ ಜೊತೆಗೆ ತೋಟಗಾರಿಕೆ ವಿಸ್ತರಣೆಯೂ ಆಗಬೇಕು. ಲಾಲ್‌ಬಾಗ್‌ನಿಂದ ಹಿಡಿದು ರಾಜ್ಯದೆಲ್ಲೆಡೆ ತೋಟಗಾರಿಕೆ ಇದೆ. ಇವುಗಳ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮ ರೂಪಿಸುತ್ತಿದ್ದು, ಬಜೆಟ್‌ನಲ್ಲಿ ಅನುದಾನ ನೀಡಬೇಕೆನ್ನುವ ಚಿಂತನೆಯೂ ಇದೆ. ತೋಟಗಾರಿಕೆ ಯಿಂದ ಹಸಿರು ಹೆಚ್ಚುವುದರ ಜೊತೆಗೆ ಅಲ್ಲಿ ಉತ್ಪಾದನೆ ಹೆಚ್ಚಾಗುತ್ತದೆ ಹಾಗೂ ಪೌಷ್ಟಿಕ ಆಹಾರವನ್ನು ಒದಗಿಸಲು ಸಾಧ್ಯವಿದೆ. ದೊಡ್ಡ ಪ್ರಮಾಣದಲ್ಲಿ ತೋಟ ಗಾರಿಕೆಯನ್ನು ವಿಸ್ತರಿಸಿ, ಫಾರ್ಮ್‌ಗಳನ್ನು ಬೆಳೆಸುವ ಕೆಲಸವನ್ನು ಸರ್ಕಾರ ಮಾಡುತ್ತದೆ ಎಂದರು. ಜನ ಫಲಪುಷ್ಪ ಪ್ರದರ್ಶನದ ಲಾಭ ಪಡೆಯಲಿ ಹಾಗೂ ತಮ್ಮದೇ ರೀತಿಯಲ್ಲಿ ಫಲಪುಷ್ಪಗಳನ್ನು ಬೆಳೆಸಲು ತಮ್ಮ ಪ್ರಯತ್ನ ಮಾಡಬೇಕು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.1.2023 ಶನಿವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಪೂಷ,
ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖಿನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ- ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ, ಲೇಖಿನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ-ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 10.00 ಎಂ.ಡಿ. ಸುಮತಿ ಮುರಾರಿ - ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ-ಎಂ.ಎಸ್. ಶೀಲಾ, ನರಸಿಂಹ ನಾಯಕ್, 12.45 ಜನಪದ ಸಂಗೀತ-ನಿಂಗಶೆಟ್ಟಿ ಮತ್ತು ತಂಡ-ಸಿದ್ದಾಪ್ಪಾಜಿ ಕಥೆ, 1.20 ಭಾವಗೀತೆ, 3.30 ಮಕ್ಕಳ ಮಂಟಪ-ನಂದಗೋಕುಲ, ಪ್ರಸ್ತುತಿ- ಕೆ.ಬಿ. ಮೀನಾ, 4.00 ನೆನಪಿನಂಗಳ-ವಿವಿಧ ಕ್ಷೇತ್ರಗಳಲ್ಲಿ ಸೇವೆಗೈದ ಬಿ.ಎಂ. ಶಿವರಾಮಯ್ಯ ಅವರೊಂದಿಗೆ ಹೂಗೊಪ್ಪಲು ಕೃಷ್ಣಮೂರ್ತಿ ಅವರು ನಡೆಸಿದ್ದ ಸಂವಾದ, 6.50ಕೃಷಿರಂಗ-"ತೋರಣ ಹೂರಣ", ಪ್ರಸ್ತುತಿ-ಎಸ್. ಸುಬ್ರಹ್ಮಣ್ಯ, 8.00 ಯುವವಾಣಿ, 9.15 ಶಿಲ್ಪಿ-ಅರುಣ್ ಯೋಗಿರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು-ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ-ಬಹಾವುದ್ದೀನ್ ಡಾಗರ್-ರುದ್ರವೀಣಾ

■ **ಓಕಿನೋವಾ ಕರಾಟೆ ಸಂಸ್ಥೆ:** ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿ, ಉದ್ಘಾಟನೆ: ಮೈಲ್ಯಾಕ್ ಅಧ್ಯಕ್ಷ ರಘು ಆರ್.ಕೌಟಿಲ್ಯ, ಅಧ್ಯಕ್ಷತೆ: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ. ಕೃಷ್ಣಯ್ಯ, ಉಪಸ್ಥಿತರು: ಪಾಲಿಕೆ ಸದಸ್ಯೆ ಸವಿತಾ ಸುರೇಶ್, ಎ. ಸುಬ್ರಮಣ್ಯ, ಸ್ಥಳ:ಮೈವಿವಿ ಜಿಮ್ನಾಸಿಯಂ ಹಾಲ್, ಬೆಳಗ್ಗೆ 9.15ಕ್ಕೆ.

■ **ಶ್ರೀ ಪ್ರಣಮ್ಯ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್, ಬೃಂದಾವನ ಆಸ್ಪತ್ರೆ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಅಧ್ಯಕ್ಷತೆ: ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಸಿ.ಎನ್. ಕೃಷ್ಣ, ಮುಖ್ಯ ಅತಿಥಿಗಳು: ಜ್ಯೋತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಮುದ್ದುವೀರಪ್ಪ, ಬಿಜೆಪಿ ಮುಖಂಡ ಕಿರಣ್‌ಗೌಡ, ಸಿ.ಅರವಿಂದ್, ವಿ.ಪಿ.ಸವಿತಾ, ಡಾ.ಬಿ. ಭರತ್‌ರಾಜ್, ಪಿ.ಕೆ.ಮಧುಸೂದನ, ಸ್ಥಳ:ಜ್ಯೋತಿ ಸಂಯುಕ್ತ ಪದವಿಪೂರ್ವ ಕಾಲೇಜು, ವಿವೇಕಾನಂದನಗರ, ಬೆಳಗ್ಗೆ 10 ರಿಂದ.

■ **ಶರಣ ಸಾಹಿತ್ಯ ಪರಿಷತ್ತು :** ವಿದ್ಯಾರ್ಥಿಗಳಿಗೆ ವಚನ ಗಾಯನ ಮತ್ತು ವ್ಯಾಖ್ಯಾನ ಸ್ಪರ್ಧೆ, ಉದ್ಘಾಟನೆ : ಪ್ರಾಂಶುಪಾಲ ಡಾ. ಹೆಚ್. ಮುದ್ದುಮಲ್ಲೇಶ್, ಪ್ರೊ. ನೀಲಗಿರಿ ತಳವಾರ ಅವರಿಂದ ವಚನ ಸಾಹಿತ್ಯದಲ್ಲಿ ಬದುಕು-ಬೆಳಕು ಕುರಿತು ಉಪನ್ಯಾಸ, ಬಹುಮಾನ ವಿತರಣೆ: ಎಂ.ಎಸ್. ಸಂತೋಷ್ ಕುಮಾರ್, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು: ಡಿಂಪಲ್ ಸಬಾಸ್ಟಿನ್, ಡಾ. ಎಸ್.ಎಂ. ಪುಟ್ಟಸ್ವಾಮಿ, ಪ್ರೊ. ಬಿ.ಎಸ್. ನಾಗಭೂಷಣ, ಸ್ಥಳ: ಶಾಂತಲಾ ಪಬ್ಲಿಕ್ ಸ್ಕೂಲ್, ಸಿದ್ದಾರ್ಥನಗರ, ಬೆಳಗ್ಗೆ 10.30ಕ್ಕೆ.

■ **ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಜಿಲ್ಲಾಡಳಿತ, ನೆಹರು ಯುವ ಕೇಂದ್ರ ಸಂಘಟನೆ, ಮೈಸೂರು ವಿಶ್ವವಿದ್ಯಾನಿಲಯ :** 14ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** 75-ಸಾಧಕರೊಂದಿಗೆ ಸಂವಾದ, ಅಮೃತೋತ್ಸವದ ಘಮಲು ಸಾಧಕರ ಸಂವಾದದ ಮಜಲು ಒಂದು ಹಿನ್ನೋಟ, ತಿಂಗಳ ಸಾಧಕರು ವಿಜ್ಞಾನ ಸಾಹಿತ್ಯ ಲೇಖಕ ಎಸ್. ರಾಮಪ್ರಸಾದ್, ಉದ್ಘಾಟನೆ : ಅಷ್ಟಾವಧಾನಿ ಕಬ್ಬಿನಾಲೆ ವಸಂತ ಭಾರದ್ವಾಜ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಮುಖ್ಯ ಅತಿಥಿಗಳು: ಪತ್ರಕರ್ತ ರಮೇಶ್ ಐ.ಉತ್ತಪ್ಪ, ರಾಮಸನ್ ಕಲಾ ಪ್ರತಿಷ್ಠಾನ ಕಲಾಪೋಷಕ ಆರ್.ಜಿ. ಸಿಂಗ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿಯ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಗಾನಭಾರತೀ ಅಧ್ಯಕ್ಷೆ ಡಾ. ರಮಾ ವಿ. ಬೆಣ್ಣೂರು, ಪತ್ರಕರ್ತ ರಂಗನಾಥ ಮೈಸೂರು, ಸ್ಥಳ:ಬೊಂಬೆ ಮನೆ ಖ್ಯಾತಿಯ ರಾಮಸನ್ಸ್ ಕಲಾ ಪ್ರತಿಷ್ಠಾನ, ಮೈಸೂರು ಮೃಗಾಲಯದ ಮುಂಭಾಗ, ಬೆಳಗ್ಗೆ 11ಕ್ಕೆ.

■ **ಶ್ರೀ ಶಿವಕುಮಾರಸ್ವಾಮಿಯವರ ಭಕ್ತ ಮಂಡಳಿ ಹಾಗೂ ಭಕ್ತಾದಿಗಳು :** ಶ್ರೀ ಶಿವಕುಮಾರಸ್ವಾಮಿಯವರ 5ನೇ ವರ್ಷದ ಆರಾಧನಾ ಮಹೋತ್ಸವ, ಭಾವಚಿತ್ರದೊಂದಿಗೆ ನಂದಿಕಂಬ, ವೀರಗಾಸೆ, ತಮಟೆ ವಾದ್ಯ, ಪೂಜಾ ಕುಣಿತ, ಡೋಲು ಕುಣಿತ, ಬೊಂಬೆ ಆಟ, ಹುಲಿವೇಷ ಮೆರವಣಿಗೆ, ಮುಖ್ಯ ಅತಿಥಿಗಳು: ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜು, ಮಲ್ಲಿಕಾರ್ಜುನಪ್ಪ, ಯು.ಎಸ್.ಶೇಖರ್, ವರುಣಾ ಮಹೇಶ್, ಪ್ರತಿಧ್ವನಿ ಪ್ರಸಾದ್, ಸದಾನಂದ, ಪ್ರದೀಪ್ ಕುಮಾರ್, ಅಭಿಷೇಕ್, ರೂಪ ಲೋಕೇಶ್, ಜ್ಯೋತಿ ರೇಚಣ್ಣ, ಬಿ.ಎನ್. ಗಿರೀಶ್, ಕಾಪು ಸಿದ್ದಲಿಂಗಸ್ವಾಮಿ, ಎಲ್.ಆರ್. ಮಹದೇವಸ್ವಾಮಿ, ಸ್ಥಳ: 101 ಗಣಪತಿ ದೇವಸ್ಥಾನದ ಹತ್ತಿರ, ಮಧ್ಯಾಹ್ನ 1ಕ್ಕೆ.

■ **ಶ್ರೀ ನಟರಾಜ ಪಬ್ಲಿಕ್ ಸ್ಕೂಲ್ :** ನಟರಾಜೋತ್ಸವ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ. ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಸಮಾರೋಪ ಭಾಷಣ : ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಂಗಣ, ಸಂಜೆ 4ಕ್ಕೆ.

■ **ಮೈಸೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘ:** ಪ್ರತಿಭಾ ಪುರಸ್ಕಾರ ಕಾರ್ಯಕ್ರಮ, ಸ್ಥಳ: ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣ, ಸಂಜೆ 5.30ಕ್ಕೆ.

■ **ರೋಟರಿ ಮೈಸೂರು ರಾಯಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಗ್ರಾಮಾಂತರ ಮಕ್ಕಳ ಸಶಕ್ತತೆಗಾಗಿ ಸಹಾಯಾರ್ಥ ಪ್ರದರ್ಶನ, 'ಇಂಪು ಕಂಪು ತಂಪು', ಗೌರವ ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಪ್ರೊ. ಕೃಷ್ಣೇಗೌಡ, ಪ್ರಾಸ್ತಾವಿಕ ನುಡಿ : ಧರ್ಮೇಂದ್ರ ಕುಮಾರ್, ಮಿಸ್ಟರ್ ಮ್ಯಾಜಿಕ್ ಅವರಿಂದ ಮ್ಯಾಜಿಕ್ ಶೋ, ತ್ರಿವೇಣಿ ನೃತ್ಯ ತಂಡದಿಂದ ನೃತ್ಯ ಪ್ರದರ್ಶನ, ಶಾರದಾ ಕಲಾ ಕೇಂದ್ರದಿಂದ ಲಘು ಸಂಗೀತ, ಸ್ಥಳ: ಕಲಾಮಂದಿರ, ಸಂಜೆ 6ಕ್ಕೆ.

■ **ಗಾನಭಾರತೀ :** ಮೌನಿ ಅಮಾವಾಸ್ಯೆ ವಿಶೇಷ ಕಾರ್ಯಕ್ರಮ, ವಿದ್ವಾನ್ ಬಳ್ಳಾರಿ ರಾಘವೇಂದ್ರ ಅವರಿಂದ ಗಾಯನ, ವಿದುಷಿ ಶ್ರುತಿ ಸಿ.ವಿ.-ವಯೋಲಿನ್, ವಿದ್ವಾನ್ ತುಮಕೂರು ಬಿ. ರವಿಶಂಕರ್-ಮೃದಂಗ, ವಿದ್ವಾನ್ ಎಸ್. ಮಂಜುನಾಥ-ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಸುಮುಖಿ ಸೂರ್ಯ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಎಂ.ಎಸ್.ತ್ಯಾಗರಾಜನ್-ಪಿಟೀಲು, ವಿದ್ವಾನ್ ವಿ.ಎಸ್. ರಮೇಶ್-ಮೃದಂಗ, ಸ್ಥಳ: ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಅಭಿಯಂತರರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** 30ನೇ ವಾರ್ಷಿಕೋತ್ಸವ ಸಂಭ್ರಮದ ಅಂಗವಾಗಿ ರಾಷ್ಟ್ರೀಯ ರಂಗ ಉತ್ಸವ, ಬೆಂಗಳೂರಿನ ರಂಗಾಸ್ಥೆ ಟ್ರಸ್ಟ್ ಕಲಾವಿದರಿಂದ ದ್ರೋಪದಿ ಹೇಳ್ತವ್ಳೆ ನಾಟಕ ಪ್ರದರ್ಶನ, ನಿರ್ದೇಶನ : ಗಣೇಶ್ ಮಂದಾರ್ತಿ, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.


■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ವಿದ್ವಾನ್ ರಾಜಶ್ರೀ ಜೊಸ್ಯೆರ್ ಶ್ರೀಕಾಂತ್ ಅವರಿಂದ ಗಾಯನ, ವಿದ್ವಾನ್ ಪೃಥ್ವಿ ಭಾಸ್ಕರ್-ಪಿಟೀಲು, ವಿದ್ವಾನ್ ಮೈಸೂರು ವಾದಿರಾಜ್-ಮೃದಂಗ, ವಿದ್ವಾನ್ ಶಮಿತ್ ಎಸ್. ಗೌಡ-ಘಟ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಗಾಯತ್ರಿ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6 ರಿಂದ.

■ **ಎಸ್‌ಪಿಎಂ ಪರಮಹಂಸ ಯೋಗ ಮಹಾವಿದ್ಯಾಲಯ:** ರಥಸಪ್ತಮಿ ಪ್ರಯುಕ್ತ ಸೂರ್ಯನಮಸ್ಕಾರ, ಯೋಗ ತರಬೇತಿ, ಸ್ಥಳ: ಮಹಾವಿದ್ಯಾಲಯ ಆವರಣ, ರಾಮಕೃಷ್ಣನಗರ, ಬೆಳಗ್ಗೆ 6 ರಿಂದ.

■ **ಶ್ರೀ ಪತ್ಯಾಂಗೀರಾ ಭಗವತಿ ಯೋಗೇಶ್ವರಿ ದೇವಸ್ಥಾನ:** ವಾರ್ಷಿಕ ಕೋಲ ಉತ್ಸವ, ಬೆಳಗ್ಗೆ 8ಕ್ಕೆ ವಿಶೇಷ ಪೂಜೆ, ಸಂಜೆ 6ಕ್ಕೆ ದೀಪಾರಾಧನೆ, 6.30ಕ್ಕೆ ಭಗವತಿ ವೆಳ್ಳಾಟಂ, ರಾತ್ರಿ 8ಕ್ಕೆ ಕುಟ್ಟಿಚಾತ್ತನ್ ವೆಳ್ಳಾಟಂ, ರಾತ್ರಿ 9ಕ್ಕೆ ಸ್ಮಶಾನಕಾಳಿ ವೆಳ್ಳಾಟಂ, ರಾತ್ರಿ 10ಕ್ಕೆ ನಾಗಕಾಳಿ ವೆಳ್ಳಾಟಂ, ರಾತ್ರಿ 12ಕ್ಕೆ ಗುಳಿಕನ್ ವೆಳ್ಳಾಟಂ (ಕೋಲ), ಸ್ಥಳ: ದೇವಸ್ಥಾನ, ಗದ್ದಿಗೆ ರಸ್ತೆ.

■ **ಚಿನ್ಮಯ ಮಿಷನ್:** ಜ್ಞಾನ ಯಜ್ಞದ ಅಂಗವಾಗಿ ಸ್ವಾಮೀಜಿಯವರಿಂದ "ನಾರದ ಭಕ್ತಿಸೂತ್ರ" ಕುರಿತು ಸಂಜೆ 6:30 ರಿಂದ 8 ಗಂಟೆಯವರೆಗೆ ಕನ್ನಡದಲ್ಲಿ ಪ್ರವಚನ, ಸಂಜೆ 6 ರಿಂದ 6.30 ರವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಚಿನ್ಮಯ ಮಿಷನ್ ಕೇಂದ್ರ ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ.

ಸುತ್ತೂರು ಜಾತ್ರಾ ಮಹೋತ್ಸವ



■ **ಕರ್ತೃ ಗದ್ದುಗೆಯಲ್ಲಿ ಪೂಜಾ ಉತ್ಸವ:** ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ನಾರಿಕೇಳಾಲಂಕಾರ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ಬೆಳಗ್ಗೆ 6.30ಕ್ಕೆ ಬಸವನಪುರ-ಸ್ನೇಹ ಸೌಹಾರ್ದ ಶಾಂತಿ ಪಥಸಂಚಲನ, ಷಟ್‌ಸ್ಥಳ ಧ್ವಜಾರೋಹಣ: ಶ್ರೀ ಸಿದ್ಧರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಧರ್ಮ ಸಂದೇಶ: ಸೋಮವಾರಪೇಟೆ ಶ್ರೀ ಪಟ್ಟದ ಮಠದ ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳು, ಬೆಳಗ್ಗೆ 10.30ಕ್ಕೆ ಶ್ರೀ ನಂಜುಂಡೇಶ್ವರ ದೇವಸ್ಥಾನ ಮಹಾರುದ್ರಾಭಿಷೇಕ, ಸಂಜೆ 6ಕ್ಕೆ ಶ್ರೀ ಮಹದೇಶ್ವರ ಕೊಂಡೋತ್ಸವ, ಸಂಜೆ 6.30ಕ್ಕೆ ಮಹಾರುದ್ರಾಭಿಷೇಕ, ಮಹಾಮಂಗಳಾರತಿ, ರಾತ್ರಿ 8.30ಕ್ಕೆ ಲಕ್ಷ ದೀಪೋತ್ಸವ, ರಾತ್ರಿ 9.30ಕ್ಕೆ ಶ್ರೀ ಮಹದೇಶ್ವರ ಮುತ್ತಿನ ಪಲ್ಲಕ್ಕಿ ಉತ್ಸವ, ಗುರುಬ್ರಹ್ಮೋತ್ಸವ, ಜಂಗಮೋತ್ಸವ.

■ **ಕೃಷಿ ವಿಚಾರ ಸಂಕಿರಣ ಉದ್ಘಾಟನೆ, ವಿಷಯ: ಸಿರಿಧಾನ್ಯಗಳ ಮಹತ್ವ (ಬೆಳಗ್ಗೆ 10.30ಕ್ಕೆ):** ಸಮ್ಮುಖ: ಶ್ರೀ ಕನಕಗುರು ಪೀಠದ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳು, ಶ್ರೀ ಷಡಕ್ಷರಿಮುನಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹಕ ಸಿ.ಆರ್. ಮುಕುಂದ್, ಉದ್ಘಾಟನೆ: ಕೇಂದ್ರ ಕೃಷಿ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಪ್ರಗತಿಪರ ರೈತ ಪ್ರಶಸ್ತಿ ಪ್ರದಾನ : ಸಭಾಪತಿ ಬಸವರಾಜ ಎಸ್.ಹೊರಟ್ಟಿ, ಸಿರಿಧಾನ್ಯ ಐಸಿರಿ ಕೃತಿ ಬಿಡುಗಡೆ: ಕೇರಳ ಕೃಷಿ ಸಚಿವ ಪಿ.ಪ್ರಸಾದ್, ಮುಖ್ಯ ಅತಿಥಿಗಳು: ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್, ಎಸ್3 ಫೌಂಡೇಷನ್ ಸಂಸ್ಥಾಪಕ ಪುರುಷೋತ್ತಮ್, ಡಾ. ವಿ. ವೆಂಕಟಸುಬ್ರಮಣಿಯನ್, ಡಾ. ವಿ. ಹೇಮಲಾ ನಾಯಕ್, ವಿಷಯ ಮಂಡನೆ: ಪ್ರೊ. ರವಿ ಕೋರಿಶೆಟ್ಟರ್, ಹೊನ್ನೂರು ಪ್ರಕಾಶ್, ಎಂ.ಎನ್. ದಿನೇಶ್‌ಕುಮಾರ್.

■ **ಕೃಷಿ ವಿಚಾರ ಸಂಕಿರಣ ಸಮಾರೋಪ ವಿಷಯ: ಸಿರಿಧಾನ್ಯಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ (ಸಂಜೆ 4.30ಕ್ಕೆ** ಸಮ್ಮುಖ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಸಮಾರೋಪ ಭಾಷಣ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮುಖ್ಯ ಅತಿಥಿಗಳು: ಶಾಸಕ ಕೃಷ್ಣ ಭೈರೇಗೌಡ, ಮಾಜಿ ಸಂಸದ ಆರ್.ಧ್ರುವನಾರಾಯಣ್, ಶಾಸಕರಾದ ಸಿ.ಎನ್. ಮಂಜೇಗೌಡ, ಕೆ.ಮಹದೇವ, ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ವಿಷಯ ಮಂಡನೆ: ವಿಜ್ಞಾನಿ ಡಾ.ಬಿ.ಸಿ. ಸಂಗಪ್ಪ, ಡಾ.ಅಶೋಕ್ ಆಲೂರ್, ಮಹೇಶ್ (ತೆಂಕಹಳ್ಳಿ) ಬಸವಣ್ಣ.

■ **ಸಾಂಸ್ಕೃತಿಕ ಕಾರ್ಯಕ್ರಮಗಳು**

■ **ಗದ್ದುಗೆ ಆವರಣ:** ಬೆಳಗ್ಗೆ 8ಕ್ಕೆ ನಾದಸ್ವರ, 9ಕ್ಕೆ ಸುಗಮ ಸಂಗೀತ ಮತ್ತು ವಚನಗಾಯನ: ಕು. ನಿಸರ್ಗ ಮತ್ತು ಕು. ವಿಸ್ಮಯ, ಮ.2ಕ್ಕೆ ಭಕ್ತಿ ಸಂಗೀತ: ಎಂ.ಎಸ್.ಸರ್ವೇಶ್ ಜೈನ್, ಶ್ರವಣಬೆಳಗೊಳ, ರಾತ್ರಿ 7ಕ್ಕೆ ಭರತನಾಟ್ಯ: ವಿದುಷಿ ಪದ್ಮಶ್ರೀ ಎನ್. ಕಶ್ಯಪ್ ಮತ್ತು ತಂಡ, ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಮೈಸೂರು; ರಾತ್ರಿ 8ಕ್ಕೆ ಸುಗಮ ಸಂಗೀತ: ಡಾ.ಸಿ.ಅಶ್ವಥ್ ಬಳಗ, ಬೆಂಗಳೂರು.

■ **ನಾಟಕಗಳು (ರಾತ್ರಿ 10ಕ್ಕೆ)**

■ **ಹಿರಿಯರ ಮನೆ ಆವರಣ:** ಅಲ್ಲಮ ಶರಣ ಸಂದರ್ಶನ: ಶ್ರೀ ಸಿದ್ಧಮಲ್ಲೇಶ್ವರ ಕಲಾಬಳಗ, ಶ್ರೀಸಿದ್ಧಮಲ್ಲೇಶ್ವರ ಮಠ, ಚಾ.ನಗರ.

■ **ಶ್ರೀ ಸಿದ್ದನಂಜ ದೇಶಿಕೇಂದ್ರ ಮಂಗಳ ಮಂಟಪ:** ಶಿವಭಕ್ತ ಚಂಡಾಸುರ: ಶ್ರೀ ಚಾಮುಂಡೇಶ್ವರಿ ಕೃಪಾಪೋಷಿತ ನಾಟಕ ಮಂಡಳಿ, ಮೈಸೂರು.

■ **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ:** ರಾ. 7ಕ್ಕೆ : ಸುಗಮ ಸಂಗೀತ: ಗಂಧರ್ವಗಾನ ತಂಡ, ಸುತ್ತೂರು. ರಾಜಾವಿಕ್ರಮ ಅಥವಾ ಶನಿ ಪ್ರಭಾವ: ಶ್ರೀ ಸೀತಾಳೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಸಬ್ಬನಹಳ್ಳಿ.

■ **ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹದ ಹಿಂಭಾಗ:** ದಕ್ಷಯಜ್ಞ: ಶ್ರೀ ಬಿಳಿಗಿರಿ ರಂಗಸ್ವಾಮಿ ಕಲಾಬಳಗ, ಬೆನಕನಹಳ್ಳಿ, ತಿ.ನರಸೀಪುರ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 21 ಶನಿವಾರ 2023

ಸಂಪುಟ: 43 | ಸಂಚಿಕೆ: 274 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಜೆಡಿಎಸ್ 22 ಸ್ಥಾನ ಗೆದ್ದರೆ ಅದೇ ಹೆಚ್ಚು

● ಸಿದ್ದರಾಮಯ್ಯ ಭವಿಷ್ಯ ● ಚಾಮುಂಡೇಶ್ವರಿಯ ಸ್ವಾಭಿಮಾನಿ ಪಡೆ ಕಾಂಗ್ರೆಸ್ ಸೇರ್ಪಡೆ; ಕಾರ್ಯಕರ್ತರ ಬೃಹತ್ ಸಮಾವೇಶದಲ್ಲಿ ಘೋಷಣೆ

ಮೈಸೂರು, ಜ.20(ಆರ್‌ಕೆಬಿ)– ಪ್ರತಿ ಚುನಾವಣೆಯಲ್ಲೂ ಗೆಲುವಿನ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳುತ್ತಾ ಬಂದಿರುವ ಜೆಡಿಎಸ್ ಈ ಬಾರಿ ಎಷ್ಟು ಮಂದಿ ಗೆಲ್ಲುತ್ತಾರೋ ಗೊತ್ತಿಲ್ಲ. ಆದರೆ ಕುಮಾರಸ್ವಾಮಿ 140 ಸ್ಥಾನ ಗೆಲ್ಲುವುದಾಗಿ ಹೇಳುತ್ತಿದ್ದಾರೆ. ಈ ಬಾರಿ ಅವರು 22 ಸ್ಥಾನಗಳಲ್ಲಿ ಗೆದ್ದರೆ ಅದೇ ಹೆಚ್ಚು. ಯಾವ ಪಕ್ಷ ಗೆಲ್ಲುತ್ತದೆಂಬೋ ಅವರಿಗೆ ನನಗೆ ಮುಖ್ಯಮಂತ್ರಿ ಸ್ಥಾನ ಕೊಟ್ಟರೆ ನಾವು ಬರುತ್ತೇವೆ ಎಂದು ಹೇಳುತ್ತಾ ಗೆದ್ದವರ ಬಾಲ ಹಿಡಿಯುವ ಕೆಲಸ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಹೊರವಲಯದ ಇಲವಾಲ ಹೋಬಳಿ ಲಿಂಗದೇವರ ಕೊಪ್ಪಲು ಕೆಐಎಡಿಬಿ ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ 'ಸ್ವಾಭಿಮಾನಿ ಪಡೆ ಕಾಂಗ್ರೆಸ್ ಸೇರ್ಪಡೆ' ಹಾಗೂ ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಇದು ಸೇಡಿನ ರಾಜಕಾರಣ ಅಲ್ಲ. ನಾವು ಜೆಡಿಎಸ್ ಮುಖ್ಯಮಂತ್ರಿ ಮಾಡಿದ್ದೆವು. 80 ಜನ ಶಾಸಕರಿದ್ದ ನಾವು ಕೇವಲ 37 ಶಾಸಕರಿದ್ದ ಜೆಡಿಎಸ್‌ಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟೆವು. ▶ 9ನೇ ಪುಟಕ್ಕೆ



ಜೆಡಿಎಸ್, ಬಿಜೆಪಿ ಒಳ ಒಪ್ಪಂದ ಮಾಡಿಕೊಂಡರೂ ಚಾಮುಂಡೇಶ್ವರಿಯಲ್ಲಿ ಕಾಂಗ್ರೆಸ್ ಗೆಲುವು ಶತಸಿದ್ಧ

ಮೈಸೂರು, ಜ.20(ಆರ್‌ಕೆಬಿ)– ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ನಿಜವೋ, ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಅಷ್ಟೇ ಸತ್ಯ. ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಕಾಂಗ್ರೆಸ್ ಗೆದ್ದೇ ಗೆಲ್ಲುತ್ತದೆ ಎಂದು ಸಿದ್ದರಾಮಯ್ಯ ಭವಿಷ್ಯ ನುಡಿದರು.

'ಸ್ವಾಭಿಮಾನಿ ಪಡೆ ಕಾಂಗ್ರೆಸ್ ಸೇರ್ಪಡೆ' ಹಾಗೂ ಕಾಂಗ್ರೆಸ್ ಪಕ್ಷದ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮತ್ತೆ ನಿಲ್ಲಬಾರದು ಅಂತೇನಿಲ್ಲ. 2009ರಿಂದ 2018ರವರೆಗೆ 10 ವರ್ಷಗಳ ಅಂತರವಾದ್ದರಿಂದ ನಾನು ನಮ್ಮೂರಿನ ಬಾಂಧವ್ಯದಿಂದಾಗಿ ವರುಣಾದಿಂದ ಸ್ಪರ್ಧೆ ಮಾಡಬೇಕಾಯಿತು. ಹೀಗಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಗ್ಗಟ್ಟಾಗಿ ಬಿಜೆಪಿಯಿಂದ ಗ್ರಾಮ ಪಂಚಾಯಿತಿಯನ್ನೂ ಗೆಲ್ಲದ ಗಿರಾಕಿಯೊಬ್ಬನನ್ನು ನಿಲ್ಲಿಸಿದರು. ಬಿಜೆಪಿ ಮತವೆಲ್ಲವನ್ನೂ ಜೆಡಿಎಸ್‌ಗೆ ಹಾಕಿದ್ದಾರೆ. ಹಾಗಾಗಿ ಜೆಡಿಎಸ್ ಗೆದ್ದಿತ್ತು. ಈ ಬಾರಿ ಹಾಗಾಗುವುದಿಲ್ಲ. ▶ 9ನೇ ಪುಟಕ್ಕೆ



ಸುತ್ತೂರಲ್ಲಿ ವಿಜೃಂಭಣೆಯ ಶ್ರೀಶಿವರಾತ್ರೀಶ್ವರರ ರಥೋತ್ಸವ

ನಂಜನಗೂಡು, ಜ.20– ಸುತ್ತೂರು ಜಾತ್ರೆ ಹಿನ್ನೆಲೆಯಲ್ಲಿ ಶುಕ್ರವಾರ ನಡೆದ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರರ ರಥೋತ್ಸವ ಲಕ್ಷಾಂತರ ಭಕ್ತರ ಜಯಘೋಷ, ಹರ್ಷೋದ್ಗಾರಗಳ ನಡುವೆ ವಿಜೃಂಭಣೆಯಿಂದ ನೆರವೇರಿತು.


ರಥೋತ್ಸವ ಅಂಗವಾಗಿ ಕರ್ತೃ ಗದ್ದುಗೆಯಲ್ಲಿ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವ ಮೂರ್ತಿಗೆ ರುದ್ರಾಭಿಷೇಕ ಮತ್ತು ವಿವಿಧ ಧಾರ್ಮಿಕ ಕೈಂಕರ್ಯ ನೆರವೇರಿಸಿದ ಬಳಿಕ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ 21 ಕುಶಲತೋಪು ಹಾರಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ಮತ್ತು ನಾಡಿನ ವಿವಿಧ ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಬೆಳಗ್ಗೆ 10.45ಕ್ಕೆ ಶ್ರೀಕರ್ತೃ ಗದ್ದುಗೆ ಮುಂಭಾಗದಿಂದ ಹೊರಟ ರಥೋತ್ಸವ ರಾಜ ಬೀದಿಗಳಲ್ಲಿ ಸಾಗಿ ಊರಿನೊಳಗೆ ದೊಡ್ಡಮ್ಮತಾಯಿ ದೇವಸ್ಥಾನದ ವೃತ್ತ ತಲುಪಿ ನಂತರ ಸ್ವಸ್ಥಾನಕ್ಕೆ ತಲುಪಿತು.

ಶ್ರೀಮಠದ ಸಕಲ ಬಿರುದಾವಳಿಗಳ ಸಮೇತ ನಂದಿಧ್ವಜ, ಛತ್ರಿಚಾಮರ, ಸೂರಪಾನಿ, ಗಾರುಡಿ ಗೊಂಬೆ, ಮರಗಾಲು ನೃತ್ಯ, ವೀರಗಾಸೆ, ಡೊಳ್ಳು ಹಾಗೂ ಪೂಜಾ ಕುಣಿತ, ಕರಡಿಮೇಳ, ನಾದಸ್ವರ, ಜಾಂಜ್ ಮೇಳ, ಕೊರವಂಜಿ ಕೋಲಾಟ, ಹುಲಿವೇಷಧಾರಿಗಳೊಂದಿಗೆ ವಿವಿಧ ಜಾನಪದ ಕಲಾತಂಡಗಳು ರಥೋತ್ಸವಕ್ಕೆ ಮೆರಗು ನೀಡಿದವು. ಭಕ್ತರ ಉತ್ಸಾಹ ಮತ್ತು ಭಾವಾವೇಶ ಉತ್ತುಂಗಕ್ಕೇರಿ ಜಯ ಶಿವರಾತ್ರೀಶ್ವರ ಎಂಬ ಘೋಷಣೆಗಳು ಮುಗಿಲು ಮುಟ್ಟಿದವು. ದೊಡ್ಡ ರಥ ಮತ್ತು ಚಿಕ್ಕ ರಥಗಳಲ್ಲಿ ಉತ್ಸವಮೂರ್ತಿ ಪ್ರತಿಷ್ಠಾಪಿಸಿ, ರಥಗಳಿಗೆ ಕಳಶಾರೋಹಣ, ಫಲಪುಷ್ಪ ಅಲಂಕಾರ ಹಾಗೂ ವರ್ಣಾಲಂಕಾರ ಬಟ್ಟೆಗಳಿಂದ ರಥವನ್ನು ಸಿಂಗರಿಸಲಾಗಿತ್ತು. ಚಿಕ್ಕ ರಥ ಮತ್ತು ದೊಡ್ಡರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದಾಗ ರಸ್ತೆಯ ಎರಡು ಬದಿಗಳಲ್ಲಿ ಭಕ್ತರು ನಿಂತು ಹಣ್ಣು-ಜವನ ಎಸೆದು ಇಷ್ಟಾರ್ಥ ಈಡೇರಿಸುವಂತೆ ಪ್ರಾರ್ಥಿಸಿದರು.

ರಥೋತ್ಸವದಲ್ಲಿ ಲಕ್ಷಾಂತರ ಭಕ್ತರು ಭಾಗ ವಹಿಸಿದ್ದರು. ರಾಜ್ಯ ಮತ್ತು ಹೊರ ರಾಜ್ಯದ ವಿವಿಧ ಜಾನಪದ ಕಲಾ ಪ್ರಕಾರಗಳು ಸೇರಿದಂತೆ 38 ತಂಡಗಳು ಭಾಗವಹಿಸಿದ್ದವು. ರಥೋತ್ಸವ ವೀಕ್ಷಿಸಲು ಸಾಗೋರೋಪದಿಯಲ್ಲಿ ಭಕ್ತರು ಆಗಮಿಸಿದ ಹಿನ್ನಲೆಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಕೋಲಾರದಲ್ಲಿ ಸಿದ್ದರಾಮಯ್ಯ ಪರ ಪ್ರಚಾರ ಮಾಡುವೆ...

ಬೆಂಗಳೂರು, ಜ.20 (ಕೆಎಂಶಿ)–



ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಪರ ಕೋಲಾರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಚಾರ ಮಾಡುವುದಾಗಿ ಬಿಜೆಪಿಯ ಹಿರಿಯ ನಾಯಕ ಹಾಗೂ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಇಂದಿಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ಕೋಲಾರದಲ್ಲಿ ಗೆಲ್ಲುತ್ತಾರೆ. ನಾವು ಕೂಡ ಅವರ ಪರ ಪ್ರಚಾರ ಮಾಡುತ್ತೇವೆ ಎಂದರು.

ಇಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದೇನೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿಪಕ್ಷ ನಾಯಕ ಸಿದ್ದರಾಮಯ್ಯರನ್ನೂ ಭೇಟಿ ಮಾಡಿದ್ದೇನೆ. ನಾನು ಕಾಂಗ್ರೆಸ್‌ಗೆ ಬೆಂಬಲ ಕೊಡುತ್ತೇನೆ. ಇದು ಕಾಂಗ್ರೆಸ್ ಪಕ್ಷ ಸೇರ್ಪಡೆಯಲ್ಲ.

ನಾನು ಸ್ವತಂತ್ರ. ಯಾವುದೇ ಪಕ್ಷಕ್ಕೆ ಸೇರಿದವನಲ್ಲ. ನಾನು ಕಾಂಗ್ರೆಸ್‌ಗೆ ಬೆಂಬಲ ನೀಡುತ್ತೇನೆ ಎಂದು ತಿಳಿಸಿದರು. ಕಾಂಗ್ರೆಸ್ ಸೇರ್ಪಡೆ ಬಗ್ಗೆ ಮಾತನಾಡಿದ ಅವರು, ನನ್ನ ಮನೆಗೆ ವಾಪಸ್ ಹೋಗುವುದಕ್ಕೆ ಏನಿದೆ. ಯಾವುದೇ ಷರತ್ತುಗಳಿಲ್ಲ. ನಾನು ಪಕ್ಷ ಬಿಡುವಾಗ ತಿಳಿಸಿಯೇ ಹೋಗುತ್ತೇನೆ ಎಂದರು.

ಫೆ.10ರಿಂದ ವಿಧಾನಮಂಡಲ ಜಂಟಿ ಅಧಿವೇಶನ: ಫೆ.17ಕ್ಕೆ ಬಜೆಟ್

ಬೆಂಗಳೂರು, ಜ.20 (ಕೆಎಂಶಿ)–ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ಫೆಬ್ರವರಿ 10 ರಿಂದ ಆರಂಭವಾಗಲಿದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಫೆಬ್ರವರಿ 17ರಂದು ಮುಂಗಡ ಪತ್ರ ಮಂಡಿಸಲಿದ್ದಾರೆ. ಇಂದಿಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಮೊದಲ ದಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲ ಥಾವರ ಚಂದ್ ಗೆಹ್ಲೋಟ್ ಮಾತನಾಡಲಿದ್ದಾರೆ ಎಂದರು. ಫೆಬ್ರವರಿ 16ರವರೆಗೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ನಡೆಯಲಿದ್ದು ಸರ್ಕಾರ ಉತ್ತರ ನೀಡಿದ ನಂತರ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡಲಿದ್ದಾರೆ. ಅಧಿವೇಶನವನ್ನು ಎಷ್ಟು ದಿನಗಳ ಕಾಲ ನಡೆಸಬೇಕು ಎಂಬ ಕುರಿತು ಸರ್ಕಾರ ತೀರ್ಮಾನ ಕೈಗೊಂಡಿಲ್ಲ ಎಂದು ಹೇಳಿದರು.

ಕಾಂಗ್ರೆಸ್‌ನ 'ಪ್ರಜಾಧ್ವನಿ' ಬಸ್ ಯಾತ್ರೆಗೆ ಪ್ರತಿಯಾಗಿ ಬಿಜೆಪಿ ರಾಜ್ಯಾದ್ಯಂತ 'ರಥಯಾತ್ರೆ'

ಬಿಜೆಪಿ ಹಿರಿಯ ಮುಖಂಡರ ಸಭೆ ನಿರ್ಧಾರ



ಬೆಂಗಳೂರು, ಜ. 20– ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಡೆಸುತ್ತಿರುವ 'ಪ್ರಜಾಧ್ವನಿ' ಬಸ್ ಯಾತ್ರೆಗೆ ಪ್ರತಿಯಾಗಿ ಬಿಜೆಪಿ, ರಾಜ್ಯದ ನಾಲ್ಕು ದಿಕ್ಕುಗಳಿಂದ ರಥಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ.

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಬಿಜೆಪಿ ಹಿರಿಯ ನಾಯಕರ ಪ್ರಾಥಮಿಕ ಸಭೆಯಲ್ಲಿ ವಿಧಾನಸಭೆ ಚುನಾವಣೆ ತಯಾರಿ ಬಗ್ಗೆ ಮಹತ್ವದ ಚರ್ಚೆಗಳು ನಡೆದಿದ್ದು, ನಾಲ್ಕು ದಿಕ್ಕಿನಿಂದ ರಥಯಾತ್ರೆ ಜೊತೆಗೆ 'ವಿಜಯಸಂಕಲ್ಪ' ಅಭಿಯಾನವನ್ನೂ ಕೂಡ ಮುಂದುವರೆಸಲು ತೀರ್ಮಾನಿಸಲಾಗಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚುನಾವಣೆಗೆ ಪೂರಕವಾಗಿ ರಾಜ್ಯ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸಲು ರಾಜ್ಯದ 4 ದಿಕ್ಕುಗಳಿಂದ ರಥಯಾತ್ರೆ ಕೈಗೊಳ್ಳಲು ಪಕ್ಷದ ಪ್ರಮುಖರ ಪ್ರಾಥಮಿಕ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಯಾತ್ರೆಯ ದಿನಾಂಕವನ್ನು ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದರು. ಈ ಸಭೆಯಲ್ಲಿ ಪಕ್ಷದ ಸಂಘಟನೆ, ದೆಹಲಿ ನಾಯಕರ ಕಾರ್ಯಕ್ರಮಗಳ ಬಗ್ಗೆಯೂ ಚರ್ಚಿಸಲಾಗಿದೆ. ಯಾವ ನಾಯಕರು ಎಲ್ಲಿ, ▶ 9ನೇ ಪುಟಕ್ಕೆ

ರಾಜ್ಯದ ಆಯ್ದ ಶಾಲೆಗಳಲ್ಲಿ ಫೆಬ್ರವರಿಯಲ್ಲಿ ಎನ್‌ಇಪಿ ಜಾರಿಗೆ



ಬೆಂಗಳೂರು, ಜ. 20–ರಾಜ್ಯಾದ್ಯಂತ ಸುಮಾರು 400ರಿಂದ 500 ಆಯ್ದ ಶಾಲೆಗಳಲ್ಲಿ ಫೆಬ್ರವರಿ ಆರಂಭದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೆ ತರಲಾಗುವುದು ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ. ಇದು ಅಂಗನವಾಡಿ ಮತ್ತು ನರ್ಸರಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಅಲ್ಲಿ ಶಿಕ್ಷಕರು ಎನ್‌ಇಪಿಯಲ್ಲಿ ಉಲ್ಲೇಖಿಸಿರುವಂತೆ ಹೆಚ್ಚು ಚಟುವಟಿಕೆ ಆಧರಿತ ಮತ್ತು ಕ್ರೀಡಾ ಕಲಿಕೆಗೆ ಮಕ್ಕಳನ್ನು ಬದಲಿಸುತ್ತಾರೆ. ಪ್ರಸ್ತುತ ಪಠ್ಯಕ್ರಮದಲ್ಲಿ ಅಗತ್ಯ ಬದಲಾವಣೆಗಳನ್ನು ಶಿಕ್ಷಣ ಇಲಾಖೆಯು ಅಂತಿಮಗೊಳಿಸುತ್ತದೆ. ಇದು ಇಸಿಸಿಇ ಆಗಿರುವುದರಿಂದ ಕಿರಿಯ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳಿಲ್ಲದ ಕಾರಣ ಬದಲಾವಣೆಗಳು ಪಠ್ಯಕ್ರಮ ಮತ್ತು ಶಿಕ್ಷಕರ ಬೋಧನಾ ವಿಧಾನಕ್ಕೆ ಸೀಮಿತವಾಗಿದೆ ಎಂದು ಸಚಿವರು ಹೇಳಿದರು.

ಮ್ಯಾನ್ಯುಯಲ್ ಕಲ್ಲುಗಣಿ ಗುತ್ತಿಗೆದಾರರಿಗೆ ಮರು ಹೊಂದಾಣಿಕೆಗೆ ಅವಕಾಶ

● ಸಂಪುಟ ಸಭೆ ನಿರ್ಧಾರ ● ಅನುಮತಿ ಪಡೆದ ಜಾಗದ ಬದಲು ಬೇರೆಡೆ ಗಣಿಗಾರಿಕೆ ಮಾಡಿದರೆ ಅದಕ್ಕೆ ಅವಕಾಶ ನೀಡಲು ಸಮ್ಮತಿ

ಬೆಂಗಳೂರು, ಜ.20 (ಕೆಎಂಶಿ)–



ವಿಧಾನಸಭಾ ಚುನಾವಣೆ ಸಮೀಪವಾಗುತ್ತಿದ್ದಂತೆ ಕಲ್ಲುಗಣಿ ಗುತ್ತಿಗೆದಾರರಿಗೆ ರಾಜ್ಯ ಸರ್ಕಾರ ಬಂಪರ್ ಕೊಡುಗೆ ನೀಡಿದೆ.

ಇಂದಿಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಮ್ಯಾನ್ಯುಯಲ್ ಆಗಿ ಕಲ್ಲು ಕ್ವಾರಿ ನಡೆಸುವವರು ಮೂಲ ಗುತ್ತಿಗೆ ಪ್ರದೇಶವನ್ನು ಬಿಟ್ಟು ಬೇರೆ ಕಡೆ ಕ್ವಾರಿ ನಡೆಸುತ್ತಿದ್ದರೆ, ಆ ಪ್ರದೇಶವನ್ನು ಮರು ಹೊಂದಾಣಿಕೆ ಮಾಡಲು ಸಭೆ ಒಪ್ಪಿಗೆ ನೀಡಿದೆ ಎಂದರು.

ಮ್ಯಾನ್ಯುಯಲ್ ಆಗಿ ಕಲ್ಲು ಕ್ವಾರಿ ಮಾಡುವವರು ತಮಗೆ ಗುತ್ತಿಗೆ ಮಂಜೂರಾದ ಪ್ರದೇಶವನ್ನು ಬಿಟ್ಟು ಆಕಸ್ಮಿಕವಾಗಿ ಗೊತ್ತಿಲ್ಲದೆ ಪಕ್ಕದಲ್ಲಿ ಕ್ವಾರಿ ನಡೆಸಿದರೆ ಅಂಥ ಪ್ರದೇಶವನ್ನು ಮರು ಹೊಂದಾಣಿಕೆ ಮಾಡಲು ತೀರ್ಮಾನಿಸಲಾಗಿದೆ. ▶ 6ನೇ ಪುಟಕ್ಕೆ

ತಿ.ನರಸೀಪುರದಲ್ಲಿ ಚಿರತೆಗೆ ಮತ್ತೊಂದು ಬಲಿ

● ಸೌದೆ ತರಲು ಮನೆಯ ಹಿತ್ತಲಿಗೆ ಹೋದ ವೃದ್ಧೆ ಮೇಲೆ ದಾಳಿ ● ಈ ಹಿಂದೆ ಇಬ್ಬರು ಬಲಿಯಾಗಿದ್ದರು ● ಗ್ರಾಮಸ್ಥರಲ್ಲಿ ಮತ್ತೆ ಚಿರತೆ ಭೀತಿ

ತಿ.ನರಸೀಪುರ, ಜ.20(ಎಸ್‌ಕೆ)– ಚಿರತೆ ದಾಳಿಗೆ ವೃದ್ಧೆಯೊಬ್ಬರು ಬಲಿಯಾಗಿದ್ದಾರೆ. ತಾಲೂಕಿನ ಕನ್ನನಾಯಕನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಂಜೆ ಘಟನೆ ನಡೆದಿದೆ. ಇದರೊಂದಿಗೆ ತಾಲೂಕಿನಲ್ಲಿ ಚಿರತೆಗಳ ಅಟ್ಟಹಾಸಕ್ಕೆ ಮೂವರು ಬಲಿಯಾದಂತಾಗಿದೆ.

ಗ್ರಾಮದ ನಿವಾಸಿ ನಿಂಗರಾಜು ಎಂಬುವರ ಪತ್ನಿ ಸಿದ್ದಮ್ಮ(60)ಚಿರತೆಗೆ ಈಗ ಬಲಿಯಾಗಿದ್ದಾರೆ. ಈಕೆ ಇಂದು ಸಂಜೆ 6 ಗಂಟೆ ಸಮಯದಲ್ಲಿ ಮನೆ



ಹಿತ್ತಲಿನಲ್ಲಿ ಸೌದೆ ತರಲು ಹೋದ ವೇಳೆ ಚಿರತೆ ದಾಳಿ ನಡೆಸಿ ಮುಖ ಸೇರಿದಂತೆ ಸಿಕ್ಕ ಸಿಕ್ಕ ಕಡೆ ಕಚ್ಚಿ ಗಾಯಗೊಳಿಸಿದೆ. ಇದರಿಂದ ಗಾಬರಿಗೊಂಡ ಸಿದ್ದಮ್ಮ ಸಹಾಯಕ್ಕಾಗಿ ಕೂಗಿಕೊಂಡರಾದರೂ, ಅಕ್ಕಪಕ್ಕದ ಜನರು ಆಗಮಿಸುವಷ್ಟರಲ್ಲಿ ಸಿದ್ದಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದರು ಎನ್ನಲಾಗಿದೆ. ಈ ವೇಳೆ ಚಿರತೆ ದೇಹವನ್ನು ಎಳೆದೊಯ್ಯಲು ಯತ್ನಿಸಿದ್ದು ಗ್ರಾಮಸ್ಥರ ಕಂಡು ಅಲ್ಲೇ ಬಿಟ್ಟು ▶ 9ನೇ ಪುಟಕ್ಕೆ

ರೈತರಿಗೆ ನಿತ್ಯ 7 ಗಂಟೆ ವಿದ್ಯುತ್: ಉಚಿತ ವಿದ್ಯುತ್ ನೀಡುವ ಪ್ರಶ್ನೆಯೇ ಇಲ್ಲ

ಎಸ್ಕಾಂಗಳ ಖಾಸಗೀಕರಣ ಇಲ್ಲ: ಇಂಧನ ಸಚಿವ ಸುನೀಲ್‌ಕುಮಾರ್

ಮೈಸೂರು, ಜ.20(ಆರ್‌ಕೆ)– ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ನಿತ್ಯ 7 ಗಂಟೆ ನಿರಂತರ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ತಿಳಿಸಿದ್ದಾರೆ

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ಆಯೋಜಿಸಿದ್ದ ಸಮಾರಂಭದಲ್ಲಿ ಕೆಪಿಟಿಸಿಎಲ್ ಮತ್ತು ಸೆಸ್ಕ್‌ನ ಸುಮಾರು 100 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಿದ್ದ ಅವರು, ನಮ್ಮ ಸರ್ಕಾರದಲ್ಲಿ ರೈತರಿಗೆ ದಿನಕ್ಕೆ 7 ಗಂಟೆ ವಿದ್ಯುತ್ ನೀಡುವ ಮೂಲಕ ಕೃಷಿಗೆ ಪ್ರೋತ್ಸಾಹ ನೀಡಲಾಗುವುದು ಎಂದರು. ಲೋಡ್‌ಶೆಡ್ಡಿಂಗ್ ಇಲ್ಲದಂತೆ ಎಸ್ಕಾಂಗಳು ರೈತರು, ಗ್ರಾಹಕರು, ಕೈಗಾರಿಕೆಗಳಿಗೆ ಗುಣಾತ್ಮಕ ವಿದ್ಯುತ್ ಪೂರೈಸಲಿವೆ. ರಾಜ್ಯಾದ್ಯಂತ 4,25,000 ಹೊಸ ಐಪಿ ಸೆಟ್ ಅಳವಡಿಸುವ ಮೂಲಕ ತಡೆರಹಿತ ವಿದ್ಯುತ್ ಸರಬ ರಾಜು ಮಾಡಲಾಗುತ್ತಿದ್ದು, ನಿಗಮವು ಜನಸ್ನೇಹಿಯಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಅವರು ನುಡಿದರು.

ಎಸ್ಕಾಂಗಳ ಖಾಸಗೀಕರಣ ಇಲ್ಲ: ಈ ಹಿಂದಿನ ಸರ್ಕಾರದಲ್ಲಿ ದುಸ್ಥಿತಿಯಲ್ಲಿದ್ದ



ಇಂಧನ ಇಲಾಖೆಯನ್ನು ಬಿಜೆಪಿ ಸರ್ಕಾರ ಸದೃಢಗೊಳಿಸಿದೆ. 16,000 ಕೋಟಿ ರೂ. ಸಬ್ಸಿಡಿ ನೀಡಿದರೂ, ಎಸ್ಕಾಂಗಳನ್ನು ಲಾಭದಾಯಕದತ್ತ ಕೊಂಡೊಯ್ಯಲಾಗುತ್ತಿದೆ. ಹುಬ್ಬಳ್ಳಿ ನಿಗಮವು 30,000 ಕೋಟಿ ನಷ್ಟದಲ್ಲಿದ್ದಾಗ ಮುಖ್ಯಮಂತ್ರಿಗಳು 9,000 ಕೋಟಿ ರೂ. ಸಾಲ ತೀರಿಸಿದರು. ಈಗ ನಿಗಮಗಳನ್ನು ಬಲಪಡಿಸಲಾಗಿದ್ದು, ಖಾಸಗೀಕರಣಗೊಳಿಸುವ ಮಾತೇ ಇಲ್ಲ ಎಂದು ಸಚಿವ ಸುನಿಲ್‌ಕುಮಾರ್ ಸ್ಪಷ್ಟಪಡಿಸಿದರು.


ಉಚಿತ ವಿದ್ಯುತ್ ನೀಡಲ್ಲ: ಕೇವಲ ಚುನಾವಣೆಗಾಗಿ ಪ್ರತಿಪಕ್ಷದವರು ಉಚಿತ ವಿದ್ಯುತ್ ನೀಡುವುದಾಗಿ ಆಶ್ವಾಸನೆ ನೀಡಿ ಅಧಿಕಾರ ಹಿಡಿಯಲೆತ್ನಿಸುತ್ತಿದ್ದು, ಜನರನ್ನು ದಿಕ್ಕು ತಪ್ಪಿಸುತ್ತಿವೆ. ಆದರೆ, ನಮ್ಮ ಸರ್ಕಾರ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಸಲಿದೆಯೇ ಹೊರತು, ಉಚಿತವಾಗಿ ನೀಡುವುದಿಲ್ಲ ಎಂದು ಅವರು ತಿಳಿಸಿದರು.

ಉಪಕೇಂದ್ರಗಳ ಉನ್ನತೀಕರಣ: ರಾಜ್ಯಾದ್ಯಂತ ಎಲ್ಲಾ ಎಸ್ಕಾಂಗಳ ವ್ಯಾಪ್ತಿಯಲ್ಲಿ 294 ವಿದ್ಯುತ್ ಉಪಕೇಂದ್ರಗಳನ್ನು ಉನ್ನತೀ ಕರಣಗೊಳಿಸಿದ್ದು 50 ಹೊಸ ಕೇಂದ್ರಗಳನ್ನು ಒಂದೂವರೆ ವರ್ಷದಲ್ಲಿ ಸ್ಥಾಪಿಸಲಾಗಿದೆ. ಉತ್ತರ ಕರ್ನಾಟಕ ಭಾಗದಲ್ಲೂ 41 ಉಪ ಕೇಂದ್ರಗಳನ್ನು ನಿರ್ಮಿಸಿ, ಅಲ್ಲಿನ ವಿದ್ಯುತ್ ಕೊರತೆ ನೀಗಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಬೆಳಕು ಯೋಜನೆ: ವಿದ್ಯುತ್ ಸಂಪರ್ಕ ಪಡೆಯಲು ಜನರಿಂದ ▶ 9ನೇ ಪುಟಕ್ಕೆ

ಹೆದ್ದಾರಿಗಳಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್

ಮೈಸೂರು, ಜ.20(ಆರ್‌ಕೆ)–ಎಲೆಕ್ಟ್ರಿಕ್ ವಾಹನಗಳ ಬಳಕೆ ಜಾಸ್ತಿಯಾಗುತ್ತಿರುವುದರಿಂದ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುವುದು ಎಂದು ಇಂಧನ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸೆಸ್ಕ್ ಆಯೋಜಿಸಿದ್ದ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಮೈಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿ ಪೂರ್ಣಗೊಂಡಿರುವುದರಿಂದ ಆ ಮಾರ್ಗದಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಿದರೆ ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿ ಚಾರ್ಜ್ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ಮಾಡಿದ ಪ್ರಸ್ತಾಪಕ್ಕೆ ತಮ್ಮ ಸರದಿ ಬಂದಾಗ ಪ್ರತಿಕ್ರಿಯಿಸಿದ ಸಚಿವರು, ಹೈವೇ ಪ್ರಾಧಿಕಾರದ ಅಧಿಕಾರಿಗಳು ಸೆಸ್ಕ್ ಇಂಜಿನಿಯರ್‌ಗಳೊಂದಿಗೆ ಸಭೆ ನಡೆಸಿ ಸ್ಥಳ ಗುರುತಿಸಿದರೆ ನಾವು ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುತ್ತೇವೆ ಎಂದರು.

ಅದೇ ರೀತಿ ರಾಜ್ಯದಾದ್ಯಂತ ಎಲ್ಲಾ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿಯೂ ಇವಿ ಚಾರ್ಜಿಂಗ್ ಘಟಕ ಸೌಲಭ್ಯ ಒದಗಿಸಲು ಇಲಾಖೆ ಸಿದ್ಧವಿದೆ. ಆ ಮೂಲಕ ಹಸಿರು ವಿದ್ಯುತ್ (Green Electric) ವಾಹನಗಳಿಗೆ ಉತ್ತೇಜನ ನೀಡಲಾಗುವುದು ಎಂದು ಸಚಿವರು ನುಡಿದರು. ರೂಫ್ ಟಾಪ್‌ನಲ್ಲಿ ಸೋಲಾರ್ ವಿದ್ಯುತ್ ಉಪಕರಣ ಅಳವಡಿಸಿಕೊಳ್ಳುವ ಗ್ರಾಹಕರಿಗೆ ವಿಳಂಬ ಮಾಡದೇ ಅನುಮತಿ ನೀಡುವ ಜೊತೆಗೆ ಸಬ್ಸಿಡಿ ಹಣವನ್ನೂ ಬಿಡುಗಡೆ ಮಾಡಿ ಪ್ರೋತ್ಸಾಹಿಸಲಾಗುವುದು ಎಂದು ಸುನೀಲ್ ಕುಮಾರ್ ಇದೇ ವೇಳೆ ಭರವಸೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಪ್ರಪಂಚದ ಅತೀ ಪ್ರಾಚೀನವಾದ ಪ್ರಾಣಿ ಯಾವುದು?
ವಿದ್ಯಾರ್ಥಿ : ಜೀಬ್ರಾ
ಟೀಚರ್ : ಅದು ಹೇಗೆ?
ವಿದ್ಯಾರ್ಥಿ : ಅದಿನ್ನೂ ಬ್ಲಾಕ್ ಅಂಡ್ ವೈಟ್ ಇದೆಯಲ್ಲ. ಹೀಗಾಗಿ ಅದು ಪುರಾತನ ಪ್ರಾಣಿ

ಮೈಸೂರು ಮಿತ್ರ

ಶನಿವಾರ, 21 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತನಗೆ ತೋರಿದ್ದೇ ಸರಿಯಾದ ದಾರಿ ಇರಬಹುದು. ಆದರೆ ಅದು ತನ್ನ ಹೊರತು ಇನ್ನೂ ಹತ್ತು ಜನಕ್ಕೆ ಸರಿಯಾಗಿ ಕಂಡಿರಬೇಕು. –ವಿ.ಎಂ. ಇನಾಂದಾರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಳು ಕೂಡಿದರೆ ಕಣಜ

ನಿಮ್ಮ ಪತ್ರಗಳು

ರಾಮಸ್ವಾಮಿ ಸರ್ಕಲ್ ಬಸ್ ಪ್ರಯಾಣಿಕರ ತಂಗುದಾಣದ ದುರಾವಸ್ಥೆ

ಮಾನ್ಯರೆ,

ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ಹೊಸದಾಗಿ ಬಸ್ ಪ್ರಯಾಣಿಕರ ತಂಗುದಾಣ ನಿರ್ಮಿಸಲು, ಅದನ್ನು ಉದ್ಘಾಟನೆ ಮಾಡಲು ನಾ ಮುಂದು, ತಾ ಮುಂದು, ನಾನು ಮಾಡಿದ್ದು, ನೀನು ಮಾಡಿದ್ದು ಎಂದು ಹೊಸ ಹೊಸ ಬಸ್ ತಂಗುದಾಣಗಳನ್ನು ನಿರ್ಮಿಸುತ್ತಾರೆ. ಇದಕ್ಕಾಗಿ ಬೈದಾಡುತ್ತಾರೆ. ಉದ್ಘಾಟನೆ ಮಾಡುವಾಗ ಇರುವ ಸಂಭ್ರಮ ಆಮೇಲೆ ಇರುವುದಿಲ್ಲ. ಆದರೆ ಮೈಸೂರಿನ ಹೃದಯ ಭಾಗದಲ್ಲಿರುವ



ರಾಮಸ್ವಾಮಿ ಸರ್ಕಲ್‌ನ ಎಸ್‌ಸಿವಿಡಿಎಸ್ ವಿದ್ಯಾರ್ಥಿನಿಲಯದ ಪಕ್ಕದ ಬಸ್ ಪ್ರಯಾಣಿಕರ ತಂಗುದಾಣ ಕೊಳೆತು ನಾರುತ್ತಿದೆ. ಸರಿಯಾದ ಕುಳಿತುಕೊಳ್ಳುವ ಸರಿಯಾದ ವ್ಯವಸ್ಥೆ ಇಲ್ಲ. ಪ್ರತಿದಿನವೂ ಸಾವಿರಾರು ವಿದ್ಯಾರ್ಥಿಗಳು, ವೃದ್ಧರು, ಮಹಿಳೆಯರು, ಈ ಬಸ್ ಪ್ರಯಾಣಿಕರ ತಂಗುದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿರುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ರಾಜಕಾರಣಿಗಳು ಮೊದಲು ಇಂತಹವುಗಳನ್ನು ಮೈಸೂರಿನ ನಗರದಲ್ಲಿ ಗುರುತಿಸಿ ಸ್ವಚ್ಛಗೊಳಿಸಿ ಸರಿಪಡಿಸಿ ಎಂಬುದು ನನ್ನ ಮನವಿ.

–ಮೈಕ್ ಪ್ರಕಾಶ್, ಪ್ರಚಾರಕ, ಸ್ವಚ್ಛ ಭಾರತದ ಅಭಿಮಾನಿ

ಉಚಿತ ಕೊಡುಗೆಗಳು, 18ನೇ ವಯಸ್ಸಿಗೆ ಮದ್ಯ ಖರೀದಿ ಬೇಡ

ಮಾನ್ಯರೆ,

ಚುನಾವಣೆ ಸಮೀಪಿಸುತ್ತಿದ್ದಂತೆ ಎಲ್ಲಾ ಪಕ್ಷಗಳೂ ಉಚಿತ ಕೊಡುಗೆಗಳು, ಸಾಲ ಮನ್ನಾ ಬಗ್ಗೆ ಭರವಸೆ ನೀಡುತ್ತಿವೆ. ಇದೂ ನಿಜಕ್ಕೂ ಸಮಾಜಕ್ಕೆ ಮಾರಕ ಹಾಗೂ ಅಭಿವೃದ್ಧಿಗೆ ಕಂಟಕ. ಇದರ ಬದಲು ಇರುವ ಸರ್ಕಾರಿ ಶಾಲೆ, ಕಾಲೇಜುಗಳ ಮೂಲಕ ಕೈಗೆಟುಕುವ ದರದಲ್ಲಿ ಉತ್ತಮವಾದ ಶಿಕ್ಷಣ ನೀಡುವ ಭರವಸೆ ನೀಡಲಿ. ಸರ್ಕಾರಿ ಆಸ್ಪತ್ರೆಗಳ ಮೂಲಕ ಕೈಗೆಟುಕುವ ದರದಲ್ಲಿ ಉತ್ತಮವಾದ ಚಿಕಿತ್ಸೆ ದೊರೆಯುವ ವ್ಯವಸ್ಥೆ ಮಾಡಲಿ. ಸರಿಯಾಗಿ ಸಾಲ ಮರುಪಾವತಿ ಮಾಡಿದವರಿಗೆ ಮಾತ್ರ ಬಡ್ಡಿ ರಿಯಾಯಿತಿ ಸಿಗುವ ಹಾಗೆ ಮಾಡಲಿ. ದುಡಿಯುವ ಕೈಗಳಿಗೆ ಕೈ ತುಂಬಾ ಕೆಲಸ ಸಿಗುವ ಹಾಗೆ ನೋಡಿಕೊಳ್ಳಲಿ. ಇಷ್ಟು ಮಾಡಿದರೆ ಯಾರಿಗೂ ಯಾವುದೇ ಉಚಿತ ಕೊಡುಗೆಗಳು ಬೇಡವಾಗುತ್ತದೆ. ಮತ್ತೆ ಆರೋಗ್ಯಕರ ಸಮಾಜ ನಿರ್ಮಾಣ ಆಗುತ್ತದೆ.

ಇತ್ತೀಚೆಗೆ ಸರ್ಕಾರ ಮದ್ಯ ಖರೀದಿಸುವ ವಯಸ್ಸು 18ಕ್ಕೆ ಇಳಿಸಲು ಯೋಚಿಸುತ್ತಿದೆ. ಇದೂ ಕೂಡ ತಪ್ಪು ನಿರ್ಧಾರ. ಆಗಷ್ಟೇ ವಿದ್ಯಾಭ್ಯಾಸ ಮಾಡುತ್ತಿರುವ, ಮುಗಿಸುವ ಸಮಯ. ಆ ಸಮಯದಲ್ಲಿ ಅವರು ಹೊಸ ಉದ್ಯೋಗ ಅಥವಾ ಬಿಸಿನೆಸ್ ಮಾಡುವ ಬಗ್ಗೆ ಹಾಗೂ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಯೋಚಿಸುವ ಸಮಯ. ಹೀಗೆ ಮಾಡಿದರೆ ಕುಡಿಯೋದೇ ನನ್ನ 'ಬಿಸಿನೆಸ್' ಎಂದುಕೊಂಡು ತಮ್ಮ ಭವಿಷ್ಯ ಹಾಳುಮಾಡಿಕೊಳ್ಳುವ ಎಲ್ಲಾ ಅಪಾಯವಿದೆ. ಈ ನಿಟ್ಟಿನಲ್ಲಿ ಒಮ್ಮೆ ಯೋಚಿಸಲಿ.

–ರಾಘವೇಂದ್ರ ಜೋಯಿಸ್, ಮೈಸೂರು

ಚುನಾವಣೆ ಸಮೀಪವಾದಾಗ ಇನ್ನೇನೇನು ಕೇಳಬೇಕೋ

ಮಾನ್ಯರೇ,

ಕಾಂಗ್ರೆಸ್ ನಾಯಕಿ ಪ್ರಿಯಾಂಕ ವಾದ್ರಾ ಅವರು ರಾಜ್ಯಕ್ಕೆ ಬಂದು ಹೋದ ಮೇಲೆ ಅಧಿಕಾರಕ್ಕೆ ಬಂದೇ ಬಿಟ್ಟೆವೆಂದು ಆ ಪಕ್ಷದ ಅಧ್ಯಕ್ಷರು ಹಾಗೂ ವಿರೋಧ ಪಕ್ಷದ ನಾಯಕರು ಅಂದುಕೊಂಡಂತಿದೆ. ಅದಕ್ಕೆ ಇಂಬು ಕೊಡುವಂತೆ ಇಬ್ಬರೂ ನಾಯಕರು ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನವೇ ಬಿಜೆಪಿ ಆಡಳಿತದ ಎಲ್ಲಾ ವಿಚಾರಗಳನ್ನೂ ಮರು ತನಿಖೆ ನಡೆಸುತ್ತೇವೆ ಎಂದು ಹೇಳಿರುವುದು ಅವರ ಪ್ರಕಾರವೇ ದ್ವೇಷದ ರಾಜಕಾರಣಕ್ಕೆ ದಾರಿ ಮಾಡಿಕೊಟ್ಟಂತೆ ಅಲ್ಲವೇ ಅಥವಾ ಚುನಾವಣಾ ಪೂರ್ವದಲ್ಲೇ ಅದನ್ನು ಹೇಳಿ ಗೆದ್ದರೆ ಆ ನಡವಳಿಕೆಗೆ ಮತದಾರನ ಟಸ್ಸೇ ಬಿದ್ದು ಒಪ್ಪಿಗೆ ಕೊಟ್ಟಂತೆಯೇ ಎಂಬುದನ್ನು ಈ ನಾಯಕರು ದೃಢಪಡಿಸಬೇಕಾಗಿದೆ.


ರಾಜಕೀಯದಲ್ಲಿ ನೈತಿಕತೆ, ಒಳ್ಳೆಯ ಮಾತಿಗೆ ಬೆಲೆಯೇ ಇಲ್ಲದ ಈ ಸಂದರ್ಭದಲ್ಲಿ (ಹರಿಪ್ರಸಾದ್ ವೈಶ್ಯೆ ಎಂದಿರುವುದು, ಶಿವಕುಮಾರ್, ಯತ್ನಾಳ್ ಪಿಂಪ್ ಎಂದಿರುವುದು, ಸಿ.ಟಿ.ರವಿ ಘರ್ವಾಲಿ ಎಂದಿರುವುದು) ಎಲ್ಲಿಗೆ ಮುಟ್ಟುತ್ತಿದೆ ಇವರ ರಾಜಕೀಯ ಪ್ರಜ್ಞೆ, ಇನ್ನು ಚುನಾವಣೆ ಸಮೀಪವಾದಾಗ ಇನ್ನೇನೇನು ಕೇಳಬೇಕೋ... ಅಲ್ಲವೇ

–ಶಿವಮೊಗ್ಗ ನಾ. ದಿನೇಶ್ ಅಡಿಗ ಮೈಸೂರು

ರಸ್ತೆ ಡಾಂಬರೀಕರಣಗೊಳಿಸಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಹೊಸಹಳ್ಳಿ ಗ್ರಾಮದಿಂದ ಬಿಸನಕುಪ್ಪೆ ಗ್ರಾಮದ ಮಾರ್ಗವಾಗಿ ತಿರುಮಲಾಪುರಕ್ಕೆ ಹೋಗುವ ರಸ್ತೆಯ ಡಾಂಬರನ್ನು ಕಳೆದ ಮೂರು ತಿಂಗಳ ಹಿಂದೆ ನಿರ್ವಹಣೆ ನೆಪದಲ್ಲಿ ಕಳಪೆ ಕಾಮಗಾರಿ ಮಾಡಿ ಗುತ್ತಿಗೆದಾರ ಕಿತ್ತುಹಾಕಿ ಡಾಂಬರು ಹಾಕದೆ ಹಾಗೆಯೇ ಬಿಟ್ಟು ಹೋಗಿದ್ದಾರೆ. ಇದರಿಂದ ನಿತ್ಯವೂ ಧೂಳಿನಲ್ಲೇ ಸಾರ್ವಜನಿಕರು ಬೈಲುಕುಪ್ಪೆಗೆ ಸಂಚರಿಸಬೇಕು. ಸಾರ್ವಜನಿಕರಿಗೆ ತೊಂದರೆ ಯಾಗುತ್ತಿದ್ದು, ಸಂಬಂಧಪಟ್ಟ ಪಿಎಂಜಿಸಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ದುರಸ್ತಿಪಡಿಸುವಂತೆ ಮನವಿ ಮಾಡುತ್ತೇನೆ.



–ದಿನೇಶ್‌ಗೌಡ, ತಾಲೂಕು ರೈತ ಸಂಘದ ಅಧ್ಯಕ್ಷ, ಬೆಟ್ಟದಪುರ.

'ಮಿತ್ರ'ನ ಫಲಶ್ರುತಿ

ಮಾನ್ಯರೆ,

ಇತ್ತೀಚೆಗೆ 'ಮೈಸೂರು ಮಿತ್ರ'ದಲ್ಲಿ ಮೈಸೂರು ನಗರ ಬಸ್ ದಿನದ ಪಾಸ್ ದರವನ್ನು ರೂ. 80 ರಿಂದ ಹಳೆಯ ದರ ರೂ. 60ಕ್ಕೆ ಇಳಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಮನವಿ ಪತ್ರ ಬರೆದಿದ್ದೆವು. ಪತ್ರವನ್ನು ಓದಿದ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಳೆಯ ದರ ರೂ. 60ಕ್ಕೆ ಇಳಿಸಿದ್ದಾರೆ. ಮೈಸೂರು ಮಿತ್ರನಿಗೆ ಹಾಗೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಧನ್ಯವಾದಗಳು.

–ಮೈಸೂರು ನಗರ ನೊಂದ ಪ್ರಯಾಣಿಕರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಬಲಾಢ್ಯವಾಗುತ್ತಿರುವ ಭಾರತೀಯ ನೌಕಾಪಡೆ



2013ರಲ್ಲಿ ಚೀನಿ ಅತಿಕ್ರಮಣ ಮತ್ತು ಗಡಿ ಸುರಕ್ಷೆ ಹಾಗೂ ರಕ್ಷಾ ಸನ್ನದ್ಧತೆ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯುತ್ತಿತ್ತು. ಆಗ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದಲ್ಲಿ ರಕ್ಷಣಾ ಸಚಿವರಾಗಿದ್ದ ಎ.ಕೆ. ಆಂಟನಿಯವರು ಸದಸ್ಯರ ಪ್ರಶ್ನೆಗಳಿಗೆ ದೇಶ ಆತಂಕ ಪಡುವಂತೆ ಈ ರೀತಿ ಉತ್ತರ ನೀಡಿದ್ದರು. ಗಡಿಯಲ್ಲಿ ಚೀನಾ ಭಾರೀ ಪ್ರಮಾಣದಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಿದೆ.

ನಮ್ಮ ಸರಕಾರದ ಗಡಿ ರಕ್ಷಾ ಸಂಬಂಧಿ ನಿರ್ಧರಿತ ನೀತಿಯು `Best Defence is Don't develop the Border, Undeveloped Border is more safe than developed Border' ಎಂಬ ಹೇಳಿಕೆ ನೀಡಿದ್ದರು. ಆಂಟನಿ ಪ್ರಕಾರ ಮನೆ ಸುರಕ್ಷಿತವಾಗಿರಬೇಕಾದರೆ ಅದಕ್ಕೆ ಬಾಗಿಲುಗಳಾಗಲೀ ಆವರಣ ಗೋಡೆಯಾಗಲಿ ಇರಬಾರದು ಎನ್ನುವಂತಿತ್ತು. 2014ರಲ್ಲಿ ಆಂಟನಿಯವರು ದೇಶಕ್ಕೆ ಅತ್ಯಂತ ತುರ್ತು ಅವಶ್ಯಕತೆಯಾಗಿದ್ದ ಬಹು ಉದ್ದೇಶಿತ ಯುದ್ಧ ವಿಮಾನ ಖರೀದಿಸಲು ಸರಕಾರದ ಬಳಿ ಹಣವಿಲ್ಲ ಎಂದರು. ಅದೇ ರೀತಿ ಅಮೆರಿಕದಿಂದ 22 ದಾಳಿ ಹೆಲಿಕಾಪ್ಟರ್ ಹಾಗೂ 15 ಕಾರ್ಗೋ ಹೆಲಿಕಾಪ್ಟರ್ ಖರೀದಿ ಬಗ್ಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿದ್ದರು. ಹಣವಿಲ್ಲ ಎಂಬ ಕಾರಣ ನೀಡಿ ಖರೀದಿಸಲಿಲ್ಲ. ಈ ರೀತಿ ಯುಪಿಎ ಸರಕಾರ ದೇಶದ ರಕ್ಷಣೆ ಸಂಬಂಧ ಕ್ಷಮೆಗೆ ಅರ್ಹವಲ್ಲದ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯ ತಾಳಿತ್ತು. ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಲ್ಲದೇ ಸೇನೆ ಕಳೆಗುಂದಿತ್ತು. ಗಡಿ ಪರಿಸ್ಥಿತಿ ಅತ್ಯಂತ ನಾಜೂಕಾಗಿತ್ತು. ಅಕಸ್ಮಾತ್ ಯುದ್ಧ ನಡೆದಲ್ಲಿ ಸೇನೆ ಬಳಿ ಕೇವಲ ಒಂದು ವಾರಕ್ಕೆ ಸಾಕಾಗುವಷ್ಟು ಮಾತ್ರ ಶಸ್ತ್ರಾಸ್ತ್ರಗಳಿದ್ದವು.

ಈ ರೀತಿ ಯುಪಿಎ ಸರಕಾರದ ಅವಧಿಯಲ್ಲಿ ನಿರಂತರವಾಗಿ ನಿರ್ಲಕ್ಷ್ಯಕ್ಕೆ ಬಲಿಯಾಗಿದ್ದ ಭಾರತದ ರಕ್ಷಣಾ ಕ್ಷೇತ್ರಕ್ಕೆ ಮೋದಿ ಸರಕಾರ ಹೊಸ ಶಕ್ತಿ, ಚೈತನ್ಯ ನೀಡಲಾರಂಭಿಸಿತು. ಭಾರತದ ರಕ್ಷಣಾ ಕ್ಷೇತ್ರವಿಂದು ಪಾರಿವಾಳದಂತೆ ಅಪಾಯದೆದುರು ಕಣ್ಮುಚ್ಚುವ ಬದಲು ರಣಹದ್ದುವಿನಂತೆ ಪ್ರತ್ಯಾಕ್ರಮಣ ಮಾಡುವಷ್ಟು ಬಲಿಷ್ಠವಾಗಿದೆ. ರಕ್ಷಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂರು ಮಹತ್ವದ ವಿದ್ಯಮಾನಗಳು ಕಳೆದ ತಿಂಗಳು ಘಟಿಸಿದವು. ದೇಶದ ನೌಕಾಪಡೆಗೆ ಸ್ವದೇಶಿ ನಿರ್ಮಿತ ವಿಧ್ವಂಸಕ ಯುದ್ಧ ನೌಕೆ ಐಎನ್‌ಎಸ್ ಮರ್ಮಗೋವಾ ಹಾಗೂ ಸಬ್ ಮೆರೀನ್ (ಜಲಾಂತರ್ಗಾಮಿ) ಐಎನ್‌ಎಸ್ ವಗೀರ್ ನೌಕಾಪಡೆಗೆ ಹಸ್ತಾಂತರಿಸಲಾಯಿತು. ಖಂಡಾಂತರ ಬ್ಯಾಲಿಸ್ಟಿಕ್ ಕ್ಷಿಪಣಿ ಅಗ್ನಿ–5ರ ಸಫಲ ಪರೀಕ್ಷಣೆಯು ನಡೆಯಿತು.

ಕಳೆದ ಡಿಸೆಂಬರ್ 18 ರಂದು ಈವರೆಗಿನ ಅತ್ಯಂತ ಘಾತಕ ಯುದ್ಧನೌಕೆ ಎನಿಸಿರುವ ಐಎನ್‌ಎಸ್ ಮರ್ಮಗೋವಾ ಹಾಗೂ ಡಿಸೆಂಬರ್ 20 ರಂದು ಸಾಗರದಾಳದಲ್ಲಿ ಕಾರ್ಯಾಚರಿಸುವ ಸ್ಕಾರ್ಪಿನ್ ವಿನ್ಯಾಸದ ಐದನೇ ಸಬ್‌ಮೆರಿನ್‌ಗೆ ಐಎನ್‌ಎಸ್ ವಗೀರ್ ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಯಿತು. ಈ ಎರಡು ಭಿನ್ನ ಕಾರ್ಯಶೈಲಿಯ ಸಾಧನಗಳು ಹಿಂದು ಮಹಾಸಾಗರದಲ್ಲಿ ಭಾರತೀಯ ನೌಕಾಪಡೆಯ ಸಾಮರ್ಥ್ಯ ವೃದ್ಧಿಸಲಿದೆ. ಹಿಂದು ಮಹಾಸಾಗರದಲ್ಲಿ ಹೆಚ್ಚುತ್ತಿರುವ ಚೀನಾ ಉಪಸ್ಥಿತಿಯನ್ನು ನಿಯಂತ್ರಿಸಲು ಸಾಧ್ಯವಾಗಲಿದೆ.

ಐಎನ್‌ಎಸ್ ಮರ್ಮಗೋವಾ ಹೆಸರು ಯಾಕಾಗಿ?

ಐಎನ್‌ಎಸ್ ಮರ್ಮಗೋವಾ ನಿರ್ಮಾಣ ದಿ. 17.9.2016ರಲ್ಲಿ ಪ್ರಾರಂಭವಾಯಿತು. ಪೋರ್ಚುಗೀಸ್‌ರ ಆಳ್ವಿಕೆಯಿಂದ ಗೋವಾ ಮುಕ್ತಿ ಪಡೆದು, 2021ರಲ್ಲಿ ಅರವತ್ತು ವರ್ಷಗಳಾದ ನಿಮಿತ್ತ ದಿ. 19.12.2021 ರಂದು ಸಂಭ್ರಮದ 60ನೇ ವರ್ಷಾಚರಣೆ ಆಚರಿಸಲಾಯಿತು. ಈ ಐತಿಹಾಸಿಕ ವರ್ಷದ ಸ್ಮರಣಾರ್ಥ ಹಾಗೂ ಮೊದಲ ಬಾರಿಗೆ ಈ ಯುದ್ಧ ನೌಕೆ ಪರೀಕ್ಷಾರ್ಥ ಕಡಲಿಗಿಳಿದ ನಿಮಿತ್ತ ಮರ್ಮಗೋವಾ ಹೆಸರಿಡಲಾಯಿತು. 7400 ಟನ್ ತೂಕವಿರುವ ಮರ್ಮಗೋವಾ ನಾಲ್ಕು ಶಕ್ತಿಶಾಲಿ ಗ್ಯಾಸ್‌ಟರ್ಬೈನ್ ಹೊಂದಿದ್ದು, ಗಂಟೆಗೆ 55 ಕಿ.ಮೀ. ವೇಗದಲ್ಲಿ ಚಲಿಸುತ್ತದೆ. ಪ್ರಾಜೆಕ್ಟರ್ 15 ಬಿಲಿಯನ್ ಯೋಜನೆಯನ್ವಯ ನಿರ್ಮಾಣವಾಗಿರುವ ಕ್ಷಿಪಣಿ ನಾಶಕ ನೌಕೆಗಳಲ್ಲಿ ಮರ್ಮಗೋವಾ ಎರಡನೇಯದಾಗಿದೆ. ಇದೇ ಮಾದರಿಯ ಇನ್ನೂ ಮೂರು ಯುದ್ಧ ನೌಕೆಗಳು ಮುಂದಿನ ದಿನಗಳಲ್ಲಿ ಭಾರತೀಯ ನೌಕಾಪಡೆ ಸೇರಲಿವೆ. ಐಎನ್‌ಎಸ್ ಮರ್ಮಗೋವಾ 163 ಮೀ. ಉದ್ದ, 17 ಮೀ. ಎತ್ತರವಿದ್ದು, 300 ನೌಕಾ ಸೈನಿಕರು ಹಾಗೂ 50 ಅಧಿಕಾರಿಗಳಿರುತ್ತಾರೆ. 75 ಸಾವಿರ ಚ.ಕಿ.ಮೀ. ವಿಸ್ತಾರದ ಸಮುದ್ರ ಕ್ಷೇತ್ರದಲ್ಲಿ ಕಾವಲು ಕಾರ್ಯವ್ಯಾಪ್ತಿ ಹೊಂದಿದೆ. ಮರ್ಮಗೋವಾ ವಿನ್ಯಾಸವನ್ನು ವಾರ್‌ಶಿಪ್ ಡಿಸೈನ್ ಬ್ಯುರೋ ರೂಪಿಸಿದ್ದು, ಮುಂಬೈನ ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿ.ನಿಂದ ನೌಕೆಯ ನಿರ್ಮಾಣವಾಗಿದೆ.

ಘಾತಕ ಸಮರ ನೌಕೆ ಮರ್ಮಗೋವಾದ ವಿಶೇಷತೆ

ಸ್ವದೇಶಿ ನಿರ್ಮಿತ ಮರ್ಮಗೋವಾ ಅನೇಕ ವಿಶೇಷತೆಗಳನ್ನು ಹೊಂದಿದೆ. ವೈರಿಗಳ ರಾಡಾರ್‌ಗಳಿಗೆ ಗೋಚರವಾಗದಂತೆ ಹಾಗೂ ಶತ್ರುಗಳು ಪ್ರಯೋಗಿಸುವ ಕ್ಷಿಪಣಿಗಳ ದಿಕ್ಕು ತಪ್ಪಿಸುವಂತಹ ವಿಶೇಷ ಉಕ್ಕಿನಿಂದ ಈ ನೌಕೆಯ ಹೊರಮೈ ನಿರ್ಮಿಸಲಾಗಿದೆ. ಪರಮಾಣು, ಜೈವಿಕ ಹಾಗೂ ರಾಸಾಯನಿಕ ಶಸ್ತ್ರಗಳಿಂದಲೂ ಈ ನೌಕೆಗೆ ಹಾನಿಯಾಗುವುದಿಲ್ಲ. ದೂರ ಸಂವೇದಿ ತಂತ್ರಜ್ಞಾನ ಹೊಂದಿರುವ ಅತ್ಯಾಧುನಿಕ ಕಣ್ಗಾವಲು ರಾಡಾರ್ ವ್ಯವಸ್ಥೆ ಹೊಂದಿದೆ. ನೌಕೆಯಿಂದ ನೌಕೆಗೆ ಹಾಗೂ ಆಗಸಕ್ಕೆ ಮಧ್ಯಮ ದೂರ ವ್ಯಾಪ್ತಿಯಲ್ಲಿ ಹೊಡೆಯುವ ಅತ್ಯಾಧುನಿಕ ನಿರ್ದೇಶಿತ ಕ್ಷಿಪಣಿ ವ್ಯವಸ್ಥೆ ಈ ನೌಕೆಯಲ್ಲಿದೆ. ಶೇ. 75 ರಷ್ಟು ದೇಶೀಯವಾಗಿ ನಿರ್ಮಾಣವಾಗಿರುವ ಈ ನೌಕೆಯು ಅತೀ ಹೆಚ್ಚು ಸ್ವದೇಶಿ ನಿರ್ಮಿತ ಶಸ್ತ್ರಗಳಿಂದ ಸನ್ನದ್ಧವಾಗಿದೆ. ಇದರಲ್ಲಿರುವ ದೂರ ಸಂವೇದಿ ವ್ಯವಸ್ಥೆಯು ಆಗಸದಿಂದ ಬರುವ ಅಪಾಯಗಳನ್ನು ನೂರಾರು ಕಿ.ಮೀ. ದೂರದಲ್ಲಿರುವಾಗಲೇ ಪತ್ತೆ ಹೆಚ್ಚಿ ನಾಶಪಡಿಸುವುದು. ಈ ನೌಕೆಯಲ್ಲಿ ಜೋಡಿಸಲಾಗುವ ಅಗ್ನಿ–5 ಕ್ಷಿಪಣಿ ಏಕಕಾಲದಲ್ಲಿ ವೈರಿಗಳ ಅನೇಕ ನೆಲೆಗಳನ್ನು ನಾಶಪಡಿಸುವುದು ಹಾಗೂ ಎಂಟು ಬ್ರಹ್ಮೋಸ್ ಅಥವಾ ಬರಾಕ್ ಕ್ಷಿಪಣಿಗಳನ್ನು ನಿಯೋಜಿಸುವ ಅವಕಾಶವಿದೆ. 127 ಎಂಎಂ ಗನ್ ಮತ್ತು ಎಕೆ 630 ಕ್ಷಿಪಣಿ ವಿರೋಧಿ ವ್ಯವಸ್ಥೆಗಳಿಂದ ಸುಸಜ್ಜಿತವಾಗಿದ್ದು, ವೈರಿ ಯುದ್ಧ ವಿಮಾನಗಳನ್ನು 70 ಕಿ.ಮೀ. ದೂರದಿಂದ ಮತ್ತು ಸಾಗರ ಅಥವಾ ಭೂಮಿಯಲ್ಲಿರುವ ಗುರಿಗಳನ್ನು 300 ಕಿ.ಮೀ. ದೂರದಿಂದಲೇ ನಾಶಪಡಿಸುವುದು. ಎರಡು ರಾಕೆಟ್ ಲಾಂಚರ್ ಮತ್ತು ಟಾರ್ಪಿಡೊ ಲಾಂಚರ್‌ಗಳಿದ್ದು ಶತ್ರು ಜಲಾಂತರಗಾಮಿಗಳನ್ನು ನಾಶಪಡಿಸುವುದು. ಪ್ರತಿಕೂಲ ಹವಾಮಾನದಲ್ಲೂ ಹೆಲಿಕಾಪ್ಟರ್‌ಗಳು ಮರ್ಮಗೋವಾ ಮೇಲೆ ಯಾವುದೇ ಸಮಸ್ಯೆಗಳಿಲ್ಲದೇ ಇಳಿಯಬಹುದು. ಐಎನ್‌ಎಸ್ ಮರ್ಮಗೋವಾ ಭಾರತದ ಕರಾವಳಿಯ ಭದ್ರತೆಯನ್ನು ಇನ್ನಷ್ಟು ಸದೃಢಗೊಳಿಸಲಿದೆ.

> ಭಾರತೀಯ ನೌಕಾ ಪಡೆ ನೀಡಿದ ಮಾಹಿತಿಯಂತೆ ಆತ್ಮನಿರ್ಭರ ಭಾರತ ಯೋಜನೆಯನ್ವಯ ಮರ್ಮಗೋವಾ ಅಲ್ಲದೇ ಇನ್ನೂ 44 ಯುದ್ಧ ನೌಕೆಗಳು, 42 ಸಬ್ ಮೆರೀನ್‌ಗಳು ಭಾರತದ ಶಿಪ್‌ಯಾರ್ಡ್‌ಗಳಲ್ಲಿ ನಿರ್ಮಾಣವಾಗುತ್ತಿವೆ. ಇವುಗಳಲ್ಲದೆ 7500 ಕಿ.ಮೀ. ಉದ್ದವಿರುವ ಭಾರತದ ಕಡಲ ತಟದ ರಕ್ಷಣೆಗೆ ಇನ್ನೂ ಹೆಚ್ಚುವರಿಯಾಗಿ ಅವಶ್ಯವಿರುವ 55 ಯುದ್ಧ ನೌಕೆ ಹಾಗೂ ಸಬ್ ಮೆರೀನ್‌ಗಳು ನಿರ್ಮಾಣವಾಗಲಿವೆ. ಐಎನ್‌ಎಸ್ ಮರ್ಮಗೋವಾ ವರ್ಗದ ಇನ್ನೂ ನಾಲ್ಕು ಯುದ್ಧ ನೌಕೆಗಳು ವಿಶಾಖಪಟ್ಟಂ, ಮರ್ಮಗೋವಾ, ಇಂಫಾಲ್ ಹಾಗೂ ಸೂರತ್ ಶಿಪ್‌ಯಾರ್ಡ್‌ಗಳಲ್ಲಿ ನಿರ್ಮಾಣವಾಗುತ್ತಿವೆ. ಉತ್ಕೃಷ್ಟ ಗುಣಮಟ್ಟ ಹಾಗೂ ಸಾಮರ್ಥ್ಯದ ಯುದ್ಧ ನೌಕೆಗಳ ನಿರ್ಮಾಣ ಕ್ಷೇತ್ರದಲ್ಲಿ ಭಾರತವಿಂದು ಜಗತ್ತಿನ ಪ್ರಬಲ ರಾಷ್ಟ್ರಗಳಿಗೆ ಪ್ರಬಲ ಸ್ಪರ್ಧೆ ನೀಡುತ್ತಿದೆ.

ಐಎನ್‌ಎಸ್ ವಗೀರ್ ಸಬ್ ಮೆರೀನ್

ಐಎನ್‌ಎಸ್ ವಗೀರ್ ಕಲ್ವರಿ ಶ್ರೇಣಿಯ ಡೀಸೆಲ್–ವಿದ್ಯುತ್ ಚಾಲಿತ ಐದನೇ ಜಲಾಂತರಗಾಮಿಯಾಗಿದೆ. ಪ್ರಾಜೆಕ್ಟರ್ 75ರನ್ವಯ ಫ್ರಾನ್ಸ್ ಮತ್ತು ಮೆ. ನೇವಲ್ ಗ್ರೂಪ್ ಸಹಯೋಗದಲ್ಲಿ ಸ್ಕಾರ್ಪಿನ್ ವಿನ್ಯಾಸದ ಆರು ಸಬ್ ಮೆರೀನ್‌ಗಳು ಮುಂಬೈನ ಮಜಗಾಂವ್ ಹಡಗು ಕಟ್ಟೆಯಲ್ಲಿ ನಿರ್ಮಾಣವಾಗುತ್ತಿವೆ. ಈಗಾಗಲೇ ಈ ಶ್ರೇಣಿಯ ಐಎನ್‌ಎಸ್ ಕಲ್ವರಿ 2017 ರಲ್ಲಿ, ಐಎನ್‌ಎಸ್ ಖಂಡೇರಿ 2019 ರಲ್ಲಿ ಐಎನ್‌ಎಸ್ ಕರಂಜ, 2021 ರಲ್ಲಿ, ನಾಲ್ಕನೇಯ ಐಎನ್‌ಎಸ್ ವೇಲಾ 2021 ರಲ್ಲಿ ಹಾಗೂ ಈ ಶ್ರೇಣಿಯ ಕೊನೆಯ ಮತ್ತು ಆರನೇ ಸಬ್ ಮೆರೀನ್ ಐಎನ್‌ಎಸ್ ವಾಗ್‌ಶೀರ್‌ನ ಪರೀಕ್ಷೆ ನಡೆಯುತ್ತಿದ್ದು, ಈ ವರ್ಷಾಂತ್ಯಕ್ಕೆ ನೌಕಾಪಡೆಗೆ ಸೇರ್ಪಡೆಯಾಗಲಿದೆ. ಕಳೆದ ಡಿಸೆಂಬರ್ 20 ರಂದು ನೌಕಾಪಡೆಗೆ ಸೇರ್ಪಡೆಯಾದ ಐಎನ್‌ಎಸ್ ವಗೀರ್ ನೀರಿನ ಮೇಲ್ಮೈಯಲ್ಲಿ ಪ್ರತಿ ಗಂಟೆಗೆ 20 ಕಿ.ಮೀ. ವೇಗದಲ್ಲಿ ಮತ್ತು ನೀರೊಳಗೆ ಪ್ರತಿ ಗಂಟೆಗೆ 37 ಕಿ.ಮೀ. ವೇಗದಲ್ಲಿ 15 ರಿಂದ 30 ಸಾವಿರ ಕಿ.ಮೀ. ನಿರಂತರ ಚಲಿಸುವ ಸಾಮರ್ಥ್ಯ ಹೊಂದಿದೆ. ಸಾಗರ ಗರ್ಭದೊಳಗೆ 350 ಮೀಟರ್ ಆಳದವರೆಗೆ ಇಳಿಯುವ ಶಕ್ತಿ ಹೊಂದಿದ್ದು, ನಿರಂತರ 50 ದಿನಗಳ ಕಾಲ ಸಾಗರದೊಳಗೆ ಅಡಗಿಕೊಳ್ಳುವ ಸಾಮರ್ಥ್ಯ ಪಡೆದಿದೆ.

ಐಎನ್‌ಎಸ್ ವಗೀರ್‌ನಲ್ಲಿರುವ ಟಾರ್ಪೆಡೊಗಳು ಸಾಗರದಲ್ಲಿರುವ ಶತ್ರುಗಳ ಸಬ್ ಮೆರೀನ್ ಮತ್ತು ಸಮುದ್ರದಲ್ಲಿ ಚಲಿಸುವ ನೌಕೆಗಳನ್ನು ನಾಶ ಮಾಡುತ್ತದೆ. ಈ ಸಬ್ ಮೆರೀನ್‌ಗಳು ನೀರೊಳಗಿಂದ ಕ್ಷಿಪಣಿ ಪ್ರಯೋಗಿಸುವ ವಿಶೇಷ ತಂತ್ರಜ್ಞಾನ ಹೊಂದಿದ್ದು ಗೂಢಚರ್ಯೆ ಮಾಡುವಲ್ಲೂ ಸಕ್ಷಮವಾಗಿದೆ.

221 ಅಡಿ ಅಗಲ, 20 ಅಡಿ ಎತ್ತರ ಹಾಗೂ 40 ಅಡಿ ಉದ್ದವಿರುವ ಈ ಸಬ್ ಮೆರೀನ್‌ನಲ್ಲಿ 35 ನೌಕಾ ಸೈನಿಕರು ಹಾಗೂ ಎಂಟು ಅಧಿಕಾರಿಗಳಿರುತ್ತಾರೆ. ಮುಂದಿನ ದಿನಗಳಲ್ಲಿ ಸಬ್ ಮೆರೀನ್‌ಗಳು ಸಾಗರದಾಳದಲ್ಲಿ ಭಾರತೀಯ ನೌಕಾಪಡೆಗೆ ವಿಶೇಷ ಶಕ್ತಿ, ಸಾಮರ್ಥ್ಯ ಕ್ಷಮತೆ ನೀಡಿ ಶಕ್ತಿಶಾಲಿಗೊಳಿಸಲಿದೆ.

ಆತ್ಮನಿರ್ಭರ ಭಾರತ

ಭಾರತೀಯ ನೌಕಾ ಪಡೆ ನೀಡಿದ ಮಾಹಿತಿಯಂತೆ ಆತ್ಮನಿರ್ಭರ ಭಾರತ ಯೋಜನೆಯನ್ವಯ ಮರ್ಮಗೋವಾ ಅಲ್ಲದೇ ಇನ್ನೂ 44 ಯುದ್ಧ ನೌಕೆಗಳು, 42 ಸಬ್ ಮೆರೀನ್‌ಗಳು ಭಾರತದ ಶಿಪ್‌ಯಾರ್ಡ್‌ಗಳಲ್ಲಿ ನಿರ್ಮಾಣವಾಗುತ್ತಿವೆ. ಇವುಗಳಲ್ಲದೆ 7500 ಕಿ.ಮೀ. ಉದ್ದವಿರುವ ಭಾರತದ ಕಡಲ ತಟದ ರಕ್ಷಣೆಗೆ ಇನ್ನೂ ಹೆಚ್ಚುವರಿಯಾಗಿ ಅವಶ್ಯವಿರುವ 55 ಯುದ್ಧ ನೌಕೆ ಹಾಗೂ ಸಬ್ ಮೆರೀನ್‌ಗಳು ನಿರ್ಮಾಣವಾಗಲಿವೆ. ಐಎನ್‌ಎಸ್ ಮರ್ಮಗೋವಾ ವರ್ಗದ ಇನ್ನೂ ನಾಲ್ಕು ಯುದ್ಧ ನೌಕೆಗಳು ವಿಶಾಖಪಟ್ಟಂ, ಮರ್ಮಗೋವಾ, ಇಂಫಾಲ್ ಹಾಗೂ ಸೂರತ್ ಶಿಪ್‌ಯಾರ್ಡ್‌ಗಳಲ್ಲಿ ನಿರ್ಮಾಣವಾಗುತ್ತಿವೆ. ಉತ್ಕೃಷ್ಟ ಗುಣಮಟ್ಟ ಹಾಗೂ ಸಾಮರ್ಥ್ಯದ ಯುದ್ಧ ನೌಕೆಗಳ ನಿರ್ಮಾಣ ಕ್ಷೇತ್ರದಲ್ಲಿ ಭಾರತವಿಂದು ಜಗತ್ತಿನ ಪ್ರಬಲ ರಾಷ್ಟ್ರಗಳಿಗೆ ಪ್ರಬಲ ಸ್ಪರ್ಧೆ ನೀಡುತ್ತಿದೆ.

ಯುಪಿಎ ಸರಕಾರದಲ್ಲಿ ರಕ್ಷಣಾ ಮಂತ್ರಿಯಾಗಿದ್ದ ಎ.ಕೆ. ಆಂಟನಿಯವರು ಸಂಸತ್ತಿನಲ್ಲಿ ನೀಡಿದ ಹೇಳಿಕೆಗಳನ್ನು ಗಮನಿಸಿದರೆ 2014ರ ವೇಳೆಗೆ ಭಾರತ ಸರಕಾರದ ಬೊಕ್ಕಸ ಬರಿದಾಗಿತ್ತು. ಮೋದಿಯವರು ಅಧಿಕಾರಕ್ಕೇರುತ್ತಿದ್ದಂತೆ ದೇಶದ ಸರ್ವ ಕ್ಷೇತ್ರಗಳಿಗೆ ಕಾಯಕಲ್ಪ ನೀಡಿದರು. ಮೋದಿಯವರ ಸಮರ್ಥ ನಾಯಕತ್ವ, ಇಚ್ಛಾಶಕ್ತಿ ಹಾಗೂ ದೃಢ ನಿರ್ಧಾರಗಳಿಂದ ಭಾರತವಿಂದು ಶಕ್ತಿಶಾಲಿ ರಾಷ್ಟ್ರವಾಗುತ್ತಿದೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸೇನೆ ಶಕ್ತಿಶಾಲಿಯಾಗಿದೆ. ಇಂಡಿಯಾ ಫಸ್ಟ್ ವಿದೇಶ ನೀತಿಯಿಂದ ಪಾಕಿಸ್ತಾನ ಭಿಕಾರಿಯಾಗಿದೆ. ಯುಪಿಎ ಸರಕಾರದ ಅವಧಿಯಲ್ಲಿ ಹಾದಿ ಬೀದಿಗಳಲ್ಲಿ ನಡೆಯುತ್ತಿದ್ದ ಭಯೋತ್ಪಾದನಾ ಕೃತ್ಯಗಳು ಸರ್ಕಾರದ ದೃಢ ನೀತಿಯಿಂದ ಕಾಶ್ಮೀರ ಗಡಿ ಪ್ರದೇಶಕ್ಕೆ ಸೀಮಿತಗೊಂಡಿದೆ. ಮಾವೋವಾದಿ ನಕ್ಸಲ್‌ಗಳ ಬೆನ್ನು ಮೂಳೆ ಮುರಿಯಲಾಗಿದೆ. ಈಶಾನ್ಯ ಭಾರತ ಶಾಂತವಾಗಿದೆ. ಭಾರತ ಜಾಗತಿಕ ಶಕ್ತಿಯಾಗುವತ್ತ ಮುನ್ನಡೆಯುತ್ತಿದೆ.

ಭಾಗ್ಯಜ್ಯೋತಿ ಸಂಪರ್ಕ ಕಡಿತ

ಸೆಸ್ಕ್ ಎಂಡಿ ತರಾಟೆಗೆ ತೆಗೆದುಕೊಂಡ ಶಾಸಕ ಸಿ.ಎಸ್. ಪುಟ್ಟರಾಜು

ಮೈಸೂರು, ಜ.20(ಆರ್‌ಕೆ)– 'ಭಾಗ್ಯಜ್ಯೋತಿ' ಯೋಜನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದಕ್ಕೆ ಕೆಂಡಾಮಂಡಲರಾದ ಮೇಲುಕೋಟೆ ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ಅವರು, ಸೆಸ್ಕ್ ಎಂಡಿ ಜಯವಿಭವಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ಇಂದು ನಡೆಯಿತು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ಆಯೋಜಿಸಿದ್ದ ಸೆಸ್ಕ್ ವತಿಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಆಗಮಿಸಿದ ಸಿ.ಎಸ್.ಪುಟ್ಟರಾಜು, ಇಂಧನ ಸಚಿವರು ಇನ್ನು ಆಗಮಿಸಿರಲಿಲ್ಲ ಹಾಗೂ ಕಾರ್ಯಕ್ರಮ ಆರಂಭವಾಗುವುದು ತಡವಾಗಿತ್ತು. ಆ ವೇಳೆ ಎದುರಾದ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರನ್ನು ಹಿಗ್ಗಾ ಮುಗ್ಗಾ ತರಾಟೆಗೆ ತೆಗೆದುಕೊಂಡ ಶಾಸಕರು, ಹಣ ಕಟ್ಟಲಿಲ್ಲ ಎಂಬ ಕಾರಣಕ್ಕೆ ಭಾಗ್ಯಜ್ಯೋತಿ ಗ್ರಾಹಕರ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಬಿಲ್ ಪಾವತಿಸದಿದ್ದರೂ ದೊಡ್ಡದೊಡ್ಡ ಉದ್ದಿಮೆದಾರರು, ಶ್ರೀಮಂತರಿಗೆ ವಿದ್ಯುತ್ ನೀಡುತ್ತೀರಿ, ಬಡವರಿಗೆ ಕಟ್ ಮಾಡುತ್ತೀರಿ. ಹಣ ಬಾಕಿ ಇದ್ದರೆ ಆ ಬಗ್ಗೆ ಜನಪ್ರತಿನಿಧಿಗಳ ಗಮನಕ್ಕೆ ತರಬೇಕು. ಚರ್ಚಿಸಿ ಸಮಸ್ಯೆ ಬಗೆಹರಿಸದೇ ಏಕಾಏಕಿ ಸಾವಿರಾರು ಕುಟುಂಬದ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಹೇಳಿದ್ಯಾರು, ಜನ ನಮ್ಮ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ನೀವು ಉತ್ತರ ಕೊಡುತ್ತೀರಾ ಎಂದು ಸಾರ್ವಜನಿಕವಾಗಿ ಎಂಡಿ ಅವರನ್ನು ತರಾಟೆಗೆ ತೆಗೆದುಕೊಂಡರು.



ಇದು ಪರೀಕ್ಷೆ ಸಮಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಅವರು ತಮ್ಮ ಕಷ್ಟಗಳನ್ನು ನಮ್ಮ ಹತ್ತಿರ ಹೇಳಿಕೊಳ್ಳುತ್ತಾರೆ. ನಮ್ಮ ಕ್ಷೇತ್ರಕ್ಕೆ ಬಂದು ಪರಿಶೀಲಿಸಿ ಸಂಪರ್ಕ ಕಲ್ಪಿಸದಿದ್ದಲ್ಲಿ ಸೆಸ್ಕ್ ಅಧಿಕಾರಿಗಳಿಗೆ ಜನ ಮುತ್ತಿಗೆ ಹಾಕುತ್ತಾರೆ. ರೈತರ ಐಪಿ ಸೆಟ್‌ಗಳಿಗೂ ಸರಿಯಾಗಿ ವಿದ್ಯುತ್ ಪೂರೈಸುತ್ತಿಲ್ಲ. ರೈತರ ಬವಣೆ ಗೊತ್ತಾ ನಿಮಗೆ, ಅವರು ಬೆಳೆದರೆ ನಮಗೆ– ನಿಮಗೆ ಅನ್ನ ಎಂಬುದನ್ನು ಮರೆಯಬೇಡಿ ಎಂದು ಏರುಧ್ವನಿಯಲ್ಲಿ ಗುಡುಗಿ ಕಾರ್ಯಕ್ರಮ ಆರಂಭವಾಗುವ ಮೊದಲೇ ಅಲ್ಲಿಂದ ನಿರ್ಗಮಿಸಿದರು. ಶಾಸಕರಿಗೆ ಸಮಜಾಯಿಷಿ ನೀಡಲು ಜಯವಿಭವಸ್ವಾಮಿ ತಡಬಡಾಯಿಸಿದರು. ಶಾಸಕರು ತರಾಟೆಗೆ ತೆಗೆದುಕೊಂಡಾಗ ಸುತ್ತ ನೆರೆದಿದ್ದ ಜನರೂ ಸೆಸ್ಕ್ ಅಧಿಕಾರಿಗಳದ್ದು ಆಡಿದ್ದೇ ಆಟ. ಜನರ ಸಮಸ್ಯೆಗೆ ಸರಿಯಾಗಿ ಸ್ಪಂದಿಸಲ್ಲ ಎಂದು ಗೊಣಗಿದರು.

ನಾಡಿದ್ದು ಮೈಸೂರಿಗೆ 'ರೇಸ್ ಫಾರ್ ರೋಟರಿ' ರ್‍ಯಾಲಿ

ಮೈಸೂರು, ಜ.20(ಎಂಟಿವೈ)– ಮಣ್ಣು ಮತ್ತು ನೀರಿನ ಸಂರಕ್ಷಣೆ ಕುರಿತಂತೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ತಮಿಳುನಾಡಿನ ಮಹಾಬಲಿಪುರಂನಿಂದ ಆರಂಭವಾಗಿರುವ 'ರೈಡ್ ಫಾರ್ ರೋಟರಿ' ವಾಹನ ರ್‍ಯಾಲಿ ಜ.23ರಂದು ಮೈಸೂರಿಗೆ ಆಗಮಿಸಲಿದೆ ಎಂದು ರೋಟರಿ ಉತ್ತರ ಅಧ್ಯಕ್ಷ ಡಾ. ಜಗದೀಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಟರಿ ಅಂತಾರಾಷ್ಟ್ರೀಯ ಸಂಸ್ಥೆ ವತಿಯಿಂದ ರೈಡ್ ಫಾರ್ ರೋಟರಿ ವಾಹನ ರ್‍ಯಾಲಿ ಹಮ್ಮಿಕೊಂಡಿದ್ದು, ಇದರಲ್ಲಿ ವಿದೇಶಗಳ ಸುಮಾರು 40 ರೋಟರಿ ಸದಸ್ಯರು ಪಾಲ್ಗೊಂಡಿದ್ದಾರೆ. ಜ.23ರಂದು ಬೆಳಗ್ಗೆ ಸೇಂಟ್ ಫಿಲೋಮಿನಾ ಚರ್ಚ್ ಹಾಗೂ ಅರಮನೆಗೆ ಭೇಟಿ ನೀಡಲಿದ್ದಾರೆ. ಈ ವೇಳೆ ವಾಸ್ತು ಶಿಲ್ಪ, ಸಂಸ್ಕೃತಿ ಕುರಿತು ತಿಳಿಸಿಕೊಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ರೋಟರಿ ಕ್ಲಬ್ ಆಫ್ ಮೈಸೂರು ನಾರ್ಥ್ ಪದಾಧಿಕಾರಿಗಳಾದ ಹೆಚ್.ಆರ್. ಕೇಶವ್, ಕೆ.ಮಂಜುನಾಥ್, ಎಸ್.ಬಾಲಚಂದ್ರ, ರಾಜಶೇಖರ ಕದಂಬ ಇದ್ದರು.

ಪುಕ್ಕಟೆ ವಿದ್ಯುತ್ ಗೋಸುಂಬೆ ಹೇಳಿಕೆ ಬಗ್ಗೆ ಜಾಗೃತಿ ಮೂಡಿಸಿ

ಎಸ್ಕಾಂ ಅಧಿಕಾರಿಗಳಿಗೆ ಸಂಸದ ಪ್ರತಾಪ್‌ಸಿಂಹ ಸಲಹೆ



ಮೈಸೂರು, ಜ.20(ಆರ್‌ಕೆ)– ಪುಕ್ಕಟೆ ವಿದ್ಯುತ್ ನೀಡುತ್ತೇವೆ ಎಂದು ಗೋಸುಂಬೆ ಹೇಳಿಕೆ ನೀಡುತ್ತಿರುವ ಬಗ್ಗೆ ಗ್ರಾಹಕರಲ್ಲಿ ಜಾಗೃತಿ ಮೂಡಿಸಿ ಎಂದು ಸಂಸದ ಪ್ರತಾಪ್ ಸಿಂಹ ಇಂದಿಲ್ಲಿ ಎಸ್ಕಾಂ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ. ಸೆಸ್ಕ್ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಚುನಾವಣೆ ಹತ್ತಿರ ಬಂದಾಗ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಗೋಸುಂಬೆ ಹೇಳಿಕೆ ನೀಡುತ್ತಿರುವವರು ತಮ್ಮ ಮನೆಯಿಂದ ತಂದು ಕೊಡುವುದಿಲ್ಲ. ಹಾಗೆ ಪುಕ್ಕಟೆಯಾಗಿ ವಿದ್ಯುತ್ ಪೂರೈಸಿದಲ್ಲಿ ಎಸ್ಕಾಂಗಳು ಮುಳುಗುತ್ತವೆಯಾದ್ದರಿಂದ ಇಂತಹ ಹೇಳಿಕೆಗಳ ಸತ್ಯಾಸತ್ಯತೆ ಬಗ್ಗೆ ನೀವು ಗ್ರಾಹಕರಲ್ಲಿ ಅರಿವು ಮೂಡಿಸಬೇಕು ಎಂದರು. ಗ್ರಾಹಕರ್‍ಯಾರೂ ಉಚಿತ ವಿದ್ಯುತ್ ನೀಡಿ ಎಂದು ಕೇಳಿಲ್ಲ. ದೆಹಲಿ ನಗರದಲ್ಲಿ ಆದಾಯದ ಇತರ ಪ್ರಬಲ ಮೂಲಗಳಿರುವುದರಿಂದ ಅದು ಸಾಧ್ಯವಾಗಿರಬಹುದು. ಆದರೆ ನಮ್ಮಲ್ಲಿ ಅದು ಸಾಧ್ಯವಾಗುವುದಿಲ್ಲ ಎಂಬುದರ ಬಗ್ಗೆ ಜಾಗೃತಿ ಮೂಡಿಸಿ ಎಂದ ಅವರು, ರೂಫ್ ಟಾಪ್‌ನಲ್ಲಿ ಸೋಲಾರ್ ವಿದ್ಯುತ್ ಉತ್ಪಾದನಾ ಸಲಕರಣೆಗೆ ಇಂಧನ ಇಲಾಖೆ ಅರ್ಜಿ ಹಾಕಿದವರಿಗೆ ವಿಳಂಬ ಮಾಡದೇ ಅನುಮತಿ ನೀಡುವಂತೆ ಸಚಿವರಲ್ಲಿ ಮನವಿ ಮಾಡಿದರು.

ಮೈಸೂರು– ಬೆಂಗಳೂರು ದಶಪಥ ಹೆದ್ದಾರಿ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದ್ದು, ಮುಂದಿನ ಬುಧವಾರ ಮಂಡ್ಯ ಬೈಪಾಸ್ ರಸ್ತೆ ಸಂಚಾರಕ್ಕೆ ಮುಕ್ತವಾಗಲಿದೆ. ಅಲ್ಲಿ ಎಲೆಕ್ಟ್ರಿಕ್ ಬಸ್, ಕಾರುಗಳು ಸಂಚರಿಸುವುದರಿಂದ ಇವಿ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸುವಂತೆಯೂ ಸಿಂಹ ಮನವಿ ಮಾಡಿದರು.

ನಾಳೆ ಚಿತ್ರಮಂಜರಿ ಕಾರ್ಯಕ್ರಮ

ಮೈಸೂರು, ಜ.20(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಜ.22 ರಂದು ಸಂಜೆ 5ಕ್ಕೆ ಗಾನಲಹರಿ ಸಂಸ್ಥೆ ವತಿಯಿಂದ ಸುಮಧುರ ಗೀತೆಗಳ ಚಿತ್ರಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಆನಂದ ಮಾಧ್ವ ತಿಳಿಸಿದ್ದಾರೆ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಕಾರ್ಯಕ್ರಮದಲ್ಲಿ ಕನ್ನಡ, ಹಿಂದಿ, ತಮಿಳು, ತೆಲುಗು ಚಲನಚಿತ್ರಗಳ ಸುಮಧುರ ಗೀತೆ ಹಾಡಲಾಗುವುದು. ರಾತ್ರಿ 8.30ರವರೆಗೂ ಕಾರ್ಯಕ್ರಮ ನಡೆಯಲಿದೆ ಎಂದರು. ಗಾನಲಹರಿ ಸಂಸ್ಥೆಯ ಸದಸ್ಯರುಗಳಾದ ರೂಪಶ್ರೀ ಶೇಷಾದ್ರಿ, ಎಂ.ಎಸ್. ಬಾಲಾಜಿ, ಪ್ರದೀಪ್, ಬಾಲು ಪ್ರಕಾಶ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITES FOR SALE
ಕೇಶವಮೂರ್ತಿ ಬಡಾವಣೆ
KSOU ACADEMIC BHAVAN MANDAKALLI OPPOSIT, Dadadahalli road, GURURU, Mysore Taluku & District.
30x40, 30x50
MUDA APPROVED
SK DEVELOPER & PROPERTIES, JP nagar, Ringroad, Mysore.
8453531221

ಬೇಕಾಗಿದ್ದಾರೆ
ಮೈಸೂರಿನ ಆಯುರ್ವೇದಿಕ್ ಸ್ಪಾದಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ಉಚಿತ ತರಬೇತಿ ಕೊಟ್ಟು ನಮ್ಮಲ್ಲೇ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಸರ್ಟಿಫಿಕೇಟ್ ಸಹ ನೀಡಲಾಗುತ್ತದೆ. ವಯೋಮಿತಿ: 18–30.
9632599536, 8792785161

ಸೈಟ್ ಫಾರ್ ಸೇಲ್
ಜ್ಞಾನಭಾರತಿ ಲೇಔಟ್ ದಡದಹಳ್ಳಿ, ಮೈಸೂರು
ಮುಡಾ ಖಾತೆ ಆಗಿದೆ
1) 30x40 ಈಸ್ಟ್ ಫೇಸಿಂಗ್ 24 ಲಕ್ಷ.
2) 28.5x40 ಸೌತ್ ಈಸ್ಟ್ 26 ಲಕ್ಷ.
9342123373

WANTED
Experienced Civil Engineers
(B.E. or Diploma) with 2 to 4 years of experience in Building work. Work site: M M Hills, Chamarajanagara District. Interested candidates should contact with resume.
Email: projects.apoorva@gmail.com
Mobile: 94484 65107

S.K. Construction
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ. Engineering Plan ವಾಸ್ತು ಪ್ರಕಾರ, 3-D Elevation ಸಹಿತ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದಲ್ಲಿ Construction ಮಾಡಿಕೊಡುತ್ತೇವೆ.
Mob: 9620528490

FIRST TIME IN MYSORE
BRITISH COUNCIL AUDIO LAB FOR COACHING IELTS/OET/CBT EXAMS
Individualized Workstations supported by Study Material with lots of Mock Tests. Faculty with vast experience.
FEW SEATS LEFT
Website: https://transworldbusiness.in
Mob: 7892561264, 9880355619, 0821-4065156

ಪ್ರವಾಸ
11–2–23: ಪುರಿ ಜಗನ್ನಾಥ, ಕೋನಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ, ಚಂದ್ರಭಾಗ ಬೀಚ್. 8–2–2023: ಕಾಶಿ, ಗಂಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯೆ 23–2–2023: ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಧರ್ಮಶಾಲಾ, ಶಕ್ತಿಪೀಠ ಹಾಗೂ ಇತರೆ. 9–3–2023: ನೇಪಾಳ, ಮುಕ್ತಿನಾಥ, ಪಶುಪತಿನಾಥ.
9591017782, 9964527782

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ಹೆಬ್ಬಾಳ ಮತ್ತು ಅಗ್ರಹಾರ. ಸಂಬಳ : 8000/–ಸ್ಥಳೀಯರಿಗೆ ಆದ್ಯತೆ. ಸಮಯ: ಬೆ 09:30 ರಿಂದ ರಾ 9:00 ರ ವರೆಗೆ. ಸಂಪರ್ಕಿಸಿ:
9986311444/9986322444

ಬೇಕಾಗಿದ್ದಾರೆ
ಹೋಂ ನರ್ಸ್ ಟ್ರೈನಿಂಗ್ ಕೊಡುತ್ತೇವೆ ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವವಿರುವ ಇಲ್ಲದೆ ಇರುವ ಹುಡುಗ ಹುಡುಗಿಯರು ಹಾಗೂ ಮಗು & ಬಾಣಂತಿ ಆರೈಕೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ 8th, 9th 10th ಪಾಸ್ ಫೇಲಾದ ಯುವಕ ಯುವತಿಯರು ಬೇಕಾಗಿದ್ದಾರೆ
ಸಂಪರ್ಕಿಸಿ: 8123630683
ಸಂಬಳ 22000/– ದಿಂದ 35000/–

ಜಮೀನು ಮಾರಾಟಗಾರರು, ಕೊಳ್ಳುವವರು ಸಂಪರ್ಕಿಸಿ
ಮೈಸೂರು ತಾ, ಜಯಪುರ ಹೋಬಳಿ ಹಾಗೂ ಹಂಪಾಪುರ ಹೋಬಳಿಯಲ್ಲಿ ಮಾರಾಟ ಮಾಡುವವರು ಮತ್ತು ಕೊಂಡುಕೊಳ್ಳುವವರು ಸಂಪರ್ಕಿಸಿ:
9945661696, 9663793666

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನಲ್ಲಿ ಮತ್ತು ಕಡಕೊಳ ಇಂಡಸ್ಟ್ರೀಗಳಿಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ದೂರವಾಣಿ ಸಂಖ್ಯೆ:
9740324112 / 9035269781
0821-4852002, 2303459

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪು ರಿಂಗ್ ರೋಡ್ ಮತ್ತು ಶ್ರೀನಗರ ಹಿಂಭಾಗ ಮೈಸೂರು
8050345574

Synapse HR Solutions
We will provide services on maintenance of HR Statutory Compliance for all kinds of Industries Our services like • Handling complete payroll • Filing Monthly, Quarterly & Annual Returns under ESIC, EPF & Other Labour acts. • Maintaining Registers & Records under applicable labour Laws. • Handling Inspections & Submission of reports. • New Registration / Renewal of license. Please Contact :
9483898369
Mail : cs.synapse@yahoo.com

ಸುವರ್ಣ ಯಾತ್ರ
31–1–23 ಗುಜರಾತ್ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ 8 ದಿನಗಳು. 10–2–23 ಪೂರಿ ಜಗನ್ನಾಥ, ಭುವನೇಶ್ವರ, ಕೊನಾರ್ಕ್ ಪ್ರವಾಸ 4 ದಿನಗಳು. 24–2–23 ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ 7 ದಿನಗಳು
9019462508, 9008381022

ಹೋಂನರ್ಸಿಂಗ್ ಕೆಲಸ
ಅನುಭವ ಇರುವ /ಇಲ್ಲದಿರುವ 18ವರ್ಷ ಮೇಲ್ಪಟ್ಟ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು 24 Hrs ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಊಟ ವಸತಿ ಉಚಿತ ದೊಂದಿಗೆ ಆಕರ್ಷಕ ಸಂಬಳ ಇರುತ್ತದೆ. ಆಧಾರ್ ಕಾರ್ಡ್ & ಫೋಟೋ ಕಡ್ಡಾಯ ಯಾವುದೇ ಶುಲ್ಕ ಇರುವುದಿಲ್ಲ (ಸರ್ಕಾರಿ ನೋಂದಾಯಿತ ಸಂಸ್ಥೆ) ಸಂಪರ್ಕಿಸಿ:
7483960098/9743135666

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ದ್ವಿಚಕ್ರ ವಾಹನ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.
Freshers - Any Degree
(Experienced can also apply)
ಕೂಡಲೇ ಸಂಪರ್ಕಿಸಿ: 7892930047
Email -starmysoreresume@gmail.com

ಬೇಕಾಗಿದ್ದಾರೆ
ಪಿರಿಯಾಪಟ್ಟಣದಲ್ಲಿರುವ ಪ್ರಖ್ಯಾತ ಹೋಟೆಲ್ ಗಳಿಗೆ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಅನುಭವವಿರುವ ಮತ್ತು ಇಲ್ಲದವರಿಗೂ ಆದ್ಯತೆ. ವಯಸ್ಸು: 72 ವರ್ಷ ದೊಳಗಿನವರಿಗೆ ವಿದ್ಯಾರ್ಹತೆ 8, 9, 10ನೇ ತರಗತಿ ಪಾಸ್ & ಫೇಲ್. ಕೂಡಲೇ ಸಂಪರ್ಕಿಸಿ:
Mob: 7899929233

NUETECH SOLAR WATER HEATER

ಬಿಸಿ ನೀರಿನ ಸಮಸ್ಯೆಗೆ ಹಾಗೂ ದೀರ್ಘ ಕಾಲದ ಬಾಳಿಕೆಗಾಗಿ ಹಾಗೂ 10 ವರ್ಷ ವಾರಂಟಿ.
Company Super Stockist
USHA KIRAN AGENCY
9844069190

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 45. ಸಂಬಳ 14,500 ESI, PF ಒಳಗೊಂಡು 3 ಶಿಫ್ಟ್ ಹಾಗೂ weekoff ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದುಕೊಳ್ಳ ತಕ್ಕದ್ದು. ಸ್ಥಳ: CIPET ಕಾಲೇಜ್ ಹತ್ತಿರ, ರಿಂಗ್ ರೋಡ್, ಮೇಟಗಳ್ಳಿ, ಮೈಸೂರು.
Mob: 9986874584

WANTED
Pharmacist (2 vacancies) for Jayadeva Hospital, KRS Road, Kumbarakoppal, Mysore.
Qualification: D.Pharma or B.Pharma. Contact personally with resume.
Mob: 63642 16261

WANTED
Candidates with BE/B.Sc/PUC Science/B.Com/MSW Qfn.
(Veg food + Stay + Sal. up to 20,000/-)
Divya Deepa Charitable Trust, Mysuru
Contact: 9341369901, 9538499901, 8088586087
www.divyadeepatrust.org

ಸೈಟು ಮಾರಾಟಕ್ಕಿದೆ
30x40 W/F No,83, ವಿಶ್ವಪ್ರಜ್ಞಾ
ಮನೆ ಭೋಗ್ಯಕ್ಕಿದೆ
ಶಾಂತವೇರಿ ಗೋಪಾಲಗೌಡ ನಗರ 20x30, ಮಧ್ಯವರ್ತಿಗೆ ಅವಕಾಶವಿಲ್ಲ
9743648253

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ). ಸಂಬಳ 12000 ದಿಂದ 18000. (ESI, PF ಸೌಲಭ್ಯ ಇರುತ್ತದೆ).
8050699742, 7760043596

ಬೋಳು ತಲೆಯ ಸಮಸ್ಯೆಯೇ?

ಕಿಮೋತರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

RS CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ. ದರ 1,80,000/– ಪ್ರತಿ ಚದರ ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ:
9538575009, 7019151884

ಹೊಸ ಮನೆ ಮಾರಾಟಕ್ಕಿದೆ
ವಿಜಯನಗರ 4ನೇ ಹಂತ 30x50, E/F, 3 BHK, 26 ಚದರ ಡೂಪ್ಲೆಕ್ಸ್ ಮನೆ, ಅತ್ಯಾಧುನಿಕ ಸೌಲಭ್ಯವುಳ್ಳದ್ದು ಖರೀದಿದಾರರು ಸಂಪರ್ಕಿಸಿ:
9342119411, 7022591243
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT

0821-2499188 / 9880186386

SITE FOR SALE
30x40, East Face, Kuberananda Sagara Layout. Contact
9590696666/9845953653
(Genuine Buyers Only)

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಸಂಬಳ: 10,000, ವಿದ್ಯಾರ್ಹತೆ: SSLC
ಸಮಯ: 12Hrs
ಸ್ಥಳ: ಹಿನಕಲ್ ಮತ್ತು ನಜರ್‌ಬಾದ್
7829964007
ಹೆಲ್ಪರ್ಸ್ ಬೇಕಾಗಿದ್ದಾರೆ
7090303144

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586, 6360884930

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

HOME LOAN (ಮನೆ ಸಾಲ)
9 & 11A, 11B, ಪುರಸಭೆ, ನಗರಸಭೆ, ಮುಡಾ, ಕಾರ್ಪೋರೇಷನ್ ನಿವೇಶನ ಮತ್ತು ಮನೆಗಳಿಗೆ ಮನೆ ಕಟ್ಟಲು, ಮನೆ ಅಡಮಾನ, ಮನೆ ನವೀಕರಣ, ಸೈಟು ಮತ್ತು ಮನೆ ಖರೀದಿಸಲು ಸಾಲ ಸೌಲಭ್ಯ ಒದಗಿಸಿಕೊಡಲಾಗುವುದು. ಸಂಪರ್ಕಿಸಿ:
9148612808, 6360457224

HOUSE FOR SALE
(Newly built) 20x30, #4083, G/F, North Face, Vijayanagar 2nd Stage, Near Sangam Circle / Mysore. Contact:
9019873824, 8310063311

WANTED
HR Telecallers,
Anchors
Event manager
Contact
9980959598

FOR SALE
1) 30x40 30x50 sites in Defence Apartment Near Kote Road
2) 2 Acr land TVS factory Near . 1 acr harohalli Hd Kote Road
3) 17/60 3 BHK Kamakshi Hospital near Saraswathi Puram
4) 40x60 KC Layout
5) 30x40 Duplex House Srirampura
90359 90359/95386 90359

ಬೇಕಾಗಿದ್ದಾರೆ
Sri Sapthagiri Builders & Developers ಕಂಪನಿಗೆ ತಕ್ಷಣ ಬೇಕಾಗಿದ್ದಾರೆ. Post:
1) Receptionist
2) Marketing Executive
3) Marketing Head (Direct selection)
Languages: Kannada, English, Hindi.
9591828444, 8197395284

FOR SALE
1) 30x40, 2 BHK with attached well furnished house for sale near VTU College (200 mtrs.) from Ring Road, Sathagalli 2nd Stage, MUDA Layout. Price: Rs. 78 Lakhs final. 2) 20x30 Duplex 3 BHK with attached bath and well furnished house at Lalbahadur, MUDA layout. Price: Rs. 58 Lakhs final.
Mob: 9886378344

ರೂಂ ಬಾಡಿಗೆಗೆ ಇದೆ
ಮೈಸೂರಿನ ಸೋಮನಾಥನಗರದ ಮನೆ ನಂ. 12, ಬ್ಲಾಕ್ 24ರ ಮೊದಲನೇ ಅಂತಸ್ತು, ಸೋಲಾರ್ ಬಿಸಿ ನೀರಿನ ವ್ಯವಸ್ಥೆ, ಅಡುಗೆ ಮಾಡಿಕೊಳ್ಳಲು ಅನುಕೂಲ ಹೊಂದಿದೆ. ಆಸಕ್ತರು ಸಂಪರ್ಕಿಸಿ:
Mob: 9449679665

ಮನೆ ಕೆಲಸಕ್ಕೆ ಬೇಕಾಗಿದ್ದಾರೆ
ಊಟ, ವಸತಿ ಉಚಿತ. ಸಂಬಳ ರೂ. 8,000 ಅಥವಾ ಬೆಳಿಗ್ಗೆ 6 ರಿಂದ 11 ಗಂಟೆಯವರೆಗೆ. ಸಂಬಳ: ರೂ. 5,000. ಸ್ಥಳ: ಸರಸ್ವತಿಪುರಂ, ಮೈಸೂರು.
9611736458, 7795267413

ನಿವೇಶನ ಮಾರಾಟಕ್ಕಿದೆ
ಅಳತೆ 40x60 ಸಪ್ತಮಾತೃಕೆ ಲೇಔಟ್ (ಫೇಸ್ 1) 40 ಅಡಿ ರಸ್ತೆ, ಮುಡಾ ಖಾತೆ. ಮಾಲೀಕರಿಂದ ನೇರ ಮಾರಾಟ.
Mob: 9686510532

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ. ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
ಡಾ. ಗುರೂಜಿ, ಮೈಸೂರು
9448229184/7899625268

HOUSING LOAN/ MORTGAGE LOAN
ಮನೆ ಸೈಟು, ಕಮರ್ಷಿಯಲ್ ಜಾಗ ಖರೀದಿಸಲು ಮತ್ತು ಕಟ್ಟಡ, ಶಾಲಾ, ಕಾಲೇಜ್‌ಗಳ, ವಿದ್ಯಾಸಂಸ್ಥೆಗಳು & ಕಲ್ಯಾಣಮಂಟಪಗಳ ಮೇಲೆ ಸಾಲ, MUDA, KHB, ನಗರ ಸಭಾ ಪುರಸಭಾ ಖಾತೆ 9 & 11A, 11B ರೆವಿನ್ಯೂ ಪ್ರಾಪರ್ಟಿಸ್ ಹಾಗೂ ಇತ್ಯಾದಿಗಳ ಮೇಲೆ ಸಾಲ ಸೌಲಭ್ಯಗಳು
UNNATHI FINANCIAL SERVICES
Raghavendra-9986977667

HOUSE FOR SALE
62x47, North facing, near Kalyan Jewellers, Lashkar Mohalla. Contact:
Mob: 8618530260

CAR FOR SALE
Maruthi Suzuki Celerio Vxi
June-2015 model, Mys. Regn. Single hand owner.
Mob: 9980659801

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಿನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
8861612486

30x40/30x50/40x60 ಸೈಟುಗಳು
ತಕ್ಷಣ ಮನೆ ಕಟ್ಟಲು ಎಲ್ಲಾ ಸೌಕರ್ಯವುಳ್ಳ ಸೈಟುಗಳು ನಮ್ಮ ಬಡಾವಣೆಗಳಲ್ಲಿ ಲಭ್ಯವಿದೆ.
1)T.ನರಸೀಪುರ ಹೈವೆ ರಸ್ತೆ ಹೊಂದಿಕೊಂಡಂತೆ (ಚಿಕ್ಕಳ್ಳಿ) ನಂತರ @ 25 ಲಕ್ಷ
2) IPS ಶ್ರೀನಿವಾಸನ್ ಪೊಲೀಸ್ ಲೇಔಟ್ (500 Mtrs) ನಂತರ 35 ಲಕ್ಷ
Brokers Excuse
7892445689

ಶಾಲಾ-ಜಮೀನು ಮಾರಾಟಕ್ಕಿದೆ
ನಂಜನಗೂಡು ತಾ. ಹದಿನಾರು ಗ್ರಾಮದಲ್ಲಿ ಶಾಲೆಯನ್ನು ನಡೆಸಲು ಬೇಕಾದ ಸೌಲಭ್ಯವುಳ್ಳ 45 ಚ. ಕಟ್ಟಡವಿದ್ದು, ಶಾಲೆಯನ್ನು ಪ್ರಾರಂಭ ಮಾಡಲು ಅನುಕೂಲವಾದ ಸ್ಥಳವಾಗಿದೆ. ಒಂದು ಎಕರೆ ಜಾಗವು ಅಲಿನೇಷನ್ ಪಡೆದಿದ್ದು ಸೂಕ್ತ ದಾಖಲೆಗಳಿದ್ದು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
9448222245/9480924163

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಜಮೀನು ಮಾರಾಟಕ್ಕಿದೆ
1.14 ಎಕರೆ (54 ಗುಂಟೆ), ಮೈಸೂರು – ಸುತ್ತೂರು ಮುಖ್ಯರಸ್ತೆ, ವರುಣ ಮಾರ್ಗ, ಮೈಸೂರು ರಿಂಗ್ ರಸ್ತೆಯಿಂದ 12 ಕಿ.ಮೀ ದೂರ ಮರಡಿಹುಂಡಿ ಗೇಟ್ ಗ್ಯಾಸ್ ಗೋಡೌನ್ ಹತ್ತಿರ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗೆ ಅನುಕೂಲವಿದೆ.
8105544664
9945260880

ತಕ್ಷಣ ಬೇಕಾಗಿದ್ದಾರೆ
ಯಾದವಗಿರಿ ಮತ್ತು ಬನ್ನಿಮಂಟಪ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,000/–, ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819
9620777819

ಮನೆ ಭೋಗ್ಯಕ್ಕೆ ಇದೆ
Ground Floor,
ಹೆಬ್ಬಾಳು 2ನೇ ಹಂತ, 3ನೇ ಕ್ರಾಸ್, ಸಂಪರ್ಕಿಸಿ
8951262136

ಪ್ರಮಾಣ ಪತ್ರ
ಮೇರಿಯಮ್ಮ ಆದ ನಾನು, ಮನೆ ನಂ 06, ಜ್ಯೋತಿ ಕಾನ್ವೆಂಟ್ ರಸ್ತೆ. ರಾಘವೇಂದ್ರನಗರ, ಮೈಸೂರು ಸಿಟಿ, ಇಲ್ಲಿ ವಾಸವಿದ್ದು, ಸದರಿ ನನ್ನ ಸರಿಯಾದ ಹೆಸರು ಮೇರಿಯಮ್ಮ ಎಂದು ನನ್ನ ಆಧಾರ್ ಕಾರ್ಡ್ ಮತ್ತು ಎಲ್ಲಾ ದಾಖಲಾತಿಗಳಲ್ಲಿ ನಮೂದಾಗಿರುತ್ತದೆ. ಆದರೆ ಪಿ.ಎಫ್ (A/c No. KN/16774/22) ಪಿಂಚಣಿಯಲ್ಲಿ ನನ್ನ ಹೆಸರು ಮೇರಿ ಜೋಯನಿಸ್ (MARY JOANNIES) ಎಂದು ತಪ್ಪಾಗಿ ನಮೂದಾಗಿರುತ್ತದೆ. ಈ ಮೇಲ್ಕಂಡ ಎರಡೂ ಹೆಸರುಗಳು ನನ್ನದೇ ಎಂದು ದೃಢೀಕರಿಸಿ ಪ್ರಮಾಣೀಕರಿಸುತ್ತೇನೆ. ಸಹಿ/-ಮೇರಿಯಮ್ಮ

ಅಲಿನೇಷನ್ ಸೈಟು
ಮಂಡ್ಯದಲ್ಲಿ
ಡಿ.ಸಿ. ಅಲಿನೇಷನ್ ನಂ.
ALN.303/08-09
ಸೈಟು 3 ಲಕ್ಷದಿಂದ ಮಾರಾಟಕ್ಕಿದೆ
9901234073

WANTED ACCOUNTANT
(Male/Female) with Computer Knowledge
Hariharan Constructions, Mysore
9448550997/9787753111

CONSTRUCTION WORK
Construction of Residential / Commercial Building According Vaastu with 20 yrs experienced Civil Engineer with best possible rate. (Including Sanction Plan Working Plan, 3D Elevation)
9448805268/6366141266

ನಿವೃತ್ತ ನೌಕರರಿಗೆ ಉದ್ಯೋಗ
ವಿದ್ಯಾರ್ಹತೆ: SSLC/PUC, Degree ಉತ್ತೀರ್ಣ
ವೇತನ: 10,000/–20,000/–, 30,000/–
ಸಂದರ್ಶನಕ್ಕೆ ಹಾಜರುಪಡಿಸಬೇಕಾದ ದಾಖಲೆಗಳು 1) ವಿದ್ಯಾರ್ಹತೆ ಅಂಕಪತ್ರ 2) ಆಧಾರ್ ಕಾರ್ಡ್ 3) ಪಾನ್ ಕಾರ್ಡ್ 4) ಬ್ಯಾಂಕ್ ಪಾಸ್ ಪುಸ್ತಕ 5) ಪಾಸ್ ಪೋರ್ಟ್ ಅಳತೆ ಫೋಟೊ
ಸಂಪರ್ಕಿಸಿ: 9886647852

SITES FOR SALE
30x40
ಆದೀಶ್ವರನಗರ ಮತ್ತು ಕೆ.ಬಿ.ಎಲ್. ಗಾರ್ಡೆನಿಯಾ
30x40
ವಿಜಯನಗರ 4ನೇ ಹಂತ, ಮೈಸೂರು
ಸಂಪರ್ಕಿಸಿ:
8050245332

VOKKALIGA MATRIMONY
Degree /BE/ MBA/ MCA/ MBBS/Govt. Employee
ವಧು–ವರರಿಗಾಗಿ ಸಂಪರ್ಕಿಸಿ
(Contact For all Caste)
9343175000

ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡನಗರ ಹಾಗೂ ಲಲಿತಾದ್ರಿನಗರ ಗಳಲ್ಲಿ ಸೈಟುಗಳು ಬೇಕಾಗಿದೆ. 20x30, 30x40.
Mob: 9900125239

WANTED
CNC OPERATOR
(for 2nd shift)
for an Engineering company in Hebbala Industrial Area, Mysore.
Please contact
7975090039

ಮನೆಗಳು ಬಾಡಿಗೆ/ಭೋಗ್ಯ/ಮಾರಾಟಕ್ಕೆ ಸೈಟು ಬೇಕಾಗಿದೆ
ಅಳತೆ 11X40ರಲ್ಲಿ ಒಂದು ರೂಮುಳ್ಳ ಹೊಸ ಮನೆಗಳು ಬಾಡಿಗೆ ಮತ್ತು ಭೋಗ್ಯಕ್ಕಿದೆ. ಹೆಂಚು, ಸೀಟು, ಆರ್.ಸಿ.ಸಿ ಮನೆಗಳು ಬನ್ನಿಮಂಟಪ ಹುಡ್ಕೋದಲ್ಲಿ ಮಾರಾಟಕ್ಕಿದೆ
ದೇವನೂರು, ಸಾತಗಳ್ಳಿ, ಡಿ.ಟಿ.ಎಸ್. ನಗರದ ಸುತ್ತ ಮುತ್ತಲು ಎಲ್ಲಾ ಅಳತೆಯ ಸೈಟು ಬೇಕಾಗಿದೆ.
ಸಂಪರ್ಕಿಸಿ: ಶಿವಪ್ಪ, ಭೂದೇವಿ ರಿಯಲ್ ಎಸ್ಟೇಟ್
ಮೊ: 9141050266

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ 4th, SSLC, MNC & IT ಕಂಪನಿಗಳಿಗೆ PUC, ITI, any degreepass/fail ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ, 15200/– ದಿಂದ 86000/–
9740733021/9535028750

ವಧು ವರರ ಮಾಹಿತಿ ಕೇಂದ್ರ
ಎಲ್ಲಾ ಹಿಂದೂ ಜಾತಿಯ ವಧು/ ವರ /ವಿಧವೆ /ಡೈವೋರ್ಸ್/ ಅಂಗವಿಕಲರಿಗೆ /ಹೆಣ್ಣು ಗಂಡು ತೋರಿಸಲಾಗುವುದು.
ಕಚೇರಿ ವಿಳಾಸ. 305. ತೊಗರಿ ಬೀದಿ, ಕೆಆರ್ ಮೊಹಲ್ಲಾ, ಮೈಸೂರು.
ಸಂಪರ್ಕಿಸಿ : ದೀಪ 9900651780
ಮಹಿಳಾ ಬ್ಯೂಟಿ ಪಾರ್ಲರ್‌ಗೆ ಅನುಭವವುಳ್ಳ ಬ್ಯೂಟಿಷಿಯನ್ ಬೇಕಾಗಿದ್ದಾರೆ

HOUSE FOR SALE
20x30, Duplex, 3 BHK
30x40,Duplex, 3 BHK
ವಿಜಯನಗರ 4ನೇ ಹಂತ, ಮೈಸೂರು
ಸಂಪರ್ಕಿಸಿ:
6366001419

40x60 ಸೈಟು @ Rs. 34 ಲಕ್ಷ
MUDA Approved Layout
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ
ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ ಚಾಮುಂಡಿ ಬೆಟ್ಟದ ಹಿಂಭಾಗ.
Call: 9538583377

ನಿವೃತ್ತರಿಗೆ ವಿಶೇಷ ಉದ್ಯೋಗ ಅವಕಾಶ
ಕೇಂದ್ರ, ರಾಜ್ಯ, ಬ್ಯಾಂಕಿಂಗ್, ಸಾರ್ವಜನಿಕ, ಖಾಸಗಿ ಕ್ಷೇತ್ರದ ನಿವೃತ್ತರು, Housewives, ಬಿಸಿನೆಸ್ Sector ಇವರಿಗೆ ಪ್ರಖ್ಯಾತ ಬ್ಯಾಂಕಿಂಗ್ ಸಮೂಹ ದಿಂದ ವಿಶೇಷ ಸುವರ್ಣಾವಕಾಶ. Free Seminar 23-1-23, 11 am. Hotel ಮೌರ್ಯ ರೆಸಿಡೆನ್ಸಿ, ಹರ್ಷ ರಸ್ತೆ (Woodland ಥಿಯೇಟರ್ ಹತ್ತಿರ), ಮೈಸೂರು. ಕೂಡಲೇ ಸಂಪರ್ಕಿಸಿ:
9845458130, 9482714256, 7349052084, 8971833194


ಬೇಕಾಗಿದ್ದಾರೆ
ಲೀಡಿಂಗ್ ಆಟೋಮೊಬೈಲ್ ಡೀಲರ್ ಶಿಪ್, ಮೈಸೂರು Ph- 0821-2404555/ 9632263202/8496907100
kshatriyaforcesales@gmail.com
ಸೇಲ್ಸ್ ಎಗ್ಸಿಕ್ಯುಟಿವ್/ಸರ್ವೀಸ್ ಅಡ್ವೈಸರ್/ ಫ್ಲೋರ್ ಇಂಚಾರ್ಜ್ /ಮೆಕ್ಯಾನಿಕ್ಸ್ / ಟಿಂಕರಿಂಗ್/ ಎಲೆಕ್ಟ್ರಿಷಿಯನ್ ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ ಅನುಭವ ಹೊಂದಿರಬೇಕು

MEDICAL SHOP FOR SALE
A running Medical Shop for Sale in Vidyaranyapuram, Mysore on “As is Where Is” Basis for Rs. 1,20,000/-
Contact: 9916496568

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಬನ್ನಂಗಾಡಿಯಲ್ಲಿ ಡಿಸಿಸಿ ಬ್ಯಾಂಕ್ ನೂತನ ಶಾಖೆ ಉದ್ಘಾಟನೆ



ಪಾಂಡವಪುರ, ಜ.20– ತಾಲೂಕಿನ ಬನ್ನಂಗಾಡಿಯಲ್ಲಿ ಡಿಸಿಸಿ ಬ್ಯಾಂಕ್ ನೂತನ ಶಾಖೆಯನ್ನು ಶಾಸಕ ಸಿ.ಎಸ್. ಪುಟ್ಟರಾಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸಹಕಾರಿ ಬ್ಯಾಂಕ್ ಸೌಲಭ್ಯಕ್ಕಾಗಿ ಈ ಭಾಗದ ಜನರು ಬೇರೆಡೆಗೆ ಹೋಗುವ ಸ್ಥಿತಿ ಇತ್ತು. ಹಾಗಾಗಿ ಗ್ರಾಮಸ್ಥರು ಕಳೆದ ಹಲವು ದಿನಗಳಿಂದ ಗ್ರಾಮದಲ್ಲಿ ಡಿಸಿಸಿ ಬ್ಯಾಂಕ್ ಶಾಖೆ ಆರಂಭಿಸುವಂತೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕರು ಬನ್ನಂಗಾಡಿಯಲ್ಲಿ ನೂತನ ಶಾಖೆ ಆರಂಭಿಸುವ ಮೂಲಕ ಈ ಭಾಗದ ಜನರು ಆರ್ಥಿಕ ವಹಿವಾಟು ನಡೆಸಲು ಅನುಕೂಲ ಮಾಡಿಕೊಟ್ಟಿದ್ದು, ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಾರ್ವಜನಿಕರು, ರೈತರು ಬ್ಯಾಂಕ್ ಜತೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಸಾಲ ಪಡೆದು ನಿಗದಿತ ಸಮಯಕ್ಕೆ ಮರುಪಾವತಿಸಬೇಕು. ಜಿಲ್ಲೆಯಲ್ಲಿ ಸಹಕಾರಿ ಬ್ಯಾಂಕ್‌ಗಳು ರೈತರ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದು, ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಸಮರ್ಪಕವಾಗಿ ಜನರು, ರೈತರಿಗೆ ತಲುಪಿಸುತ್ತಿವೆ. ಜಿಲ್ಲಾ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿ ಉತ್ತಮವಾಗಿ ಕೆಲಸ ಮಾಡುವ ಜೊತೆಗೆ ನೂತನ ಬ್ಯಾಂಕ್ ಶಾಖೆಗಳನ್ನು ಆರಂಭಿಸುವ ಮೂಲಕ ಬ್ಯಾಂಕ್ ವ್ಯವಹಾರ ಜನರ ಕೈಗೆಟುಕುವಷ್ಟರ ಮಟ್ಟಿಕೆ ಕೆಲಸ ಮಾಡುತ್ತಿವೆ ಎಂದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಉಮೇಶ್ ಮಾತನಾಡಿ, ಜಿಲ್ಲೆಯ ರೈತರಿಗೆ ಸಹಕಾರ ತತ್ವದಲ್ಲಿ ನಂಬಿಕೆ ಬೆಳೆಸುವ ಉದ್ದೇಶದಿಂದ ಜಿಲ್ಲೆಯ 55 ಡಿಸಿಸಿ ಬ್ಯಾಂಕ್‌ಗಳ ಜೊತೆಗೆ ಹೊಸದಾಗಿ 10 ಡಿಸಿಸಿ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ. ಶುಕ್ರವಾರ ಬನ್ನಂಗಾಡಿ ಸೇರಿದಂತೆ 5 ನೂತನ ಬ್ಯಾಂಕ್ ಶಾಖೆಗೆ ಚಾಲನೆ ನೀಡಲಾಗುತ್ತಿದ್ದು, ಶನಿವಾರ ಮತ್ತೆ 5 ಹೊಸ ಶಾಖಾ ಬ್ಯಾಂಕ್‌ಗಳಿಗೆ ಚಾಲನೆ ನೀಡಲಾಗುವುದು. ಜೊತೆಗೆ ಇನ್ನೂ 15 ಹೊಸ ಬ್ಯಾಂಕ್ ಶಾಖೆಗಳನ್ನು ಸ್ಥಾಪಿಸಲು ಚಿಂತಿಸಲಾಗಿದೆ ಎಂದರು.

ಈ ವೇಳೆ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಚಂದ್ರಶೇಖರ್, ಕಾಳೇಗೌಡ, ದಿನೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶ್ವಂತ್ ಕುಮಾರ್, ಡಿಸಿಸಿ ಬ್ಯಾಂಕ್ ಸಿಇಓ ಶಶಿಕುಮಾರ್, ಜನರಲ್ ಮ್ಯಾನೇಜರ್ ರೂಪಶ್ರೀ, ಅಧಿಕಾರಿಗಳಾದ ಶಂಕರ್, ಪುಟ್ಟಸ್ವಾಮಿ, ಬ್ಯಾಂಕ್ ವ್ಯವಸ್ಥಾಪಕ ಶಂಕರ್, ದೊರೆಸ್ವಾಮಿ, ಸೌಮ್ಯಶ್ರೀ, ಡೇರಿ ಅಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಕರೀಗೌಡ, ನಿರ್ದೇಶಕರಾದ ರಾಮೇಗೌಡ, ಬಿ.ಜೆ.ಸ್ವಾಮಿ, ಬಿ.ಎಸ್.ಯೋಗೀಶ್, ಜಗದೀಶ್, ಶೈಲಜಾ, ಯಶೋಧಮ್ಮ, ನಾರಾಯಣ, ದೊಡ್ಡೇಗೌಡ, ತಮ್ಮಣ್ಣಚಾರ್, ಬಿ.ಹೆಚ್.ಶ್ರೀನಿವಾಸ್, ಕಾರ್ಯದರ್ಶಿ ಪ್ರಸನ್ನ, ಬಿ.ಪಿ.ಶ್ರೀನಿವಾಸ್, ಬಿ.ಎಸ್.ಶ್ರೀನಿವಾಸ್ ಹಲವರಿದ್ದರು.

ಫೆ.9ಕ್ಕೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ: ಸಿಎಸ್‌ಪಿ

ಬನ್ನಂಗಾಡಿಯಲ್ಲಿ ಫೆ.9ರಂದು ಕಸಾಪ ವತಿಯಿಂದ ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿದೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಗ್ರಾಮದಲ್ಲಿ ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನ ನಾಚಿಸುವಷ್ಟರ ಮಟ್ಟಿಗೆ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಬೇಕು. ಅದಕ್ಕಾಗಿ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಆಗಮಿಸಿದ್ದು, ಸಮ್ಮೇಳನ ನಡೆಸಲು ಸ್ಥಳ ಪರಿಶೀಲಿಸಲಿದ್ದಾರೆ. ನಂತರ ತಹಸೀಲ್ದಾರ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಗ್ರಾಮಸ್ಥರೊಂದಿಗೆ ಸಭೆ ನಡೆಸಿ ಚರ್ಚಿಸಲಿದ್ದಾರೆ. ಇದು ಪಕ್ಷಾತೀತವಾಗಿ ನಡೆಯುವ ನಾಡಹಬ್ಬವಾಗಿದ್ದು, ಎಲ್ಲರೂ ಪಾಲ್ಗೊಳ್ಳಬೇಕು. ನಾವೆಲ್ಲರೂ ನೆಲ, ಜಲ, ಭಾಷೆಯನ್ನು ತಾಯಿಯಂತೆ ಗೌರವಿಸಿ ಪೂಜಿಸಬೇಕು ಎಂದರು.

ಅಘಲಯ ಗ್ರಾಪಂಗೆ ಪುಟ್ಟೇಗೌಡ ಪ್ರಭಾರ ಅಧ್ಯಕ್ಷ



ಕೆ.ಆರ್.ಪೇಟೆ, ಜ.20– ತಾಲೂಕಿನ ಅಘಲಯ ಗ್ರಾಪಂ ಪ್ರಭಾರ ಅಧ್ಯಕ್ಷರಾಗಿ ಪುಟ್ಟೇಗೌಡ ಅಧಿಕಾರ ಸ್ವೀಕರಿಸಿದರು.

ಈ ಹಿಂದಿನ ಗ್ರಾಪಂ ಅಧ್ಯಕ್ಷೆ ಹೇಮಾವತಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ನೂತನ ಅಧ್ಯಕ್ಷರ ಆಯ್ಕೆಯಾಗುವರೆಗೆ ಗ್ರಾಪಂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವಂತೆ ಪಾಂಡವಪುರ ಎಸಿ ಆದೇಶಿಸಿರುವ ಹಿನ್ನಲೆಯಲ್ಲಿ ಗ್ರಾಪಂ ಉಪಾಧ್ಯಕ್ಷ ಪುಟ್ಟೇಗೌಡ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭ ಗ್ರಾಮದ ಮುಖಂಡರು, ಗ್ರಾಪಂ ಸದಸ್ಯರು, ಪಿಡಿಓ ಜಕಾತಿ, ಕಾರ್ಯದರ್ಶಿ ಗಣೇಶ್ ಇತರರಿದ್ದರು.

ಪ್ರಭಾರ ಅಧ್ಯಕ್ಷ ಪುಟ್ಟೇಗೌಡ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ನರೇಗಾ ಯೋಜನೆ ವರದಾನವಾಗಿದೆ. ಕೃಷಿ ಹೊಂಡ ನಿರ್ಮಾಣ, ಜಾನುವಾರು ತೊಟ್ಟಿ, ಕೊಟ್ಟಿಗೆ ನಿರ್ಮಾಣ, ಜಮೀನು ಅಭಿವೃದ್ಧಿ, ಕೆರೆ–ಕಟ್ಟೆಗಳ ಹೂಳೆತ್ತುವುದು, ಅಂತರ್ಜಲ ವೃದ್ಧಿಗೆ ಚೆಕ್ ಡ್ಯಾಮ್, ಇಂಗು ಗುಂಡಿಗಳ ನಿರ್ಮಾಣ, ಮಳೆ ನೀರು ಸಂಗ್ರಹಿಸುವುದು, ಸಸಿಗಳನ್ನು ನೆಟ್ಟು ತೋಪುಗಳನ್ನು ನಿರ್ಮಿಸುವುದು ಸೇರಿದಂತೆ ಹತ್ತಾರು ಕಾಮಗಾರಿಗಳನ್ನು ಮಾಡಿ ಗ್ರಾಮಗಳ ಸಮಗ್ರ ಅಭಿವೃದ್ಧಿ ಶ್ರಮಿಸುವುದಾಗಿ ಭರವಸೆ ನೀಡಿದರು.

ಹೆಚ್‌ಡಿಕೆ ಮತ್ತೊಮ್ಮೆ ಮುಖ್ಯಮಂತ್ರಿಯಾಗುವುದು ಖಚಿತ

ಶಾಸಕ ಸುರೇಶ್‌ಗೌಡ ವಿಶ್ವಾಸ



ಮದ್ದೂರು, ಜ.20– ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಹೆಚ್.ಡಿ. ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾಗುವುದು ಖಚಿತ ಎಂದು ಶಾಸಕ ಸುರೇಶ್‌ಗೌಡ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಕೀಳಘಟ್ಟ ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದ ಸಮಗ್ರ ಅಭಿವೃದ್ಧಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಮಾತ್ರ ಸಾಧ್ಯ ಎಂಬುದು ರಾಜ್ಯದ ಜನರಿಗೆ ತಿಳಿದಿರುವ ಕಾರಣ ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದ 24 ಗಂಟೆಯೊಳಗೆ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ, ವಿಧವೆ, ಅಂಗವಿಕಲರು, ವಯೋವೃದ್ಧರಿಗೆ 5 ಸಾವಿರ ಮಾಸಾಶನ ನೀಡುವ ಯೋಜನೆಗಳನ್ನು ಜಾರಿಗೆ ತಂದು ಅನುಕೂಲ ಕಲ್ಪಿಸಲಿದ್ದಾರೆ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಪಂಚರತ್ನ ರಥಯಾತ್ರೆ ಹೊಸ ಸಂಚಲನ ಉಂಟು ಮಾಡಿದ್ದು, ಉತ್ತರ ಕರ್ನಾಟಕದಲ್ಲೂ ನಿರೀಕ್ಷೆಗೂ ಮೀರಿ ಬೆಂಬಲ ವ್ಯಕ್ತವಾಗುತ್ತಿರುವುದರಿಂದ ವಿರೋಧ ಪಕ್ಷದವರಿಗೆ ನಡುಕ ಉಂಟಾಗಿದೆ ಎಂದರು.

ಕೊಪ್ಪ ಭಾಗದ ಅಭಿವೃದ್ಧಿಗೆ 250 ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ಮಾಡಲಾಗಿದೆ. ಕೊಪ್ಪ ಭಾಗದ ಸಮಗ್ರ ಅಭಿವೃದ್ಧಿ ನನ್ನ ಕನಸಾಗಿದ್ದು, ಇನ್ನೂ 170 ಕೋಟಿ ರೂ. ಅನುದಾನ ಟೆಂಡರ್ ಹಂತದಲ್ಲಿದೆ. ಟೆಂಡರ್ ಪೂರ್ಣಗೊಂಡರೆ ಕೊಪ್ಪ ಭಾಗದಲ್ಲಿ ಮತಷ್ಟು ಅಭಿವೃದ್ಧಿ ಕಾರ್ಯ ನಡೆಯಲಿವೆ ಎಂದರು.

ಹೆಚ್.ಡಿ.ದೇವೇಗೌಡ, ಹೆಚ್.ಡಿ.ಕುಮಾರಸ್ವಾಮಿ ಇರುವವರೆಗೂ ಜೆಡಿಎಸ್ ಭದ್ರವಾಗಿರುತ್ತದೆ. ವಿರೋಧ ಪಕ್ಷದವರು ಯಾವುದೇ ಕಾರ್ಯತಂತ್ರ ರೂಪಿಸಿದರು ನಾವು ಹೆದರಬೇಕಾದ ಪ್ರಶ್ನೆ ಇಲ್ಲ ಎಂದರು.

ಮಾಜಿ ಸಚಿವ ಚಲುವರಾಯಸ್ವಾಮಿ, ಹೆಚ್.ಡಿ.ದೇವೇಗೌಡರನ್ನು ಪ್ರಧಾನಿ ಮಾಡಿದ್ದಾರೆ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಅವರಿಂದಲೇ ಜೆಡಿಎಸ್ ಬಲಿಷ್ಠಗೊಂಡಿದೆ ಅವರು ತುಂಬಾ ದೊಡ್ಡವರು. ಅವರ ಬಗ್ಗೆ ನಾವು ಹೆಚ್ಚು ಮಾತನಾಡುವುದು ಬೇಡ ಎಂದು ವ್ಯಂಗ್ಯವಾಡಿದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ತಮ್ಮಯ್ಯ, ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಕುಶ, ಯುವ ಘಟಕದ ಜಿಲ್ಲಾ ಉಪಾಧ್ಯಕ್ಷ ಕೆ.ಟಿ.ಪ್ರದೀಪ್‌ಗೌಡ, ಮುಖಂಡರಾದ ಮಧು, ಇಂದುಶೇಖರ್, ಲಕ್ಷ್ಮಣ್, ಪುಟ್ಟಸ್ವಾಮಿ, ನಂಜೇಗೌಡ, ಸೋಮ, ನಾರಾಯಣಸ್ವಾಮಿ, ಚನ್ನರಾಜು, ಟಿ.ಹುಚ್ಚಪ್ಪ, ಚನ್ನಪ್ಪ, ಅಪ್ಪಾಜಿ ಇದ್ದರು.



ಶ್ರೀರಂಗಪಟ್ಟಣ ತಾಲೂಕಿನ ಬಾಬುರಾಯನಕೊಪ್ಪಲು ಗ್ರಾಮದಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅನುದಾನದ 26 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗ್ರಾಪಂ ಸದಸ್ಯ ಶ್ರೀನಿವಾಸ್ ಚಾಲನೆ ನೀಡಿದರು. ಈ ವೇಳೆ ಜೆಡಿಎಸ್ ಮುಖಂಡರಾದ ಮರೀಗೌಡ, ತಿಲಕ್‌ಕುಮಾರ್, ಸುಕೇಶ್‌ಕುಮಾರ್, ನಾರಾಯಣ್, ಚಲುವರಾಜು, ಕುಮಾರಸ್ವಾಮಿ, ಡೈರಿ ಅಧ್ಯಕ್ಷ ಮಹೇಂದ್ರ ಸೇರಿದಂತೆ ಇನ್ನಿತರರಿದ್ದರು.

ಕೆವಿಐಸಿಯಿಂದ ಉದ್ಯೋಗಾವಕಾಶ ಸೃಷ್ಟಿ: ಮನೋಜ್‌ಕುಮಾರ್



ಮಳವಳ್ಳಿ, ಜ.20– ಕೆವಿಐಸಿ ತನ್ನ ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳ ಮೂಲಕ ಯುವಕರಿಗೆ, ವಿಶೇಷವಾಗಿ ಮಹಿಳೆಯರಿಗೆ ಮತ್ತು ಗುಡ್ಡಗಾಡು ಪ್ರದೇಶಗಳ ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದು ಕೆವಿಐಸಿ ಅಧ್ಯಕ್ಷ ಮನೋಜ್ ಕುಮಾರ್ ತಿಳಿಸಿದರು.

ತಾಲೂಕಿನ ಬಿ.ಜಿ.ಪುರದಲ್ಲಿ ಕೆವಿಐಸಿ ಜಾರಿಗೊಳಿಸಿದ ಹನಿ ಮಿಷನ್ ಕಾರ್ಯಕ್ರಮದಡಿ ಉಪಕರಣಗಳು ಮತ್ತು ಜೇನು ನೊಣಗಳು ಸೇರಿದಂತೆ 300 ಜೇನು ಪೆಟ್ಟಿಗೆಗಳನ್ನು ವಿತರಿಸಿ ಮಾತನಾಡಿದ ಅವರು, ಇಂದು ಲಕ್ಷಾಂತರ ಮಂದಿ ಸ್ವಾವಲಂಬನೆ ಬದುಕಿಗೆ ದಾರಿ ಕಂಡುಕೊಳ್ಳುತ್ತಿದ್ದಾರೆ. ಅವರ ಮನೆಬಾಗಿಲಲ್ಲಿ ಸ್ವಾಭಿಮಾನದಿಂದ ಚರಕಗಳಲ್ಲಿ ನೂಲು ನೂಲುವ ಮೂಲಕ ಜೀವನೋಪಾಯ ಕಂಡುಕೊಂಡು ಕುಟುಂಬದ ದೈನಂದಿನ ಅಗತ್ಯ ಪೂರೈಸಿಕೊಳ್ಳುತ್ತಿದ್ದಾರೆ ಎಂದರು.

ಕೆವಿಐಸಿ ತನ್ನ ವೈವಿಧ್ಯಮಯ ಪ್ರಯತ್ನಗಳ ಮೂಲಕ ದೇಶದಲ್ಲಿ ಹೆಚ್ಚುವರಿ ಉದ್ಯೋಗಾವಕಾಶ ಸೃಷ್ಟಿಸಲು ಕೊಡುಗೆ ನೀಡುತ್ತಿದೆ. ಇದರಿಂದ ಹೆಚ್ಚು ಹೆಚ್ಚು ಹಣ ಕುಶಲ ಕರ್ಮಿಗಳ ಕೈಗೆ ತಲುಪುತ್ತದೆ. ಇದರಿಂದ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವುದಲ್ಲದೆ ಸಮಾಜದ ಕಟ್ಟಕಡೆ ಜನರಿಗೂ ಲಾಭದ ಫಲ ತಲುಪುತ್ತದೆ ಎಂದರು.

ಖಾದಿಯನ್ನು ಮರು ಜನಪ್ರಿಯಗೊಳಿಸಿದ ಪ್ರಧಾನಿ ಮೋದಿಯವರಿಗೆ ಕೃತಜ್ಞತೆ ಸಲ್ಲಿಸಿದ ಅವರು, ಖಾದಿ ಪುನರುಜ್ಜೀವನಗೊಳಿಸುವ ಮತ್ತು ಖಾದಿ ಭಾರತವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಕೆಲಸವನ್ನು ನಮ್ಮ ಪ್ರಧಾನಿ ಮಾಡಿದ್ದು, ಫ್ಯಾಷನ್‌ಗಾಗಿ ಖಾದಿ ಮತ್ತು ಪರಿವರ್ತನೆಗಾಗಿ ಖಾದಿ ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಸರ್ಕಾರದ ಧ್ಯೇಯವಾಗಿದೆ ಎಂದರು.

ಉತ್ಪಾದನಾ ಉದ್ಯಮಗಳನ್ನು ಉತ್ತೇಜಿಸುವ ಸಲುವಾಗಿ, ಉತ್ಪಾದನಾ ವಲಯದ ಅಡಿ ಘಟಕಗಳನ್ನು ಸ್ಥಾಪಿಸಲು ಗರಿಷ್ಠ ವೆಚ್ಚವನ್ನು ಭಾರತ ಸರ್ಕಾರ 25 ಲಕ್ಷದಿಂದ 50 ಲಕ್ಷ ರೂ.ವರೆಗೆ ಹೆಚ್ಚಿಸಲಾಗಿದೆ. ಇದು PMEGP ಯೋಜನೆಯಡಿ ಹೊಸ ಉದ್ಯಮಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುತ್ತದೆ ಎಂದರು.

ಬಜೆಟ್‌ನಲ್ಲಿ ಮಂಡ್ಯದಲ್ಲಿ 100 ಬೆಡ್‌ಗಳ ಟ್ರಾಮಾ ಕೇರ್ ಆಸ್ಪತ್ರೆ ಘೋಷಿಸಲು

ಸಿಎಂಗೆ ಶಿಫಾರಸು ಮಾಡುವಂತೆ ಎಸ್‌ಎಂಕೆಗೆ ಮನವಿ

ಮಂಡ್ಯ, ಜ.20– ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ–275ರಲ್ಲಿ ಹೆಚ್ಚಿನ ಅಪಘಾತ ಸಂಭವಿಸುವ ಸಾಧ್ಯತೆ ಇರುವುದರಿಂದ ಮಂಡ್ಯದಲ್ಲಿ 100 ಬೆಡ್‌ಗಳ ಹೊಸ ಟ್ರಾಮಾ ಕೇರ್ ಆಸ್ಪತ್ರೆ ಅವಶ್ಯವಿದ್ದು, ಮುಂಬರುವ ಬಜೆಟ್‌ನಲ್ಲಿ ಈ ಯೋಜನೆ ಸೇರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶಿಫಾರಸು ಮಾಡುವಂತೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡರ ನಿಯೋಗ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರಿಗೆ ಮನವಿ ಸಲ್ಲಿಸಿತು.

ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಇದೀಗ ಸೂಪರ್ ಫಾಸ್ಟ್ ಮಾರ್ಗವಾಗಿದ್ದು, ಇಲ್ಲಿ ಅಪಘಾತಗಳು ಸಂಭವಿಸಿದರೇ ಮೈಸೂರು ಅಥವಾ ಬೆಂಗಳೂರಿಗೆ ಗಾಯಾಳುಗಳನ್ನು ದಾಖಲಿಸಬೇಕಾದ ಪರಿಸ್ಥಿತಿ ಇದೆ. ಈ ವೇಳೆ ಅಗತ್ಯ ಚಿಕಿತ್ಸೆ ದೊರಕದೆ ಗಾಯಾಳು ಸಾವನ್ನಪ್ಪುವ ಸಾಧ್ಯತೆ ಇರುವುದರಿಂದ ಮಂಡ್ಯದಲ್ಲಿ 100 ಬೆಡ್‌ಗಳ ಟ್ರಾಮಾ ಕೇರ್ ಆಸ್ಪತ್ರೆ ತೆರೆಯಬೇಕಾದ ತೀವ್ರತೆ ಬಗ್ಗೆ ದಿನೇಶ್ ಗೂಳಿಗೌಡ ಮನವರಿಕೆ ಮಾಡಿಕೊಟ್ಟರು. ಈ ವೇಳೆ ಮುಖಂಡ ಎಸ್.ಗುರುಚರಣ್, ಮದ್ದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಣ್ಣ, ಮಾಜಿ ಅಧ್ಯಕ್ಷ ರಾಮಕೃಷ್ಣ, ಮುಖಂಡರಾದ ಜೋಗಿಗೌಡ, ಸಂದರ್ಶ್, ರಾಘು ಹಾಗೂ ಪ್ರಶಾಂತ್ ಹಾಜರಿದ್ದರು. ಇದೇ ವೇಳೆ ಆರೋಗ್ಯ ಸಚಿವರಿಗೂ ದಿನೇಶ್ ಗೂಳಿಗೌಡ ಮನವಿ ಸಲ್ಲಿಸಿದ್ದಾರೆ.

ಒಂದನೇ ಪುಟದಿಂದ

ಮರು ಹೊಂದಾಣಿಕೆಗೆ ಅವಕಾಶ

ಈ ಸಂಬಂಧ ಹೈ ಕೋರ್ಟ್ ಕೂಡ ನಿರ್ದೇಶನ ನೀಡಿತ್ತು. ಗಣಿ ಅಧಿಕಾರಿಗಳು ಸೂಕ್ತ ಅನಿಸಿದರೆ ಮಂಜೂರಾದ ಮೂಲ ಗುತ್ತಿಗೆ ಪ್ರದೇಶವನ್ನು ಮರು ಹೊಂದಾಣಿಕೆ ಮಾಡಲು ಅನುಮತಿ ನೀಡಬಹುದಾಗಿದೆ. ಮ್ಯಾನ್ಯುಯಲ್ ಆಗಿ ಕ್ವಾರಿ ನಡೆಸುವವರು ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದರು. ಮಂಜೂರಾದ ಮೂಲ ಗುತ್ತಿಗೆ ಪ್ರದೇಶ ಬಿಟ್ಟು ಕಲ್ಲು ಕ್ವಾರಿ ನಡೆಸುವ ಪ್ರದೇಶವನ್ನು ಸಕ್ರಮಗೊಳಿಸಲಾಗುತ್ತದೆ. ಕಲ್ಲು ಗಣಿಕಾರಿಕೆಗೆ ಮಾಡದೇ ಉಳಿದಿರುವ ಮೂಲ ಗುತ್ತಿಗೆ ಪ್ರದೇಶವನ್ನು ವಾಪಸು ವಶಕ್ಕೆ ಪಡೆಯಲಾಗುತ್ತದೆ ಎಂದು ತಿಳಿಸಿದರು.

ಕಬ್ಬು ಅರೆಯುವ ಸೆಸ್ ಪರಿಷ್ಕರಣೆ: ಕಬ್ಬು ಮತ್ತು ಇತರ ಸಕ್ಕರೆ ಅಂಶ ಹೊಂದಿರುವ ಬೆಳೆಗಳ ಬೇಸಾಯದ ಸಂಶೋಧನೆ ಕೈಗೊಳ್ಳುವ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಕ್ಕರೆ ನಿಯಂತ್ರಣ ನಿಯಮಕ್ಕೆ ತಿದ್ದುಪಡಿ ಮಾಡಿ ಸೆಸ್ ಸಂಗ್ರಹ ಮೊತ್ತ ಪರಿಷ್ಕರಿಸಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಅದರಂತೆ ಕನಿಷ್ಠ 2500 ಟಿಸಿಡಿ ಕಬ್ಬು ಅರೆಯುವುದಕ್ಕೆ ಸಕ್ಕರೆ ಕಾರ್ಖಾನೆಗೆ ಪ್ರಸಕ್ತ 10,000 ರೂ. ಸೆಸ್ ವಿಧಿಸಲಾಗುತ್ತಿತ್ತು. ಅದನ್ನು 50,000 ರೂ.ಗೆ ಏರಿಕೆ ಮಾಡಲಾಗಿದೆ. 2500–5000 ಟಿಸಿಡಿಗೆ 15,000 ರೂ. ಇದ್ದ ಸೆಸ್ ಅನ್ನು ಒಂದು ಲಕ್ಷರೂಗೆ ಹಾಗೂ 5,000 ಟಿಸಿಡಿ ಅಧಿಕ ಕಬ್ಬು ಅರೆಯುವುದರ ಮೇಲೆ 25,000 ರೂ. ವಿಧಿಸುತ್ತಿದ್ದ ಸೆಸ್ ಅನ್ನು 1.50 ಲಕ್ಷ ರೂ.ಗೆ, 15,000 ಟಿಸಿಡಿಗಿಂತ ಹೆಚ್ಚು ಕಬ್ಬು ಅರೆಯುವುದಕ್ಕೆ 2 ಲಕ್ಷ ರೂ. ಸೆಸ್ ಹೆಚ್ಚಳ ಮಾಡಿದ್ದೇವೆ.

ಸುಮಾರು 30–40 ವರ್ಷದಿಂದ ಸೆಸ್ ಮೊತ್ತ ಪರಿಷ್ಕರಿಸಿರಲಿಲ್ಲ. ಹೀಗಾಗಿ ಸೆಸ್ ಪರಿಷ್ಕರಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಕೆಎಸ್‌ಎಫ್‌ಸಿ ಒನ್ ಟೈಂ ತೀರುವಳಿಗೆ ಅವಕಾಶ: ಕರ್ನಾಟಕ ರಾಜ್ಯ ಹಣಕಾಸು ನಿಗಮದ ಎನ್‌ಪಿಎಯಾದ ತೀರುವಳಿಗೆ ಒನ್‌ಟೈಂ ಇತ್ಯರ್ಥಕ್ಕೆ ಅವಕಾಶ ನೀಡಲು ತೀರ್ಮಾನ. ಸಣ್ಣ ಪ್ರಮಾಣದ ಒನ್‌ಟೈಂ ಸೆಟ್ಲ್‌ಮೆಂಟ್‌ಗೆ 2003 ರಿಂದ ಇಲ್ಲಿಯವರೆಗೆ ಅನ್ವಯವಾಗುವಂತೆ ಅವಕಾಶ ನೀಡಲಾಗುವುದು. ಸದ್ಯ ನಿಗಮದಲ್ಲಿ ಅಸಲು 127 ಕೋಟಿ ರೂ. ಬಾಕಿ ಇದ್ದರೆ, 217.65 ಕೋಟಿ ಬಡ್ಡಿ ಮೊತ್ತ ಬಾಕಿ ಇದೆ. ಒಟ್ಟು 345 ಕೋಟಿ ರೂ. ಬಾಕಿ ಇದೆ. ಅಭೀಮ್ ಯೋಜನೆಯಡಿ 114 ನಗರ ಕ್ಲಿನಿಕ್‌ಗೆ ಅವಕಾಶ ಮಾಡಿಕೊಟ್ಟಿದ್ದು, ಇವು ನಮ್ಮ ಕ್ಲಿನಿಕ್ ಆಗಿ ರೂಪಾಂತರವಾಗಿರಲಿದೆ. ಎಎನ್‌ಎಂ ಸೆಂಟರ್ ಹೆಚ್ಚು ಶಕ್ತಿ ನೀಡಲು ಸಿಬ್ಬಂದಿ ನಿಯೋಜನೆಗೆ ಒಪ್ಪಿಗೆ. ಒಟ್ಟು 847 ಕೇಂದ್ರಗಳ ಮೇಲ್ದರ್ಜೆಗೇರಿಸಲು ಒಪ್ಪಿಗೆ. 71.56 ಕೋಟಿ ರೂ. ಮೊತ್ತಕ್ಕೆ ಅಸ್ತು.


ಮಡಿಕೇರಿ ಆಸ್ಪತ್ರೆಯಲ್ಲಿ ತುರ್ತು ನಿಗಾ ಘಟಕ: ಮಡಿಕೇರಿ, ಬೆಳಗಾವಿ, ಚಿತ್ರದುರ್ಗ ಆಸ್ಪತ್ರೆ ಯಲ್ಲಿ ತುರ್ತು ನಿಗಾ ಘಟಕ ಆರಂಭಿಸಲು 102 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಕಲಾಸಿಪಾಳ್ಯ ನವೀನ ಮಾದರಿ ಬಸ್ ನಿಲ್ದಾಣಕ್ಕೆ 63 ಕೋಟಿ ರೂ. ಘಟನೋತ್ತರ ಅನುಮತಿ. ಉಡುಪಿ, ಶಿವಮೊಗ್ಗ, ಉ.ಕ.ದಲ್ಲಿ ನಾರಾಯಣ ಗುರು ಸ್ಮರಣಾರ್ಥ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಸತಿ ಶಾಲೆ ಸ್ಥಾಪನೆಗೆ 72 ಕೋಟಿ ರೂ. ಅನುದಾನಕ್ಕೆ ಸಮ್ಮತಿಸಿದೆ.

ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಶೇಕಡ 5% ರಷ್ಟು ನಿವೇಶನಗಳನ್ನು ಮೃತ ಮಾಜಿ ಸೈನಿಕರ ಕುಟುಂಬಕ್ಕೆ ನೀಡಲು ಒಪ್ಪಿಗೆ ನೀಡಿದೆ. ರಾಜ್ಯಾದ್ಯಂತ ಆರು ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ನೂರು ಅಂಬೇಡ್ಕರ್ ವಸತಿ ನಿಲಯಗಳನ್ನು ನಿರ್ಮಿಸಲು ಸಭೆ ಒಪ್ಪಿಗೆ ನೀಡಿದೆ ಎಂದು ಇದೇ ಸಂದರ್ಭದಲ್ಲಿ ಅವರು ಹೇಳಿದರು.

ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೀಠೋಪಕರಣಗಳ ಖರೀದಿಗಾಗಿ ಹದಿನೈದು ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲಾಗಿದೆ. ನಾರಾಯಣಗುರು ವಸತಿ ಶಾಲೆ ನಿರ್ಮಿಸಲು ಎಪ್ಪತ್ತೆರಡು ಕೋಟಿ ರೂಪಾಯಿ ಬಿಡುಗಡೆ ಮಾಡಲು ಸಭೆ ಸಮ್ಮತಿಸಿದೆ ಎಂದರು. ಬಾಲ್ಯ ವಿವಾಹ ತಡೆಯುವ ಉದ್ದೇಶದಿಂದ ಹೆಣ್ಣು ಮಕ್ಕಳಿಗೆ ಕೌಶಲ್ಯಾಧಾರಿತ ಶಿಕ್ಷಣ ನೀಡಲು 12.51 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದ ಅವರು, ರಾಜ್ಯಾದ್ಯಂತ ಐವತ್ತು ಖಾಸಗಿ ಆಸ್ಪತ್ರೆಗಳನ್ನು ನೂರು ಹಾಸಿಗೆಯ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲು ಹತ್ತೊಂಬತ್ತು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು ವಿವರ ನೀಡಿದರು.

ನದಿ ಗಡಿ ರಕ್ಷಣಾ ಆಯೋಗಕ್ಕೆ ಅನಂತಕೃಷ್ಣ ಅವರನ್ನು ನೇಮಕ ಮಾಡಲಾಗಿದೆ. ಕೆ.ಎಸ್.ಎಫ್.ಸಿ.ಯಲ್ಲಿ ಸಾಲ ಪಡೆದು ಸುಸ್ತಿದಾರರಾದವರಿಗೆ ಒಂದು ಕಂತಿನಲ್ಲಿ ಇತ್ಯರ್ಥ ಮಾಡಲು ಅವಕಾಶ ಒದಗಿಸಲಾಗುವುದು. ಸುಸ್ತಿದಾರರಿಂದ 345 ಕೋಟಿ ರೂಪಾಯಿ ಅಸಲು, 127 ಕೋಟಿ ಬಡ್ಡಿ ಬಾಕಿ ಇದೆ ಎಂದರು.

ನಿಧನ



ಪ್ರಭಾ

ಮೈಸೂರು, ಜ.20– ಮೈಸೂರಿನ ಜಯಲಕ್ಷ್ಮೀಪುರಂ ನಿವಾಸಿ, ಲೇಟ್ ದಶರಥ ಅವರ ಪತ್ನಿ ಪ್ರಭಾ(73) ಶುಕ್ರವಾರ ಸಂಜೆ ನಿಧನರಾದರು. ಮೃತರು ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ(ಜ.21) ಮಧ್ಯಾಹ್ನ 12.30ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯುವಕ-ಯುವತಿಯ ಒಣ ಪ್ರತಿಷ್ಠೆಯ ಹೈಡ್ರಾಮಾ

ಬಾನೆಟ್ ಏರಿದ ಯುವಕನ 2 ಕಿ.ಮೀ. ಹೊತ್ತೊಯ್ದ ಯುವತಿ ಕಾರು

ಮಾತಿನ ಚಕಮಕಿ, ಹಲ್ಲೆ, ದೌರ್ಜನ್ಯ ಸಂಬಂಧ, ಪರಸ್ಪರ ದೂರು ದಾಖಲು; ಸಂಬಂಧಿಸಿದವರು ಪೊಲೀಸ್ ವಶಕ್ಕೆ



ಬೆಂಗಳೂರು, ಜ.20–ಒಣ ಪ್ರತಿಷ್ಠೆಗೆ ಬಿದ್ದು ಯುವಕ ಹಾಗೂ ಯುವತಿ ಕಿತ್ತಾಡಿಕೊಂಡು ಪೊಲೀಸ್ ಠಾಣೆಯಲ್ಲಿ ಪರಸ್ಪರ ಕೇಸ್ ದಾಖಲಿಸಿ, ಬಂಧನಕ್ಕೊಳಗಾದ ಘಟನೆ ಜ್ಞಾನಭಾರತಿ ಪೊಲೀಸ್ ಠಾಣೆ ವ್ಯಾಪ್ತಿಯ ಉಲ್ಲಾಳ ಮುಖ್ಯ ರಸ್ತೆಯಲ್ಲಿ ಇಂದು ಬೆಳಗ್ಗೆ ನಡೆದಿದೆ.

ಕ್ಷುಲ್ಲಕ ಕಾರಣಕ್ಕಾಗಿ ಆರಂಭವಾದ ಸಣ್ಣ ಪ್ರಮಾಣದ ಮಾತಿನ ಚಕಮಕಿಯು ತನ್ನ ಕಾರಿನ ಬಾನೆಟ್ ಮೇಲೇರಿದ ಯುವಕನನ್ನು ಯುವತಿ ಸುಮಾರು 2 ಕಿ.ಮೀ. ದೂರ ಹೊತ್ತೊಯ್ದಿದ್ದಾಳೆ. ಈ ವೇಳೆ ಯುವಕನ ಪರ ಗುಂಪು ಆಕೆಯ ಕಾರನ್ನು ಜಖಂಗೊಳಿಸಿದ್ದು, ಪರಸ್ಪರ ಪ್ರಕರಣ ದಾಖಲಾಗಿ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ವಿವರ: ಇಂದು ಬೆಳಗ್ಗೆ 10.30ರ ಸುಮಾರಿನಲ್ಲಿ ಉಲ್ಲಾಳ ಸರ್ಕಲ್ ಜಂಕ್ಷನ್‌ನ ಟ್ರಾಫಿಕ್ ಸಿಗ್ನಲ್‌ನಲ್ಲಿ ದರ್ಶನ್ ಎಂಬ ಯುವಕ ಶಿಫ್ಟ್ ಕಾರಿನಲ್ಲಿ ನಿಂತಿದ್ದ ಎನ್ನಲಾಗಿದ್ದು, ರೆಡ್ ಸಿಗ್ನಲ್ ಇದ್ದರೂ ಪ್ರಿಯಾಂಕ ಎಂಬ ಯುವತಿ ಟಾಟಾ ಎಕ್ಸಲ್ ಕಾರನ್ನು ಚಾಲನೆ ಮಾಡಿಕೊಂಡು ಬಂದು ಆತನ ಕಾರಿಗೆ ಅಡ್ಡಲಾಗಿ ನಿಲ್ಲಿಸಿದ್ದಾಳೆ. ಇದನ್ನು ಪ್ರಶ್ನಿಸಿದಾಗ ಆಕೆ ಮಧ್ಯದ ಬೆರಳನ್ನು ತೋರಿಸಿ ಯುವಕನನ್ನು ಛೇಡಿಸಿದ್ದಾಳೆ. ಅದೇ ವೇಳೆ ಸಿಗ್ನಲ್ ಆನ್ ಆಗಿದ್ದು, ವೇಗವಾಗಿ ಕಾರು ಚಾಲನೆ ಮಾಡಿಕೊಂಡು ಹೋಗಿದ್ದಾಳೆ ಎಂದು ಹೇಳಲಾಗಿದೆ.

ಆಕೆಯ ಕಾರನ್ನು ಬೆನ್ನತ್ತಿದ ದರ್ಶನ್, ಉಲ್ಲಾಳ ಮುಖ್ಯ ರಸ್ತೆಯಲ್ಲಿರುವ ಮಂಗಳೂರು ಕಾಲೇಜು ಬಳಿ ಕಾರನ್ನು ಅಡ್ಡಗಟ್ಟಿ ಅದರ ಮುಂದೆ ನಿಂತು ನಿಲ್ಲಿಸುವಂತೆ ಹೇಳಿದಾಗ ಯುವತಿ ಆತನ ಮೇಲೆಯೇ ಕಾರನ್ನು ಹರಿಸಲು ಪ್ರಯತ್ನಿಸಿದ್ದು, ಈ ವೇಳೆ ಯುವಕ ಹಾರಿ ಬಾನೆಟ್ ಮೇಲೆ ನೇತು ಹಾಕಿಕೊಂಡಿದ್ದಾನೆ. ಆದರೂ ಆಕೆ ವೇಗವಾಗಿ ಕಾರು ಚಾಲನೆ ಮಾಡಿಕೊಂಡು ಹೋಗಿದ್ದು, ಕೆಲ ಯುವಕರು ಬೈಕ್‌ಗಳಲ್ಲಿ ಆಕೆಯ ಕಾರನ್ನು ಬೆನ್ನತ್ತಿ ಸುಮಾರು 2 ಕಿ.ಮೀ. ಅಂತರದಲ್ಲಿ ತಡೆದಿದ್ದಲ್ಲದೇ, ಕಾರಿನ ಗಾಜುಗಳನ್ನು ಒಡೆದು ಹಾಕಿದ್ದಾರೆ. ಅಲ್ಲದೇ ಯುವತಿ ಮತ್ತು ಆಕೆಯ ಜೊತೆಗಿದ್ದ ಯುವಕನ ಮೇಲೂ ಹಲ್ಲೆ ನಡೆಸಿದ್ದಾರೆ ಎಂದು ಹೇಳಲಾಗಿದೆ. ಯುವಕನನ್ನು ಬಾನೆಟ್ ಮೇಲೆ ಕಾರು ಹೊತ್ತೊಯ್ದ ದೃಶ್ಯಗಳು ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ.

ದರ್ಶನ್ ನೀಡಿದ ದೂರಿನನ್ವಯ ಜ್ಞಾನಭಾರತಿ ಠಾಣೆ ಪೊಲೀಸರು ಪ್ರಿಯಾಂಕ ಮತ್ತು ಆಕೆಯ ಸ್ನೇಹಿತನ ಮೇಲೆ ಪ್ರಕರಣ ದಾಖಲಿಸಿದ್ದು, ಪ್ರಿಯಾಂಕ ನೀಡಿದ ದೂರಿನನ್ವಯ ಲೈಂಗಿಕ ದೌರ್ಜನ್ಯ ಸೇರಿದಂತೆ ಕೆಲವು ಸೆಕ್ಷನ್‌ಗಳಡಿ ದರ್ಶನ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಒಟ್ಟು ಐವರನ್ನು ಬಂಧಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸೋಲಿಸಲು ತೆಲಂಗಾಣ ಮುಖ್ಯಮಂತ್ರಿ ಕೆಸಿಆರ್ ಕಾಂಗ್ರೆಸ್ ನಾಯಕರಿಗೆ 500 ಕೋಟಿ ಸುಪಾರಿ

ತೆಲಂಗಾಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರೇವಂತ ರೆಡ್ಡಿ ಗಂಭೀರ ಆರೋಪ

ಮೈಸೂರು, ಜ.20–ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ತೆಲಂಗಾಣ ಮುಖ್ಯಮಂತ್ರಿ ಕೆ.ಸಿ.ಚಂದ್ರಶೇಖರ್ ಅವರು ಕರ್ನಾಟಕದ ಕಾಂಗ್ರೆಸ್ ನಾಯಕರೊಬ್ಬರಿಗೆ 500 ಕೋಟಿ ರೂ. ಸುಪಾರಿ ನೀಡಲು ಮುಂದಾಗಿದ್ದಾರೆ ಎಂದು ತೆಲಂಗಾಣ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ರೇವಂತರೆಡ್ಡಿ ಗಂಭೀರ ಆರೋಪ ಮಾಡಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂಬುದನ್ನು ಅರಿತಿರುವ ಮುಖ್ಯಮಂತ್ರಿ ಕೆಸಿಆರ್ ಅವರು, ಕಾಂಗ್ರೆಸ್ ಗೆಲ್ಲುವಂತಹ ಕೆಲವು ಕ್ಷೇತ್ರಗಳಲ್ಲಿ ಫಲಿತಾಂಶ ಏರುಪೇರು ಮಾಡಲು ಸುಪಾರಿ ನೀಡಿದ್ದಾರೆ ಎಂದಿದ್ದಲ್ಲದೇ, ಪಕ್ಕದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿಮಗೇನು ಸಂಕಟ, ಯಾಕೆ ಹೀಗೆ ಮಾಡುತ್ತಿದ್ದೀರಿ ಎಂದು ಕೆಸಿಆರ್ ಅವರನ್ನು ಪ್ರಶ್ನಿಸಿದ್ದಾರೆ.

ತೆಲಂಗಾಣ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರ ಈ ಹೇಳಿಕೆ ತೆಲಂಗಾಣ ಮತ್ತು ಕರ್ನಾಟಕ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇತ್ತೀಚೆಗೆ ಸಿದ್ದರಾಮಯ್ಯ ಅವರ ಆಪ್ತರಾಗಿರುವ ಚಾಮರಾಜಪೇಟೆ ಶಾಸಕ ಜಮೀರ್ ಅಹಮದ್ ಅವರು ಹೈದರಾಬಾದ್‌ನಲ್ಲಿ ಕೆಸಿಆರ್ ಅವರನ್ನು ಭೇಟಿ ಮಾಡಿದ್ದರು. ಅವರ ಭೇಟಿಯ ಫೋಟೋಗಳು ವೈರಲ್ ಆಗಿದ್ದವು.



ಅದರ ಬೆನ್ನಲ್ಲೇ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಜಮೀರ್ ಅಹಮದ್ ಅವರನ್ನು ಕರೆಸಿಕೊಂಡು ಮಾತುಕತೆ ನಡೆಸಿದ್ದರು. ಇದೀಗ ಜಮೀರ್ ಅಹಮದ್ ಅವರಿಗೆ ಕೆಸಿಆರ್ ಸುಪಾರಿ ನೀಡಿದ್ದಾರೆ ಎಂಬ ಮಾತುಗಳು ವ್ಯಾಪಕವಾಗಿ ಕೇಳಿ ಬಂದಿವೆ.

ಈ ಸಂಬಂಧ ಮೈಸೂರಿನಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಜಮೀರ್ ಅಹಮದ್, ತಾವು ಹೈದರಾಬಾದ್‌ಗೆ ತೆರಳಿ ಕೆಸಿಆರ್ ಅವರನ್ನು ಭೇಟಿ ಮಾಡಿದ್ದು ನಿಜ. ಅಲ್ಲಿ ಶಾಸಕರಾಗಿರುವ ಸ್ನೇಹಿತ ರೋಹಿತ್ ರೆಡ್ಡಿ ಅವರ ಒತ್ತಾಯದ ಮೇರೆಗೆ ಕೆಸಿಆರ್ ಅವರನ್ನು ಭೇಟಿಯಾಗಿದ್ದೆ. ಇದರಲ್ಲಿ ಮುಚ್ಚು–ಮರೆ ಏನೂ ಇಲ್ಲ. ಆದರೆ ತಮಗೆ ಯಾವುದೇ ಸುಪಾರಿ ನೀಡಲಾಗಿಲ್ಲ. ತೆಲಂಗಾಣ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ ಕೂಡ ಯಾವುದೇ ಹೆಸರನ್ನು ಉಲ್ಲೇಖಿಸಿಲ್ಲ. ಹೀಗಾಗಿ ಸುಪಾರಿ ಪಡೆದಿರುವವರು ಯಾರು ಎಂಬುದನ್ನು ಅವರನ್ನೇ ಕೇಳಬೇಕಾಗಿದೆ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ನಾನು ಮಾತ್ರವಲ್ಲ, ಅನೇಕ ಮುಖಂಡರು ಕೆಸಿಆರ್ ಅವರನ್ನು ಭೇಟಿಯಾಗಿದ್ದಾರೆ. ಆದರೆ ನನ್ನ ವಿಚಾರ ಬಂದಾಗ ಮಾತ್ರ ದೊಡ್ಡಮಟ್ಟದಲ್ಲಿ ಪ್ರಚಾರವಾಗುತ್ತದೆ ಎಂದರು.

ಪ.ಮಲ್ಲೇಶ್ ನಿಧನಕ್ಕೆ ಸಂಸದ ಶ್ರೀನಿವಾಸ್‌ಪ್ರಸಾದ್ ಸಂತಾಪ




ಮೈಸೂರು, ಜ.20– ಪ್ರಗತಿಪರ ಹೋರಾಟದ ಕಾವು ದಿನೇ–ದಿನೆ ಕಡಿಮೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಪ್ರಖರ ಸಮಾಜವಾದಿ ಚಿಂತಕ ಪ.ಮಲ್ಲೇಶ ನಿಧನದಿಂದ ಸಮಾಜವಾದಿ ಚಿಂತಕರ ಕೊನೆಯ ಕೊಂಡಿಗಳಲ್ಲೊಂದು ಕಳಚಿಕೊಂಡಂತಾಗಿದೆ ಎಂದು ಚಾಮರಾಜನಗರ ಲೋಕಸಭಾ ಸಂಸದ ಶ್ರೀನಿವಾಸ್‌ಪ್ರಸಾದ್ ಅತೀವ ಸಂತಾಪ ಸೂಚಿಸಿದ್ದಾರೆ.

ಮಲ್ಲೇಶ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಆನರ್ಸ್ ಹಾಗೂ ಕನ್ನಡದಲ್ಲಿ ಎಂ.ಎ. ಪದವಿ ಪಡೆದುಕೊಂಡಿದ್ದರು. ವಿದ್ಯಾರ್ಥಿ ದಿಸೆಯಿಂದಲೂ ಪ್ರಗತಿಪರ ಚಿಂತನೆ ಮತ್ತು ಹೋರಾಟದ ಮಾರ್ಗದತ್ತ ಪ.ಮಲ್ಲೇಶ ಆಕರ್ಷಿತರಾಗಿದ್ದರು. ಎಲ್ಲ ರಂಗಗಳಲ್ಲಿ, ಎಲ್ಲಾ ಹಂತಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರೆಯಬೇಕೆಂದು ಅವರು ಯಾವಾಗಲೂ ಆಗ್ರಹಿಸುತ್ತಿದ್ದರು. ಶಿಕ್ಷಣ–ಆಡಳಿತ–ನ್ಯಾಯಾಂಗದಲ್ಲಿ ಕನ್ನಡ ಮಾಧ್ಯಮ ಜಾರಿಗೆ ಬರಬೇಕು ಎಂದು ಅವರು ಪ್ರತಿಪಾದಿಸುತ್ತಿದ್ದರು.

ಕನ್ನಡ ಭಾಷೆಯ ಬಗ್ಗೆ ಅಪಾರ ಅಭಿಮಾನ ಹೊಂದಿದ್ದರು. ಕನ್ನಡದ ಏಳಿಗೆಯ ಬಗ್ಗೆ ಅವರು ಹೊಂದಿದ್ದ ಕಾಳಜಿ ಮತ್ತು ಬದ್ಧತೆಯಿಂದಾಗಿ ಮೈಸೂರು ನಗರದಲ್ಲಿ ನೃಪತುಂಗ ಕನ್ನಡ ಮಾಧ್ಯಮ ಪ್ರೌಢಶಾಲೆ ಮತ್ತು ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸುವ ಪಿ.ಯು.ಸಿ, ಕಾಲೇಜು ಪ್ರಾರಂಭವಾದವು. ಮಲ್ಲೇಶ ಅವರು ಲೋಹಿಯಾ ಹಾಗೂ ಗಾಂಧೀಜಿ ಬದ್ಧತೆಯನ್ನು ಹೊಂದಿದ್ದರು. ಅವರು ಯಾವುದೇ ಪ್ರಗತಿಪರ ಚಳವಳಿಯಲ್ಲಿ ಭಾಗವಹಿಸಿದರೂ ಅಲ್ಲಿ ಅವರ ನೇರ ನಡೆ ಅವರ ತತ್ವ ಸಿದ್ಧಾಂತಗಳಲ್ಲಿ ಅಖಂಡವಾದ ನುಡಿ ನಿರ್ದಾಕ್ಷಿಣ್ಯ ವರ್ತನೆ ವ್ಯಕ್ತವಾಗುತ್ತಿತ್ತು. ತಾವು ನಂಬಿದ್ದ ಸೈದ್ಧಾಂತಿಕತೆಯನ್ನು ಬದಿಗಿರಿಸಿ ಯಾವುದೇ ವ್ಯವಸ್ಥೆಯೊಂದಿಗೆ ರಾಜಿಯಾಗುತ್ತಿರಲಿಲ್ಲ.

ಅವರು ಯಾವಾಗಲೂ ರೈತ–ದಲಿತ–ಮಹಿಳಾ ಪರ–ಕನ್ನಡ ಪರ ನಿಂತುಕೊಂಡು ಹೋರಾಟವನ್ನು ನಿಲ್ಲಿಸದೆ, ಮುಂದುವರಿಯುತ್ತಿದ್ದರು. ಪ್ರಗತಿಪರ ಹೋರಾಟ ಸಣ್ಣ ಪ್ರಮಾಣದ್ದಿರಲಿ, ದೊಡ್ಡ ಪ್ರಮಾಣದಲ್ಲಿರಲಿ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಅವರ ಚಳವಳಿಯ ಕಿಚ್ಚು ಮಾತ್ರ ಏಕ ಪ್ರಕಾರವಾಗಿ ಪ್ರಖರವಾಗಿರುತ್ತಿತ್ತು. ಸದಾ ಸಮಾಜಮುಖಿ, ಪ್ರಗತಿಪರ ಸಂಘಟನೆಗಳ ಜೊತೆಗೆ ತಮ್ಮನ್ನು ಗುರುತಿಸಿಕೊಂಡು, ಚಳವಳಿಯಲ್ಲಿ ನಿರತರಾಗಿರುತ್ತಿದ್ದರು. ಅವರದ್ದು ಸದಾ ಹೋರಾಟ ಮತ್ತು ಸಾರ್ಥಕವಾದ ಬದುಕಾಗಿತ್ತು. ಬದ್ಧತೆ ಅವರ ಹೋರಾಟದ ಮೂಲಮಂತ್ರವಾಗಿತ್ತು.

ಅವರು ಮೈಸೂರು ನಗರದಲ್ಲಿ ಸಮಾಜವಾದಿ ಚಿಂತಕರಲ್ಲಿ ಪ್ರಮುಖರಾಗಿದ್ದರು. ಜಯಪ್ರಕಾಶ ನಾರಾಯಣ ಅವರ ಸಮಗ್ರ ಕ್ರಾಂತಿಯ ಚಳವಳಿಯನ್ನು ಕರ್ನಾಟಕದಲ್ಲಿ ಸುಭದ್ರವಾಗಿ ಕಟ್ಟಿದವರಲ್ಲಿ ಅವರೂ ಒಬ್ಬರು. ಮೈಸೂರಿನಿಂದ ಕೆಲವು ಹೋರಾಟಗಾರರನ್ನು ನಿಯೋಗದ ಮೂಲಕ ದೆಹಲಿಗೆ ಕರೆದುಕೊಂಡು ಹೋಗಿ ಜಯಪ್ರಕಾಶ ನಾರಾಯಣ ಅವರನ್ನು ಅಲ್ಲಿಂದ ಮೈಸೂರಿಗೆ ಕರೆತಂದು ಸಾರ್ವಜನಿಕ ಸಮಾರಂಭದಲ್ಲಿ ಅವರು ಭಾಗವಹಿಸುವಂತೆ ಮಾಡಿದ್ದರಲ್ಲಿ ಮಲ್ಲೇಶ ಅವರ ಪಾತ್ರ ಪ್ರಧಾನವಾಗಿತ್ತು. ಪ್ರಖರ ಸಮಾಜವಾದಿ ಹೋರಾಟಗಾರ ಹಾಗೂ ಹಠವಾದಿ ಮಲ್ಲೇಶ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಪ್ರಗತಿಪರ ಚಿಂತನೆಗಳನ್ನು ಮುಂದುವರಿಸಿಕೊಂಡು ಹೋಗುವುದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯಾಗಿದೆ ಎಂದು ಸಂಸದರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.



ಮೈಸೂರು ನಗರ ಜಾತ್ಯಾತೀತ ಜನತಾದಳದ ಪ್ರಧಾನ ಕಾರ್ಯದರ್ಶಿಯನ್ನಾಗಿ ಮೈಸೂರು ಗಾಂಧಿನಗರದ ನಿವಾಸಿ ಬಿ.ಸುರೇಶ್ ಅವರನ್ನು ನೇಮಕ ಮಾಡಿ ಮಾಜಿ ಪ್ರಧಾನಿ ಹಾಗೂ ಪಕ್ಷದ ವರಿಷ್ಠರೂ ಆದ ಹೆಚ್.ಡಿ.ದೇವೇಗೌಡರು ನೇಮಕಾತಿ ಪತ್ರ ನೀಡಿದ್ದಾರೆ. ಈ ಹಿಂದೆಯೂ ಇವರನ್ನು ನಗರ ಯುವ ಕಾರ್ಯದರ್ಶಿಯನ್ನಾಗಿ ಗೌಡರು ನೇಮಕ ಮಾಡಿದ್ದರು. ಅನೇಕ ವರ್ಷಗಳಿಂದ ಸುರೇಶ್ ಜಾತ್ಯಾತೀತ ಜನತಾದಳದ ಅತ್ಯಂತ ಸಕ್ರೀಯ ಕಾರ್ಯಕರ್ತರಾಗಿದ್ದಾರೆ. ಇವರು ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷರೂ ಕೂಡ.

ಕಾಂಗ್ರೆಸ್ ಸೇರಿದ ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಮಾವಿನಹಳ್ಳಿ ಸಿದ್ದೇಗೌಡ ಇತರರು...

●ಜಿ.ಟಿ.ದೇವೇಗೌಡರ ವಿರುದ್ಧ ದನಿ ಎತ್ತಿದ ಮುಖಂಡರು ●'ಕೈ' ಹಿಡಿದ ಬಿಜೆಪಿ ಮಾಜಿ ಶಾಸಕಿ ಸುನಿತಾ ವೀರಪ್ಪಗೌಡ





ಮೈಸೂರು, ಜ.20(ಆರ್‌ಕೆಬಿ)–ಜಿಲ್ಲೆಯ ಪ್ರಮುಖ ಜೆಡಿಎಸ್ ಮುಖಂಡರಾದ ಜಿಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ, ಬನ್ನೂರಿನ ಮಾಜಿ ಶಾಸಕಿ ಸುನಿತಾ ವೀರಪ್ಪಗೌಡ ಸೇರಿದಂತೆ ಅನೇಕ ಪ್ರಮುಖರು ಮಾಜಿ ಸಿಎಂ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಇಂದಿಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆ ಯಾದರು. ಜೆಡಿಎಸ್ ಮತ್ತು ಬಿಜೆಪಿ ತೊರೆದು ಪಕ್ಷಕ್ಕೆ ಸೇರ್ಪಡೆ ಯಾದ ಇವರೆಲ್ಲರಿಗೂ ಸಿದ್ದರಾಮಯ್ಯ ಅವರು ಪಕ್ಷದ ಬಾವುಟ ನೀಡಿ, ಪಕ್ಷಕ್ಕೆ ಅಧಿಕೃತವಾಗಿ ಬರಮಾಡಿಕೊಂಡರು.

ಪಕ್ಷಕ್ಕೆ ಸೇರ್ಪಡೆಯಾದ ಬಳಿಕ ಮಾತನಾಡಿದ ಈ ಮುಖಂಡರು, ತಾವು ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಕಂಕಣ ಬದ್ಧರಾಗಿ ದುಡಿಯುವುದಾಗಿ ಘೋಷಿಸಿದರು.

ನಾನು ಸಿದ್ದರಾಮಯ್ಯರ ಅಪ್ಪಟ ಅಭಿಮಾನಿ: ನಾನು ಸಿದ್ದರಾಮಯ್ಯನವರ ಅಪ್ಪಟ ಅಭಿಮಾನಿ. 1983 ರಿಂದ 2008ರ ಚುನಾವಣೆವರೆಗೂ ಅವರ ಹಿಂಬಾಲಕನಾಗಿ ಕೆಲಸ ಮಾಡಿದ್ದೇನೆ. 1993ರಲ್ಲಿ ಸ್ಪರ್ಧಿಸಿದ್ದ ಸಿದ್ದರಾಮಯ್ಯರ ಭಾಷಣ ಕೇಳಲು ಸಾರ್ವಜನಿಕ ಸಭೆಯಲ್ಲಿ ಮುಂದಿನ ಸಾಲಿನಲ್ಲಿ ಕೂರುತ್ತಿದ್ದೆ. ಅವರ ಭಾಷಣದಿಂದ ಪ್ರೇರಿತನಾಗಿ ನಾನೂ ಸಾರ್ವಜನಿಕ ಜೀವನಕ್ಕೆ ಬಂದೆ. ಎರಡು ಬಾರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿಯೂ ಕೆಲಸ ಮಾಡಿದ್ದೇನೆ ಎಂದು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ಜಿಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ ತಿಳಿಸಿದರು.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ನಾನು ಜೆಡಿಎಸ್ ಸೇರುವಂತಾಯಿತು. ಆಗ ಹಾಲಿ ಶಾಸಕ ಜಿ.ಟಿ.ದೇವೇಗೌಡರು ಬಿಜೆಪಿಯಲ್ಲಿದ್ದರು. ಕ್ಷೇತ್ರದ ನಾಡಿಮಿಡಿತ ಅವರಿಗೇನೂ ತಿಳಿದಿರಲಿಲ್ಲ. 2013ರ ಫೆ.13ರಂದು ಮರಳಿ ಗೂಡಿಗೆ ಹೋಗಲು ಅವರೊಂದಿಗೆ ಯಾರೂ ಇರಲಿಲ್ಲ. ಅವರ ನಡೆಯಿಂದ ನಾವು ಬೇಸತ್ತು ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ್ದೇವೆ. 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಶತಸಿದ್ಧ. ಕ್ಷೇತ್ರದ ಜನ ಈಗಲೇ ಫಲಿತಾಂಶ ನಿರ್ಧರಿಸಿದ್ದಾರೆ. ಜಿಟಿಡಿ ಅವರ ನಡವಳಿಕೆ ಬಗ್ಗೆ ನಾವು ಕ್ಷೇತ್ರಾದ್ಯಂತ ಜನರಿಗೆ ಮನವರಿಕೆ ಮಾಡಿಕೊಟ್ಟು, ಕ್ಷೇತ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಶ್ರಮಿಸುತ್ತೇವೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ರಾಜಕೀಯ ಚಿತ್ರಣ ಬದಲಾಗಿದೆ: ಚಾಮುಂಡೇಶ್ವರಿ ಕ್ಷೇತ್ರದ ರಾಜಕೀಯ ಚಿತ್ರಣ ಈಗ ಬದಲಾಗಿದೆ ಎಂದು ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ ತಿಳಿಸಿದರು. 1983ರಿಂದ ಸಿದ್ದರಾಮಯ್ಯ ಅವರಿಂದ ಬೆಳಕಿಗೆ ಬಂದವರು ನಾವು. ಕ್ಷೇತ್ರ ಪುನರ್‌ವಿಂಗಡಣೆ ನಂತರ ಚಾಮುಂಡೇಶ್ವರಿಯಿಂದ ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರಕ್ಕೆ ಹೋದರು. ಆಗ ಜಿ.ಟಿ.ದೇವೇಗೌಡರು ನಮ್ಮನ್ನು ಇಲ್ಲದ ಆಮಿಷ ಒಡ್ಡಿ ಜೆಡಿಎಸ್‌ಗೆ ಸೇರ್ಪಡೆ ಮಾಡಿದರು. ನಂತರ ನಾವು ಸಾಕಷ್ಟು ನೋವು ಅನುಭವಿಸಿದೆವು ಎಂದು ತಿಳಿಸಿದರು.

ಕೋವಿಡ್ ಸಂದರ್ಭದಲ್ಲಿ ಸಾವಿಗೀಡಾದ ಬಡವರ್ಗದ ಜನರ ಮನೆಗೆ ಸಾಂತ್ವನ ಹೇಳಲು ಹೋಗದ ಜಿ.ಟಿ. ದೇವೇಗೌಡರು, ತಮ್ಮ ಮಗನಿಗಾಗಿ ಬಿಜೆಪಿ, ಕಾಂಗ್ರೆಸ್‌ಗೆ ಹೋಗುತ್ತೇನೆಂದು ಹೇಳಿಕೊಂಡು ತಿರುಗಿದರು. ಮೊಸಳೆ ಕಣ್ಣೀರಿನ ಜಿ.ಟಿ.ದೇವೇಗೌಡರನ್ನು ಮತ್ತು ಹುಣಸೂರಿನಲ್ಲಿ ಅವರ ಮಗನನ್ನು ಸೋಲಿಸಿ ಮನೆಗೆ ಕಳಿಸುವುದೇ ತಮ್ಮ ಶಪಥ ಎಂದು ಸಭೆಯಲ್ಲಿ ಪ್ರತಿಜ್ಞೆ ಮಾಡಿದರು. ಮೂರು ತಿಂಗಳಲ್ಲಿ ಚುನಾವಣೆ ಬರುತ್ತಿದೆ. ಎಲ್ಲರೂ ಎದ್ದು ನಿಂತು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಿಸುತ್ತೇವೆಂದು ಪ್ರತಿಜ್ಞೆ ಮಾಡುವಂತೆ ಸಿದ್ದೇಗೌಡರು ಕರೆ ನೀಡಿದಾಗ ಇಡೀ ಸಭೆ ಎದ್ದು ನಿಂತು ಕೈ ಮುಂದೆ ಮಾಡಿ, ಪ್ರತಿಜ್ಞೆ ಮಾಡಿತ್ತು.

ಏನೇ ಕೆಲಸ ಕೊಟ್ಟರೂ ಶಕ್ತಿ ಮೀರಿ ದುಡಿಯುತ್ತೇವೆ: ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿರುವ ನಾವು ಐದು ಮಂದಿ ಒಟ್ಟಾಗಿ ಸಿದ್ದರಾಮಯ್ಯರ ತತ್ವ ಸಿದ್ಧಾಂತಕ್ಕೆ ಬದ್ಧರಾಗಿ ಕಾಂಗ್ರೆಸ್ ಸೇರಿದ್ದೇವೆ. ನಮಗೆ ರಾಜಕೀಯ ಜನ್ಮ ನೀಡಿದವರು ಎಂದು ನಂಬಿದ್ದ ಜಿ.ಟಿ.ದೇವೇಗೌಡರು ನಂಬಿಸಿ, ಮೋಸ ಮಾಡಿದರು ಎಂದು ಜಿಪಂ ಮಾಜಿ ಅಧ್ಯಕ್ಷ ಯರಗನಹಳ್ಳಿ ಮಾದೇಗೌಡ ತಿಳಿಸಿದರು. ಸಿದ್ದರಾಮಯ್ಯನವರು 2023ಕ್ಕೇ ಮತ್ತೆ ಸಿಎಂ ಆಗ್ತಾರೆ ಎಂದು ದೇವರ ಮುಂದೆ ಪ್ರಮಾಣ ಮಾಡಿದವರು ಜಿ.ಟಿ.ದೇವೇಗೌಡರು. ಆದರೆ ಅವರು ಹೇಳಿ ಹೋದರು. ಆದರೆ ನಾವು ಆ ಪ್ರಮಾಣವನ್ನು ಈಡೇರಿಸುತ್ತೇವೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಮಗೆ ಏನೇ ಕೆಲಸ ಕೊಟ್ಟರೂ ಅದನ್ನು ಮಾಡಲು ಶಕ್ತಿ ಮೀರಿ ದುಡಿಯುತ್ತೇವೆ. ಕಾಂಗ್ರೆಸ್ ಗೆಲುವಿಗೆ ಶ್ರಮಿಸುತ್ತೇವೆ ಎಂದರು.

ಪಕ್ಷದ ಗೆಲುವಿಗೆ ಶ್ರಮಿಸುತ್ತೇವೆ: ದೇವರಾಜ ಅರಸು ಅವರಂತೆ ಜನಪರ ಕೊಡುಗೆ ನೀಡಿದವರು ಸಿದ್ದರಾಮಯ್ಯ. ಐದು ವರ್ಷ ಸತತ ಮುಖ್ಯಮಂತ್ರಿಯಾಗಿ ಅನೇಕ ಜನಪರ ಭಾಗ್ಯಗಳನ್ನು ನೀಡಿದ್ದಾರೆ. ಅವರ ತತ್ವ–ಸಿದ್ಧಾಂತಗಳನ್ನು ಒಪ್ಪಿ ಪಕ್ಷಕ್ಕೆ ಸೇರಿದ್ದೇವೆ. ಪಕ್ಷದ ಗೆಲುವಿಗೆ ಶ್ರಮಿಸುತ್ತೇವೆ ಎಂದು ಹಿನಕಲ್ ಕೆಂಪನಾಯಕ ತಿಳಿಸಿದರು.

ಕಾಂಗ್ರೆಸ್‌ಗೆ ಮತ್ತೆ ಮರಳಿದ್ದೇನೆ: 18 ವರ್ಷ ನಾನು ಕಾಂಗ್ರೆಸ್ ಪಕ್ಷದಲ್ಲಿದ್ದೆ. ಶಾಸಕಿಯಾಗಿ ಜನಸೇವೆ ಮಾಡುವ ಇಚ್ಛೆಯಿಂದ ಬೇರೆ ಪಕ್ಷಕ್ಕೆ ಹೋಗಿದ್ದೆ. ಈಗ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದೇನೆ ಎಂದು ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ಹೇಳಿದರು.

ಚಾಮುಂಡೇಶ್ವರಿಯಲ್ಲಿ 11 ಆಕಾಂಕ್ಷಿಗಳು

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕೆ.ಮರೀಗೌಡ ಸೇರಿದಂತೆ 11 ಮಂದಿ ಆಕಾಂಕ್ಷಿಗಳಿದ್ದಾರೆ. ಅವರೆಲ್ಲರಿಗೂ ಟಿಕೆಟ್ ನೀಡಲು ಸಾಧ್ಯವಿಲ್ಲ. ಹೊಸದಾಗಿ ಪಕ್ಷಕ್ಕೆ ಸೇರ್ಪಡೆಯಾದವರೂ ಆಕಾಂಕ್ಷಿಗಳಾಗಬಹುದು. ಬೇಡ ಎನ್ನುವುದಿಲ್ಲ. ಆದರೆ ಗೆಲ್ಲುವ ಅಭ್ಯರ್ಥಿ ಯಾರೆಂಬುದನ್ನು ಗಮನದಲ್ಲಿ ಇಟ್ಟುಕೊಂಡು ಟಿಕೆಟ್ ನೀಡುತ್ತೇವೆ. ಹಾಗಾಗಿ ಎಲ್ಲ ಆಕಾಂಕ್ಷಿಗಳು ಒಬ್ಬರ ಕಾಲು ಒಬ್ಬರು ಎಳೆಯಲು ಹೋಗದೆ ಕಾಂಗ್ರೆಸ್ ಗೆಲುವಿಗೆ ಎಲ್ಲರೂ ಸಹಕರಿಸಬೇಕು. ಒಗ್ಗಟ್ಟಾಗಿ ಬಿಜೆಪಿ, ಜೆಡಿಎಸ್ ವಿರುದ್ಧ ಹೋರಾಡಿದರೆ ಶೇ.100ರಷ್ಟು ಕಾಂಗ್ರೆಸ್ ಗೆದ್ದೇ ಗೆಲ್ಲುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದರು.

ಬೈಕ್, ಕಾರ್, ಬಸ್, ಟೆಂಪೋಗಳಲ್ಲಿ ಬಂದಿಳಿದ ಸಹಸ್ರಾರು ಕಾರ್ಯಕರ್ತರು

ಮೈಸೂರಿನ ಹೊರವಲಯದ ಇಲವಾಲ ಹೋಬಳಿಯ ಲಿಂಗದೇವರಕೊಪ್ಪಲು ಕೆಐಎಡಿಬಿ ಮೈದಾನದಲ್ಲಿ ಗುರುವಾರ ಕಾಂಗ್ರೆಸ್ ಬಾವುಟಗಳು ರಾರಾಜಿಸಿದವು. ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರ ಅಪಾರ ಪ್ರಮಾಣದ ಫ್ಲೆಕ್ಸ್‌ಗಳನ್ನು ಹಾಕಲಾಗಿತ್ತು. ಚಾಮುಂಡೇಶ್ವರಿ ಕ್ಷೇತ್ರದ ಮೂಲೆ ಮೂಲೆಗಳಿಂದ ಪಕ್ಷದ ಕಾರ್ಯಕರ್ತರು ಬೈಕ್ ರ್‍ಯಾಲಿ, ಬಸ್, ಟೆಂಪೋಗಳ ಮೂಲಕ ಸಮಾವೇಶ ಸ್ಥಳಕ್ಕೆ ಬಂದಿಳಿದರು. ಸಿದ್ದರಾಮಯ್ಯ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಸಿದ್ದರಾಮಯ್ಯರ ಭಾವಚಿತ್ರಗಳನ್ನು ಪ್ರದರ್ಶಿಸಿ ಅಭಿಮಾನ ಮೆರೆದರು. ಅವರ ಭಾಷಣದ ಮಧ್ಯೆ ಮೈಸೂರು ಹುಲಿ, ಹುಲಿಯಾ ಎಂಬಿತ್ಯಾದಿ ಘೋಷಣೆಗಳನ್ನು ಅಭಿಮಾನಿಗಳು ಕೂಗುತ್ತಿದ್ದರು. ಸಮಾವೇಶ ಸ್ಥಳಕ್ಕೆ ಸಿದ್ದರಾಮಯ್ಯ ಬರುತ್ತಿದ್ದಂತೆ ಕಳಸ ಹೊತ್ತ ಮಹಿಳೆಯರು ಅವರನ್ನು ಸ್ವಾಗತಿಸಿದರು. ಕಾರ್ಯಕ್ರಮಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಐತಿಹಾಸಿಕ ಸಮಾವೇಶ: ಆರ್.ಧ್ರುವನಾರಾಯಣ

ಮೈಸೂರು, ಜ.20(ಆರ್‌ಕೆಬಿ)–ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಇದೊಂದು ಐತಿಹಾಸಿಕ ಸಮಾವೇಶವಾಗಿದ್ದು, ಜೆಡಿಎಸ್ ಮತ್ತು ಬಿಜೆಪಿಯಿಂದ ನೂರಾರು ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿರುವುದು ರಾಜ್ಯದಲ್ಲಿ ಕಾಂಗ್ರೆಸ್‌ನತ್ತ ಇತರೆ ಪಕ್ಷಗಳ ಮುಖಂಡರು, ಜನರು ಆಕರ್ಷಿತರಾಗುತ್ತಿದ್ದಾರೆ ಎಂಬುದಕ್ಕೆ ನಿದರ್ಶನವಾಗಿದೆ.

ದೇಶವನ್ನು ಬ್ರಿಟಿಷರಿಂದ ಮುಕ್ತಗೊಳಿಸಲೆಂದು ಹುಟ್ಟಿದ ಕಾಂಗ್ರೆಸ್, ಅನೇಕ ದಶಕಗಳ ಕಾಲ ಆಡಳಿತ ನಡೆಸಿ, ಅನೇಕ ಜನಪರ ಯೋಜನೆಗಳನ್ನು ನೀಡಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ನುಡಿದಂತೆ ನಡೆಯಲು ಅವರಿಗೆ ರಾಜಕೀಯ ಜನ್ಮ ನೀಡಿದ್ದು ಚಾಮುಂಡೇಶ್ವರಿ ಕ್ಷೇತ್ರ. ರಾಜ್ಯ ವಿಧಾನಸಭಾ ಚುನಾವಣೆ ಕೇವಲ ಮೂರು ತಿಂಗಳಷ್ಟೇ ಇದೆ. ಸಿದ್ದರಾಮಯ್ಯ ಅವರು ಸೂಚಿಸುವ ಅಭ್ಯರ್ಥಿಗಳಿಗೆ ಜನರು ಬೆಂಬಲಿಸಿ, ಗೆಲ್ಲಿಸುವಂತೆ ಅವರು ಮನವಿ ಮಾಡಿದರು.

ಗುಂಪುಗಾರಿಕೆಗೆ ಇಲ್ಲದೆ ಒಗ್ಗಟ್ಟಿನಿಂದ ಕೆಲಸ: ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯದ 224 ಕ್ಷೇತ್ರಗಳ ಪೈಕಿ ಅತೀ ಪ್ರಮುಖ ಕ್ಷೇತ್ರವಾದ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಸಿದ್ದರಾಮಯ್ಯ ಅವರ ಆಡಳಿತ ಕಾಲದಲ್ಲಿ 500 ಕೋಟಿಗೂ ಹೆಚ್ಚು ಅನುದಾನ ನೀಡಿದ್ದಾರೆ. ಸಿದ್ದರಾಮಯ್ಯರ ಆಶಯದಂತೆ ಕ್ಷೇತ್ರ ಗೆಲ್ಲಲು ಎಲ್ಲರೂ ಗಟ್ಟಿಯಾಗಿ ನಿಂತು ಕೆಲಸ ಮಾಡ ಬೇಕಾಗಿದೆ ಎಂದು ಜಿಪಂ ಮಾಜಿ ಅಧ್ಯಕ್ಷ, ಚಾಮುಂಡೇಶ್ವರಿ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ ಕೆ.ಮರಿಗೌಡ ತಿಳಿಸಿದರು.

ಇಂದಿಲ್ಲಿ ನಡೆಯುತ್ತಿರುವ ಸಮಾವೇಶ ಸಿದ್ದರಾಮಯ್ಯನವರ ಹಾಗೂ ಕಾಂಗ್ರೆಸ್ ಪಕ್ಷದ ಶಕ್ತಿ ಪ್ರದರ್ಶನವಾಗಿದೆ. ಕ್ಷೇತ್ರದ ಪ್ರಮುಖ ಮುಖಂಡರೆಲ್ಲರೂ ಒಗ್ಗಟ್ಟಿನಿಂದ ಪಕ್ಷ ಸಂಘಟನೆ ಮಾಡಿದ್ದಾರೆ. ಸಿದ್ದರಾಮಯ್ಯರ ಜನಪರ ಆಡಳಿತ ಮತ್ತು ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿ ಕೊಡುವ ಕೆಲಸ ಮಾಡುತ್ತಿದ್ದೇವೆ. ಸಾಮಾಜಿಕ ನ್ಯಾಯ ಒದಗಿಸಿದ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವಲ್ಲಿ ನಮ್ಮಲ್ಲಿ ಯಾವುದೇ ಗುಂಪುಗಾರಿಕೆಗೆ ಅವಕಾಶ ಇಲ್ಲದಂತೆ ಒಗ್ಗಟ್ಟಿನಿಂದ ಕೆಲಸ ಮಾಡೋಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಾ. ಹೆಚ್.ಸಿ.ಮಹದೇವಪ್ಪ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಮಾಜಿ ಶಾಸಕರಾದ ಕೆ.ವೆಂಕಟೇಶ್, ಎಂ.ಕೆ. ಸೋಮಶೇಖರ್, ಮಳವಳ್ಳಿ ಶಿವಣ್ಣ, ಕಳಲೆ ಕೇಶವಮೂರ್ತಿ, ಪಕ್ಷದ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಜಿಪಂ ಮಾಜಿ ಸದಸ್ಯರಾದ ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ, ಮುಖಂಡರಾದ ಕೆ.ಹರೀಶ್‌ಗೌಡ, ಕೆ.ಆರ್. ನಗರ ರವಿಶಂಕರ್, ಹಿನಕಲ್ ರಾಕೇಶ್ ಪಾಪಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಗುರುಸ್ವಾಮಿ, ಸತೀಶ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಇಂಧನ ಸಚಿವ ವಿ.ಸುನೀಲ್ ಕುಮಾರ್ ನೇತೃತ್ವದಲ್ಲಿ

ಸೆಸ್ಕ್ ವ್ಯಾಪ್ತಿಯ ಜಿಲ್ಲೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ



ಮೈಸೂರು, ಜ.20(ಆರ್‌ಕೆ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳಲ್ಲಿ ಪೂರ್ಣಗೊಂಡಿರುವ ಸುಮಾರು 100 ಕೋಟಿ ರೂ. ವೆಚ್ಚದ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದ ಇಂಧನ ಸಚಿವ ವಿ.ಸುನೀಲ್ ಕುಮಾರ್, ಇದೇ ವೇಳೆ ಹಲವು ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (KPTCL) ಮತ್ತು ಸೆಸ್ಕ್ ವತಿಯಿಂದ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಸಮಾರಂಭದಲ್ಲಿ ನಿಗಮದಿಂದ ಕೈಗೊಂಡಿರುವ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯನ್ನು ಬಟನ್ ಒತ್ತಿ ನಾಮ ಫಲಕ ಅನಾವರಣಗೊಳಿಸುವ ಮೂಲಕ ಸಚಿವರು ನೆರವೇರಿಸಿದರು.

ಉದ್ಘಾಟನೆಯಾದ ಯೋಜನೆಗಳು: ಕೆಪಿಟಿಸಿಎಲ್‌ನಿಂದ ತಿ.ನರಸೀಪುರ ತಾಲೂಕಿನ ಚಾಮಲಾಪುರದಲ್ಲಿ ನಿರ್ಮಿಸಿರುವ 66/11 ಕೆ.ವಿ.ವಿದ್ಯುತ್ ಉಪ ಕೇಂದ್ರ, ಸೆಸ್ಕ್‌ನಿಂದ ಕೆ.ಆರ್.ನಗರ, ಮದ್ದೂರು, ಮಡಿಕೇರಿ ವಿಭಾಗೀಯ ಕಚೇರಿ ಕಟ್ಟಡಗಳು, ಮೈಸೂರಿನ ರಾಮಕೃಷ್ಣನಗರ, ಮಂಡ್ಯದ ಕೆರಗೋಡು, ಮಂಡ್ಯ ನಗರದ ಉಪ ವಿಭಾಗೀಯ ಕಚೇರಿ ಕಟ್ಟಡಗಳು, ಜಯಪುರ, ಗದ್ದಿಗೆ, ಬಿ.ಮಟಗೆರೆ, ಹನಗೂಡು, ಆಲನಹಳ್ಳಿ, ಬಸರಾಳು ಹಾಗೂ ಮಳವಳ್ಳಿಯಲ್ಲಿ ನಿರ್ಮಿಸಿರುವ ಶಾಖಾ ಕಚೇರಿ ಕಟ್ಟಡಗಳನ್ನು ಸಚಿವರು ಉದ್ಘಾಟಿಸಿದರು.

ಕಾಮಗಾರಿಗಳ ಶಂಕುಸ್ಥಾಪನೆ: ಕೆಪಿಟಿಸಿಎಲ್‌ನಿಂದ ವರಕೋಡು, ಉದ್ದೂರು, ರತ್ನಪುರಿ, ಮಾವತ್ತೂರು, ಸುಂಕಾತೊಣ್ಣೂರು, ಈಚಲಗುಡ್ಡ ಕಾವಲ್, ಬೀರುವಳ್ಳಿ, ಧನಗೂರಿನಲ್ಲಿ ನಿರ್ಮಿಸಲುದ್ದೇಶಿಸಿರುವ 66/11 ಕೆ.ವಿ.ವಿದ್ಯುತ್ ಉಪ ಕೇಂದ್ರಗಳು ಹಾಗೂ ಸೆಸ್ಕ್‌ನಿಂದ ನಿರ್ಮಿಸಲುದ್ದೇಶಿಸಿರುವ ಕೆ.ಆರ್.ಪೇಟೆ, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಗುಂಡ್ಲುಪೇಟೆ ಉಪ ವಿಭಾಗ ಕಚೇರಿ ಕಟ್ಟಡಗಳು ಮತ್ತು ಹೆಚ್.ಡಿ. ಕೋಟೆ, ಕಣಕಟ್ಟೆ ಶಾಖಾ ಕಚೇರಿ ಕಟ್ಟಡಗಳ ಕಾಮಗಾರಿಗಳಿಗೆ ಸುನಿಲ್ ಕುಮಾರ್ ಶಂಕುಸ್ಥಾಪನೆ ನೆರವೇರಿಸಿದರು.

ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಶಾಸಕ ಜಿ.ಟಿ.ದೇವೇಗೌಡ, ಮೈಲಾಕ್ ಅಧ್ಯಕ್ಷ ಕೌಟಿಲ್ಯ ರಘು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಕರ್ನಾಟಕ ಮೃಗಾಲಯದ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ, ತಾಂತ್ರಿಕ ನಿರ್ದೇಶಕ ಕೆ.ವಿ.ಉಮೇಶ್ ಚಂದ್ರ, ಚೀಫ್ ಇಂಜಿನಿಯರ್ ಮಹದೇವ ಸ್ವಾಮಿ, ಪ್ರಸನ್ನ, ಕೆಪಿಟಿಸಿಎಲ್ ಪ್ರಸರಣ ನಿರ್ದೇಶಕ ಆರ್.ಜಯಕುಮಾರ್, ಪ್ರಸರಣ ವಲಯದ ಚೀಫ್ ಇಂಜಿನಿಯರ್ ಎನ್.ರಂಗರಾಜು ಸೇರಿದಂತೆ ಹಲವರು ಭಾಗವಹಿಸಿದ್ದರು.

ಸೆಸ್ಕ್ ವ್ಯಾಪ್ತಿಯ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲೆಗಳಿಂದ ಸೆಸ್ಕ್ ಮತ್ತು ಕೆಪಿಟಿಸಿಎಲ್‌ನ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಾವಿರಾರು ಸಂಖ್ಯೆಯಲ್ಲಿ ಸಮಾರಂಭಕ್ಕೆ ಆಗಮಿಸಿದ್ದರು. ಮಧ್ಯಾಹ್ನ ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಉಪಸ್ಥಿತರಿರಬೇಕಿದ್ದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಚಾಮುಂಡಿಬೆಟ್ಟದಲ್ಲಿ ಚಂಡಿಕಾ ಹೋಮದಲ್ಲಿ ದಂಪತಿ ಸಮೇತ ಪಾಲ್ಗೊಂಡಿದ್ದರಿಂದ ಗೈರು ಹಾಜರಾಗಿದ್ದು, ಸಮಾರಂಭಕ್ಕೆ ಶುಭವಾಗಲೆಂದು ಸಂದೇಶ ನೀಡಿದ್ದಾರೆ ಎಂಬುದನ್ನು ಜಯವಿಭವ ಸ್ವಾಮಿ ಪ್ರಕಟಿಸಿದರು. ಉಳಿದಂತೆ ಹಲವು ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರುಗಳ್ಯಾರೂ ಸಮಾರಂಭಕ್ಕೆ ಆಗಮಿಸಿರಲಿಲ್ಲ.

ಬಿಜೆಪಿ ವ್ಯಕ್ತಿ ಆಧಾರಿತ ಪಕ್ಷವಲ್ಲ

ಮೈಸೂರು, ಜ.20(ಎಂಟಿವೈ)– ಬಿಜೆಪಿ ಎಂದಿಗೂ ವ್ಯಕ್ತಿ ಆಧಾರಿತವಾಗಿ ಚುನಾವಣೆ ಎದುರಿಸುವುದಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದ್ದಾರೆ. ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿ ಯಾವಾಗಲೂ ಕಾರ್ಯಕರ್ತರ ಆಧಾರಿತ ಪಕ್ಷವಾಗಿರಲಿದೆ. ಬಿಜೆಪಿ ವ್ಯಕ್ತಿ ಆಧಾರಿತ ಪಕ್ಷವಲ್ಲ. ವ್ಯಕ್ತಿ ಆಧಾರವಾಗಿ ಚುನಾವಣೆ ಎದುರಿಸಿಲ್ಲ. ಹಾಗಾಗಿ ಕಾರ್ಯಕರ್ತರ ಶ್ರಮವೇ ನಮ್ಮ ಪಕ್ಷದ ಶಕ್ತಿಯಾಗಿದೆ ಎಂದರು. ಮುಂಬರುವ ವಿಧಾನಸಭಾ ಚುನಾವಣೆಗಾಗಿ ನಮ್ಮ ಪಕ್ಷ ಸಿದ್ಧತೆ ಆರಂಭಿಸಿದೆ. ಕಳೆದ ಒಂದು ತಿಂಗಳಿಂದ ಬೂತ್ ವಿಜಯ ಅಭಿಯಾನ ನಡೆಸಲಾಗುತ್ತಿದೆ. ಎಲ್ಲಾ ಬೂತ್‌ಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಗೆಲ್ಲಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಅದಕ್ಕಾಗಿ ರಾಜ್ಯ ಬಿಜೆಪಿ ನಾಯಕರು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿರುವ 60 ಸಾವಿರ ಬೂತ್‌ಗಳನ್ನು ಗೆಲ್ಲಬೇಕು ಎಂಬ ಗುರಿ ಇಟ್ಟುಕೊಂಡು ಮುಂಬರುವ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದರು. ಪಕ್ಷ ಸಂಘಟನೆಗಾಗಿ ಕೆಲವು ಬದಲಾವಣೆ ಮಾಡುವುದು ಸಹಜ ಪ್ರಕ್ರಿಯೆ. ಅದರ ಅಂಗವಾಗಿ ಪಕ್ಷದ ಕೆಲವು ಹುದ್ದೆಗಳಿಗೆ ಹೊಸದಾಗಿ ನೇಮಕ ಮಾಡಲೂಬಹುದು. ಆದರೆ, ಪಕ್ಷದ ರಾಜ್ಯಾಧ್ಯಕ್ಷ ಹುದ್ದೆಗೆ ನಾನು ಆಕಾಂಕ್ಷಿಯಲ್ಲ ಎಂದು ಸ್ಪಷ್ಟಪಡಿಸಿದರು.

ನಾಳೆ ದೇಹದಾರ್ಢ್ಯ ಸ್ಪರ್ಧೆ

ಮೈಸೂರು, ಜ.20(ಎಂಟಿವೈ)– ಮೈಸೂರು ಜಿಲ್ಲಾ ದೇಹದಾರ್ಢ್ಯ ಮತ್ತು ಫಿಟ್ನೆಸ್ ಸಂಸ್ಥೆ ವತಿಯಿಂದ ಜ.22ರಂದು ಪುರಭವನದಲ್ಲಿ ಕಾಲೇಜು ಹಾಗೂ ಜಿಲ್ಲಾಮಟ್ಟ, ಅಂತರ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಎಂ. ಮಂಜುನಾಥ್ ತಿಳಿಸಿದ್ದಾರೆ. ವಿವಿಧ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಅಂದೇ ಪುರಭವನಕ್ಕೆ ಬಂದು ಹೆಸರು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ದೂ. 98808 33980 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಮೊಹಮ್ಮದ್ ಆಸಿಯಮ್, ಅವಿನಾಶ್, ಚಂದನ್, ಶಂಕರ್ ಇದ್ದರು.

ಉಮೇಶ್‌ಗೆ ಪಿಹೆಚ್.ಡಿ



ಮೈಸೂರು, ಜ.20– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುವೆಂಪು ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರೊ.ಕವಿತಾ ರೈ ಅವರ ಮಾರ್ಗದರ್ಶನದಲ್ಲಿ ಗುಂಡ್ಲುಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಉಮೇಶ ಅವರು ಸಾದರಪಡಿಸಿದ 'ಕುವೆಂಪು ಆತ್ಮಕಥೆ ಮತ್ತು ಜೀವನಚರಿತ್ರೆಗಳ ಅನುಸಂಧಾನ" ಮಹಾಪ್ರಬಂಧವನ್ನು ರಾಜ್ಯ ಮುಕ್ತ ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಚಾಮರಾಜ ಕ್ಷೇತ್ರದಲ್ಲಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ವಿನೂತನ ರೀತಿ ಜೆಡಿಎಸ್ ಸಂಘಟನೆ



ಚಾಮರಾಜ ಕ್ಷೇತ್ರದ ಜೆಡಿಎಸ್ ಮುಖಂಡರ ಮನೆಗೆ ಭೇಟಿ ನೀಡಿ ಎಳ್ಳು–ಬೆಲ್ಲದ ಜೊತೆಗೆ ಸಿಹಿ ತಿನಿಸು ನೀಡಿ ಪಕ್ಷ ಸಂಘಟನೆಯಲ್ಲಿ ತೊಡಗಿರುವುದು. ಚಿತ್ರದಲ್ಲಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ, ಮಾಜಿ ಕಾರ್ಪೊರೇಟರ್ ಶಿವಣ್ಣ, ರಾಮೇಗೌಡ, ಮಂಜು ಮತ್ತಿತರರಿದ್ದಾರೆ.

ಮೈಸೂರು, ಜ.20(ಎಸ್‌ಬಿಡಿ)– ವಿಧಾನಸಭಾ ಚುನಾವಣೆ ನಿಟ್ಟಿನಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದ ಜೆಡಿಎಸ್ ಮುಖಂಡರು ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. ಸಂಕ್ರಾಂತಿಯಂದು ನಗರದ 3ನೇ ವಾರ್ಡ್ ಕಾರ್ಪೊರೇಟರ್ ಕೆ.ವಿ. ಶ್ರೀಧರ್ ನೇತೃತ್ವದಲ್ಲಿ ವಾರ್ಡ್ ಅಧ್ಯಕ್ಷರು, ಬೂತ್ ಅಧ್ಯಕ್ಷರು ಸೇರಿದಂತೆ ಪಕ್ಷದ ಪ್ರಮುಖರ ಮನೆಗಳಿಗೆ ತೆರಳಿ ಎಳ್ಳು ಬೆಲ್ಲ ನೀಡಿ, ಮನೆ ಮುಂದೆ ನಾಮಫಲಕ ಅಳವಡಿಸುವ ಮೂಲಕ ವಿನೂತನವಾಗಿ ಪಕ್ಷ ಸಂಘಟನೆ ಆರಂಭಿಸಲಾಗಿದ್ದು, ಇಂತಹ ಹಲವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಕ್ಷೇತ್ರ ವ್ಯಾಪ್ತಿಯ 1, 3, 4, 5, 20ನೇ ವಾರ್ಡ್ ಸೇರಿದಂತೆ ಅನೇಕ ವಾರ್ಡ್‌ಗಳ ಮುಖಂಡರನ್ನು ಭೇಟಿ ಮಾಡಿ ಜೆಡಿಎಸ್ ಸರ್ಕಾರವಿದ್ದಾಗ ನೀಡಿದ್ದ ರೈತಪರ, ಕಾರ್ಮಿಕರ ಪರ, ಶ್ರಮಿಕರ ಪರವಾದ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಮನವರಿಕೆ ಮಾಡಿಕೊಡುವುದರ ಜೊತೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ 'ಪಂಚರತ್ನ' ರಥಯಾತ್ರೆಯ ಗುರಿ, ಉದ್ದೇಶಗಳನ್ನು ಪ್ರಚುರಪಡಿಸುವ ಸಂಬಂಧ ಚರ್ಚಿಸಲಾಗುತ್ತಿದೆ.

ಈ ಬಗ್ಗೆ ಕಾರ್ಪೊರೇಟರ್ ಕೆ.ವಿ. ಶ್ರೀಧರ್ ಪ್ರತಿಕ್ರಿಯಿಸಿ, ತಳಮಟ್ಟದಿಂದ ಪಕ್ಷ ಸಂಘಟಿಸುವುದು ಅವಶ್ಯವಾಗಿದೆ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಹೆಚ್ಚು ಸ್ಥಾನಗಳಲ್ಲಿ ಗೆದ್ದು ಸರ್ಕಾರ ರಚಿಸಬೇಕೆಂಬ ಆಶಯದೊಂದಿಗೆ ಪ್ರತಿಯೊಬ್ಬರೂ ಯುದ್ಧೋಪಾದಿಯಲ್ಲಿ ಶ್ರಮಿಸಬೇಕಿದೆ. ರಾಷ್ಟ್ರೀಯ ಪಕ್ಷಗಳ ಧೋರಣೆಯಿಂದ ನೊಂದಿರುವ ಜನ ಮತ್ತೆ ಪ್ರಾದೇಶಿಕ ಪಕ್ಷದತ್ತ ಚಿತ್ತ ಹರಿಸಿದ್ದಾರೆ. ಜೆಡಿಎಸ್ ಭದ್ರಕೋಟೆಯಾಗಿರುವ ಮೈಸೂರು ಜಿಲ್ಲೆಯ 8 ಕ್ಷೇತ್ರದಲ್ಲಾದರೂ ಜಯಗಳಿಸಬೇಕಿದೆ. ಆ ನಿಟ್ಟಿನಲ್ಲಿ ಎಲ್ಲರ ಸಹಕಾರದೊಂದಿಗೆ ಪಕ್ಷ ಸಂಘಟನೆಯಲ್ಲಿ ತೊಡಗಿದ್ದೇವೆ ಎಂದರು.

ಕಟ್ಟಡ ಕಾರ್ಮಿಕರ ಸಂಘಕ್ಕೆ ಸಹಕರಿಸುವಂತೆ ಕಾರ್ಮಿಕ ಇಲಾಖೆಗೆ ಒತ್ತಾಯಿಸಲು ನಿರ್ಣಯ



ಮೈಸೂರು, ಜ.20(ಎಸ್‌ಬಿಡಿ)– ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘಕ್ಕೆ ಕಾರ್ಮಿಕ ಇಲಾಖೆ ಸಹಕಾರ ನೀಡುವಂತೆ ನಿಯೋಗದ ಮೂಲಕ ಒತ್ತಾಯಿಸಲು ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶುಕ್ರವಾರ ನಡೆದ ಸಂಘದ ತ್ರೈಮಾಸಿಕ ಸಭೆಯಲ್ಲಿ ನಿರ್ಧರಿಸಲಾಗಿದೆ.

ರಾಜ್ಯ ಕಾರ್ಮಿಕ ಆಯುಕ್ತರನ್ನು ನಿಯೋಗ ಭೇಟಿ ಮಾಡಿ, ಇಲಾಖೆಯಿಂದ ಕಟ್ಟಡ ಕಾರ್ಮಿಕರಿಗೆ ಕಲ್ಪಿತವಾಗಿರುವ ಸೌಲಭ್ಯಗಳು, ನಕಲಿ ಕಾರ್ಮಿಕರನ್ನು ಪಟ್ಟಿಯಿಂದ ಹೊರಹಾಕುವ ಸರ್ಕಾರದ ಸೂಚನೆ ಸಂಬಂಧ ಈವರೆಗಿನ ಪ್ರಗತಿ, ಇಲಾಖೆ ನಿರೀಕ್ಷಕರ ಅಸಹಕಾರ ಧೋರಣೆ ವಿರುದ್ಧ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಚರ್ಚಿಸಲು ನಿರ್ಣಯ ಕೈಗೊಳ್ಳಲಾಯಿತು.

ಕಾರ್ಮಿಕ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಟ್ಟಡ ಕಾರ್ಮಿಕರನ್ನು ಸೌಜನ್ಯದಿಂದ ನಡೆಸಿಕೊಳ್ಳುವುದಿಲ್ಲ. ಸರ್ಕಾರಿ ಸೌಲಭ್ಯ, ಸವಲತ್ತುಗಳ ಸಂಬಂಧ ಸಮರ್ಪಕ ಮಾಹಿತಿ ನೀಡುವುದಿಲ್ಲ. ಪರಿಣಾಮ ಮಧ್ಯವರ್ತಿಗಳು ಕಾರ್ಮಿಕರನ್ನು ಶೋಷಿಸುವಂತಾಗಿದೆ. ಸರ್ಕಾರಿ ಸೌಲಭ್ಯಕ್ಕಾಗಿ ಕಟ್ಟಡ ಕಾರ್ಮಿಕರೆಂದು ನೋಂದಣಿ ಮಾಡಿಕೊಂಡಿರುವವರ ಗುರುತಿಸಿ, ನೈಜ ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ಸೌಲಭ್ಯ ಸಿಗುವಂತೆ ಕ್ರಮ ವಹಿಸಿಲ್ಲ. ಇದೆಲ್ಲವನ್ನೂ ಇಲಾಖೆ ಆಯುಕ್ತರ ಗಮನಕ್ಕೆ ತರಲು ತೀರ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಪಿ.ರಾಜು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಸಂಘದ ಉದ್ದೇಶ, ಕಾರ್ಯಚಟುವಟಿಕೆ, ಮಾನದಂಡದ ಬಗ್ಗೆ ವಿವರಿಸಿದರು. ರಾಜ್ಯ ಉಪಾಧ್ಯಕ್ಷ ವೇಣುಗೋಪಾಲ್, ಮೈಸೂರು ಜಿಲ್ಲಾಧ್ಯಕ್ಷ ಕಾಂತರಾಜು, ಹಾಸನ ಜಿಲ್ಲಾಧ್ಯಕ್ಷ ಲೋಕೇಶ್ ಕುಮಾರ್, ಕೊಡಗು ಜಿಲ್ಲಾಧ್ಯಕ್ಷ ವೀರೇಂದ್ರ, ಬಳ್ಳಾರಿ ಪ್ರಧಾನ ಕಾರ್ಯದರ್ಶಿ ರೆಹಮಾನ್ ಖಾನ್, ಅಂತೋಣಿ ಜಾನ್ಸನ್, ನಾಗರಾಜ್, ಸಿದ್ದಪ್ಪ, ಪುಟ್ಟಮಾದಯ್ಯ, ಹೂವಯ್ಯ, ಸುರೇಶ್, ರಮೇಶ್, ಸಂತೋಷ್, ಬಸವರಾಜು, ಭಾಗ್ಯ, ಸುವರ್ಣಮ್ಮ, ವಸಂತ, ಆಂಜನೇಯ, ಪರಶುರಾಮ್, ಮೈಲಾರಪ್ಪ, ಚಂದ್ರಶೇಖರ್, ರಾಮಪ್ಪ, ಗಣೇಶ್‌ಮೂರ್ತಿ, ಬಸವರಾಜು, ಯೂಸಫ್ ಖಾನ್, ಚಂದ್ರು, ಸಿದ್ದಪ್ಪಾಜಿ, ಶಾಂತಕುಮಾರ್, ರಾಜಶೇಖರ್, ಶೇಷಾದ್ರಿ, ಜಗದೀಶ್, ಸುರೇಶ್, ಮಲ್ಲಿಕಾರ್ಜುನ್ ಸೇರಿದಂತೆ ವಿವಿಧ ಜಿಲ್ಲೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ತಂದೆ-ತಾಯಿ ಯೋಗಕ್ಷೇಮ ನೋಡಿಕೊಳ್ಳದ ಕಾರಣ

ಮಗಳಿಂದ ಪೋಷಕರಿಗೆ ಆಸ್ತಿ ವಾಪಸ್ ಕೊಡಿಸಿದ ಉಪ ವಿಭಾಗಾಧಿಕಾರಿ

ಮಡಿಕೇರಿ, ಜ.20– ತಂದೆ ತಾಯಿಯರ ಯೋಗಕ್ಷೇಮ ನೋಡಿಕೊಳ್ಳದ ಕಾರಣ ಮಗಳ ಹೆಸರಿನಲ್ಲಿದ್ದ ಆಸ್ತಿಯನ್ನು ಇಲ್ಲಿನ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ತಾಯಿಗೆ ವಾಪಸ್ ಕೊಡಿಸಿದೆ. ಕುಶಾಲನಗರ ತಾಲೂಕಿನ ಬೊಳ್ಳೂರು ಗ್ರಾಮದ



ಬಿ.ಎಸ್.ಜಾನಕಿ ತಮ್ಮ ಹೆಸರಿನಲ್ಲಿ 0.15 ಎಕ್ರೆ ಆಸ್ತಿಯನ್ನು ಹೊಂದಿದ್ದರು. ಅವರಿಂದ ಅವರ ಎರಡನೇ ಮಗಳಾದ ಜಯಲಕ್ಷ್ಮಿ ಬಿ.ಎಸ್ ದಾನ ಪತ್ರದ ಮೂಲಕ ತಮ್ಮ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಪೋಷಕರ ಯೋಗಕ್ಷೇಮ ನೋಡಿಕೊಳ್ಳದೆ ನಿರ್ಲಕ್ಷಿಸಿದರು. ಇದರಿಂದ ನೊಂದ ಪೋಷಕರು ಜಿಲ್ಲಾ ವಿಕಲ ಚೇತನರ ಕಲ್ಯಾಣಾಧಿಕಾರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಅರ್ಜಿ ಸಲ್ಲಿಸಿ ದಾನಪತ್ರ ರದ್ದುಗೊಳಿಸಿ ಆಸ್ತಿಯನ್ನು ವಾಪಸ್ಸು ಕೊಡಿಸುವಂತೆ ಮನವಿ ಮಾಡಿದ್ದರು. ಆ ನಿಟ್ಟಿನಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವರು ಅರ್ಜಿಯನ್ನು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ವರ್ಗಾಯಿಸಿ ಸೂಕ್ತ ಕ್ರಮಕ್ಕೆ ಮನವಿ ಮಾಡಿದ್ದರು. ವಿಚಾರಣೆ ನಡೆಸಿದ ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್ ಅವರು ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007ರ ಅಡಿ ದಾನಪತ್ರ ರದ್ದುಗೊಳಿಸಿ ಆಸ್ತಿಯನ್ನು ಬಿ.ಎಸ್.ಜಾನಕಿ ಅವರ ಹೆಸರಿಗೆ ವರ್ಗಾಯಿಸುವಂತೆ ಆದೇಶ ನೀಡಿರುತ್ತಾರೆ.

ಕೊಡವ ಜನಾಂಗವನ್ನು ಎಸ್ಟಿಗೆ ಸೇರಿಸಿ ಸಂವಿಧಾನದ ಭದ್ರತೆ ನೀಡಿ

ಕೇಂದ್ರ-ರಾಜ್ಯ ಸರ್ಕಾರ, ಬುಡಕಟ್ಟು ಆಯೋಗ, ಬುಡಕಟ್ಟು ಸಂಶೋಧನಾ ನಿರ್ದೇಶನಾಲಯಕ್ಕೆ ಪತ್ರ ಬರೆದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ಆಗ್ರಹ

ಮಡಿಕೇರಿ, ಜ.20– ಕೇಂದ್ರ ಸರ್ಕಾರದ ಅಧೀನದ ಕೇಂದ್ರ ಬುಡಕಟ್ಟು ಸಚಿವಾಲಯವು 2017ರಲ್ಲಿ ರೂಪಿಸಿದ 'ಹೊಸ ಮರು ವ್ಯಾಖ್ಯಾನಿಸಿದ ಮಾನದಂಡ' ಅಡಿಯಲ್ಲಿ ಕೊಡವ ಜನಾಂಗವನ್ನು ಎಸ್ಟಿ ಪಟ್ಟಿಗೆ ಸೇರಿಸುವ ಮೂಲಕ ಸಂವಿಧಾನದ ಭದ್ರತೆಯನ್ನು ನೀಡಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ನಾಚಪ್ಪ, ಈ ಕುರಿತು ಕೇಂದ್ರ ಬುಡಕಟ್ಟು ಮಂತ್ರಾಲಯ, ರಾಷ್ಟ್ರೀಯ ಬುಡಕಟ್ಟು ಆಯೋಗ, ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಪ್ರಧಾನ ಕಾರ್ಯದರ್ಶಿ, ಬುಡಕಟ್ಟು ಕಲ್ಯಾಣ ಮಂತ್ರಾಲಯದ ಕಾರ್ಯದರ್ಶಿ, ನಿರ್ದೇಶಕರು ಹಾಗೂ ಬುಡಕಟ್ಟು ಶಂಶೋಧನ ನಿರ್ದೇಶನಾಲಯದ ನಿರ್ದೇಶಕರಿಗೆ ಪತ್ರ ಬರೆದಿರುವುದಾಗಿ ತಿಳಿಸಿದ್ದಾರೆ.

ಕೊಡಗಿನ ಮೂಲ ಬುಡಕಟ್ಟು ಜನಾಂಗವಾಗಿರುವ ಕೊಡವರನ್ನು ಎಸ್ಟಿ ಪಟ್ಟಿಗೆ ಸೇರಿಸುವ ಪ್ರಕ್ರಿಯೆ ವಿಳಂಬವಾಗುತ್ತಿದೆ. ಇದು ತ್ವರಿತವಾಗಿ ಆಗದಿದ್ದರೆ ಕೊಡವ ಬುಡಕಟ್ಟು ಜನಾಂಗದ ಭವಿಷ್ಯವು ಕತ್ತಲೆಯಲ್ಲಿ ಮುಳುಗುತ್ತದೆ. ಕೊಡವರ ಜಾನಪದ ಗುರುತು ಮತ್ತು ಭೌಗೋಳಿಕ-ರಾಜಕೀಯ ಅಸ್ತಿತ್ವಕ್ಕೆ ಹಾನಿಯಾಗಲಿದೆ. ಇತರ ಜನಾಂಗೀಯ ಗುಂಪುಗಳಿಗೆ ನೀಡಲಾಗುವ ಅದೇ ಸಾಂವಿಧಾನಿಕ ಪೋಷಣೆಯನ್ನು ಕೊಡವ ಬುಡಕಟ್ಟು ಜನಾಂಗಕ್ಕೂ ವಿಸ್ತರಿಸಬೇಕು ಎಂದು ಆಗ್ರಹಿಸಿದ್ದಾರೆ. ಕೇಂದ್ರ ಸರ್ಕಾರ ಜಮ್ಮು ಮತ್ತು ಕಾಶ್ಮೀರದ ಪಹಾರಿ ಸಮುದಾಯ, ಪೆರಂಬಲೂರಿನ ನರಿಕೊರ ವನ್-ನರಿಕುರವರ್, ಊಟಿಯ ಬಡಗಾಸ್, ಅಸ್ಸಾಂನ ಕೋಚ್ ರಾಜ್ಬೊಂಗ್ಶಿ, ಮಟಕ್, ಮೋರಾನ್, ಟೀ ಟ್ರೈಬ್, ಚುಟಿಯಾ, ತೈ ಅಹೋಮ್ ಸೇರಿದಂತೆ 6 ಬುಡಕಟ್ಟು ಸಮುದಾಯಗಳನ್ನು ಎಸ್ಟಿ ಪಟ್ಟಿಗೆ ಸೇರಿಸಲು ಉತ್ಸುಕವಾಗಿದೆ ಮತ್ತು ಪ್ರಕ್ರಿಯೆ ಆರಂಭಿಸಿದೆ ಸಾಂವಿಧಾನಿಕವಾಗಿ ಹಕ್ಕನ್ನು ಪಡೆಯಲು ಬಾಕಿ ಉಳಿದಿರುವ ಕೊಡವ ಜನಾಂಗದ ಬಗ್ಗೆಯೂ ಕೇಂದ್ರ ಸರ್ಕಾರ ಅದೇ ಕ್ರಮ ಅನುಸರಿಸಬೇಕು ಎಂದು ಹೇಳಿದ್ದಾರೆ.

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕೊಡವ ಲ್ಯಾಂಡ್ ಭೌಗೋಳಿಕ-ರಾಜಕೀಯ ಸ್ವಾಯತ್ತತೆ, ಸ್ವಯಂ-ಆಡಳಿತವನ್ನು ಸಾಧಿಸಲು ಮತ್ತು ಕೊಡವರನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕೆಂದು ಒತ್ತಾಯಿಸಿ ಕಳೆದ 3 ದಶಕಗಳಿಗೂ ಹೆಚ್ಚು ಕಾಲದಿಂದ ಶಾಂತಿಯುತವಾಗಿ ಹೋರಾಟಗಳನ್ನು ನಡೆಸುತ್ತಾ ಬಂದಿದೆ ಎಂದು ನಾಚಪ್ಪ ವಿವರಿಸಿದ್ದಾರೆ.

ಸಿಎನ್‌ಸಿಯ ಮನವಿಗೆ ಪ್ರತಿಯಾಗಿ 2011ರಲ್ಲಿ ಸರ್ಕಾರ ಕೊಡವರ ಎಥ್ನೋಗ್ರಾಫಿಕ್ ಅಧ್ಯಯನಕ್ಕೆ ಆದೇಶ ನೀಡಿತು. ಆದರೆ ಮೈಸೂರಿನಲ್ಲಿರುವ ಪೂರ್ವಾಗ್ರಹ ಮನೋಭಾವದ ಜನರು ಇಡೀ ಅಧ್ಯಯನ ಪ್ರಕ್ರಿಯೆಯನ್ನು ಅಪಾಯಕ್ಕೆ ಸಿಲುಕಿಸಿದರು. ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಇಡೀ ಪ್ರಕ್ರಿಯೆಯನ್ನು ಬುಡಮೇಲು ಮಾಡಿದರು. ಇದರ ವಿರುದ್ಧ ನಾವು ಕಾನೂನು ಮೊರೆ ಹೋದಾಗ ಉಚ್ಚ ನ್ಯಾಯಾಲಯವು 21 ಜುಲೈ 2021 ರಂದು ಜನಾಂಗೀಯ ಅಧ್ಯಯನವನ್ನು ಸರಿಪಡಿಸಲು ಅಥವಾ ಅದರ ಮರು-ಅಧ್ಯಯನಕ್ಕಾಗಿ ತೀರ್ಪು ನೀಡಿತು.

ಹೈಕೋರ್ಟ್ ಆದೇಶದ ಅನುಷ್ಠಾನಕ್ಕಾಗಿ ಬುಡಕಟ್ಟು ಸಚಿವಾಲಯದ ಪ್ರಧಾನ ಕಾರ್ಯದರ್ಶಿಗಳು 25 ಏಪ್ರಿಲ್ 2022ರಂದು ಬೆಂಗಳೂರಿನ ವಿಕಾಸ ಸೌಧದಲ್ಲಿ ನಮ್ಮೊಂದಿಗೆ ಸಭೆಯನ್ನು ನಡೆಸಿ ಅಭಿಪ್ರಾಯವನ್ನು ಸಂಗ್ರಹಿಸಿದರು. ಮರು ಅಧ್ಯಯನಕ್ಕೆ ಶಿಫಾರಸ್ಸು ಮಾಡಿ, ಕಡತವನ್ನು ಬುಡಕಟ್ಟು ಕಲ್ಯಾಣ ಇಲಾಖೆಗೆ ರವಾನಿಸಿದರು. 17 ಆಗಸ್ಟ್ 2022ರಂದು ಕರ್ನಾಟಕ ಸರ್ಕಾರದ ಬುಡಕಟ್ಟು ಕಲ್ಯಾಣ ಸಚಿವರನ್ನು ಭೇಟಿ ಮಾಡಿದಾಗ ನಮ್ಮ ಬೇಡಿಕೆಗೆ ಒಪ್ಪಿಗೆ ನೀಡಿದರು ಮತ್ತು ಅದರ ಕ್ಲಿಯರೆನ್ಸ್‌ಗಾಗಿ ಕಡತವನ್ನು ಕರ್ನಾಟಕದ ಸಿಎಂಗೆ ರವಾನಿಸಿದರು. ಆದರೆ ನಂತರದ ದಿನಗಳಲ್ಲಿ ನಮ್ಮ ಕಡತವನ್ನು ನಿರ್ಲಕ್ಷಿಸ ಲಾಗಿದೆ. ಇದು ನ್ಯಾಯಾಂಗ ನಿಂದನೆಗೆ ಸಮಾನವಾಗಿದೆ ಎಂದು ನಾಚಪ್ಪ ಟೀಕಿಸಿದ್ದಾರೆ.

ಕಾರಿನಲ್ಲಿ ಗೋಮಾಂಸ ಮಾರುತ್ತಿದ್ದ ವ್ಯಕ್ತಿ ಬಂಧನ; ಕಾರು, ಮಾಂಸ ವಶ

ಸುಂಟಿಕೊಪ್ಪ, ಜ.20– ಅಕ್ರಮವಾಗಿ ಕಾರಿನಲ್ಲಿ ಗೋಮಾಂಸವನ್ನು ತಂದು ಸುಂಟಿಕೊಪ್ಪ ಪಟ್ಟಣದಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿ ಕಾರು ಸಹಿತ ಗೋ ಮಾಂಸವನ್ನು ವಶಪಡಿಸಿಕೊಂಡಿದ್ದಾರೆ.

ಮಡಿಕೇರಿ ಆಜಾದ್‌ನಗರ ನಿವಾಸಿ ಜಮೀರ್ ಎಂಬಾತ ಬೆಟ್ಟದಪುರದಿಂದ ಅಕ್ರಮವಾಗಿ 80 ಕೆಜಿ. ಗೋಮಾಂಸವನ್ನು ಸ್ವಿಫ್ಟ್ ಕಾರಿನಲ್ಲಿ ತಂದು ಸುಂಟಿಕೊಪ್ಪ ಪಟ್ಟಣದ ವಿವಿಧ ಕಡೆ ಮಾರಾಟ ಮಾಡುತ್ತಿದ್ದ. ಈ ಕುರಿತು ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅದರಂತೆ ಸುಂಟಿಕೊಪ್ಪ ಪೊಲೀಸರು ಕುಶಾಲನಗರ ಡಿವೈಎಸ್ಪಿ ಗಂಗಾಧರಪ್ಪ ಹಾಗೂ ಕುಶಾಲನಗರ ವೃತ್ತ ನಿರೀಕ್ಷಕ ಮಹೇಶ್ ಅವರ ಮಾರ್ಗದರ್ಶನದಲ್ಲಿ ಸುಂಟಿಕೊಪ್ಪದಲ್ಲಿ ದಾಳಿ ನಡೆಸಿ ಆರೋಪಿಯನ್ನು ಮಾಲು ಸಮೇತ ಬಂಧಿಸಿ ಮೊಕದ್ದಮೆ ದಾಖಲಿಸಿಕೊಂಡಿದ್ದಾರೆ.

ಕಾರ್ಯಚರಣೆಯಲ್ಲಿ ಠಾಣಾಧಿಕಾರಿ ಸ್ವಾಮಿ, ಎಎಸ್‌ಐ ಶಿವಪ್ಪ, ಮುಖ್ಯಪೇದೆ ಸತೀಶ, ಪೇದೆಗಳಾದ ಜಗದೀಶ್, ಶ್ರೀಕಾಂತ್, ಬಿರದಾರ, ಜೈಶಂಕರ್ ಪಾಲ್ಗೊಂಡಿದ್ದರು.

ಇಂದಿನಿಂದ ನ್ಯಾಯಮೂರ್ತಿ ಪಣೀಂದ್ರ ಅಹವಾಲು ಸ್ವೀಕಾರ

ಮಡಿಕೇರಿ, ಜ.20– ಕರ್ನಾಟಕ ಲೋಕಾಯುಕ್ತದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಪಣೀಂದ್ರ ಅವರು ಜ.21 ಮತ್ತು 23 ರಂದು ಕೊಡಗು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ.

ಜ.21 ರಂದು ಬೆಳಗ್ಗೆ 10.30 ರಿಂದ 1.30 ಗಂಟೆವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆಯವರೆಗೆ ನಗರದ ಜಿಪಂ ಸಭಾಂಗಣದಲ್ಲಿ ಸಾರ್ವಜನಿಕರ ಕುಂದುಕೊರತೆ ಅಹವಾಲು ಸ್ವೀಕಾರ ಮತ್ತು ವಿಚಾರಣೆ ಮಾಡಲಿದ್ದಾರೆ.

ಜ.23 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆವರೆಗೆ ನಗರದ ಜಿಪಂ ಸಭಾಂಗಣದಲ್ಲಿ ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಗೌರವಾನ್ವಿತ ಉಪ ಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ) ತನಿಖೆ/ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಿಸಿದ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರ ನಡೆಸಲಿದ್ದಾರೆ.

ಮಡಿಕೇರಿಯಲ್ಲಿ ರಸ್ತೆ, ಚರಂಡಿ ಅಭಿವೃದ್ಧಿಗೆ ಚಾಲನೆ

ಮಡಿಕೇರಿ, ಜ.20– ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ನಾಲ್ಕನೇ ಹಂತದಡಿ ನಗರದ ಭಗವತಿ ದೇವಸ್ಥಾನ ಬಳಿಯಿಂದ ಗಾಳಿಬೀಡು ಜಂಕ್ಷನ್‌ವರೆಗೆ ರಸ್ತೆ ನಿರ್ಮಾಣಕ್ಕೆ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.



ಬಳಿಕ ಮಾತನಾಡಿದ ಎಂ.ಪಿ.ಅಪ್ಪಚ್ಚು ರಂಜನ್ ಮಡಿಕೇರಿ ನಗರದಲ್ಲಿ ಸರ್ವಋತು ರಸ್ತೆ ಅಭಿವೃದ್ಧಿಗೆ 13 ಕೋಟಿ ರೂ. ವೆಚ್ಚದ ಟೆಂಡರ್ ಅನುಮೋದನೆ ಆಗಿದ್ದು, ಆ ನಿಟ್ಟಿನಲ್ಲಿ ಶುಕ್ರವಾರ 2.43 ಕೋಟಿ ರೂ. ವೆಚ್ಚದ ವಿವಿಧ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಮಡಿಕೇರಿ ನಗರದಲ್ಲಿನ ಹಲವು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆಯನ್ನು ಮುಂದಿನ ಶುಕ್ರವಾರ ಏರ್ಪಡಿಸಲಾಗಿದೆ. ಆ ನಿಟ್ಟಿನಲ್ಲಿ ನಗರದ ಹಲವು ಸಮಸ್ಯೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವಲ್ಲಿ ಕ್ರಮವಹಿಸಲಾಗಿದೆ ಎಂದರು.

ಮಡಿಕೇರಿ ನಗರಸಭೆಯು ತೆರಿಗೆ ಸಂಗ್ರಹದಲ್ಲಿ ಶೇಕಡಾವಾರು ಪ್ರಗತಿ ಸಾಧಿಸಿದೆ. ನಗರಸಭೆಯಿಂದ ಸಾರ್ವಜನಿಕರಿಗೆ ಸ್ಪಂದಿಸುವ ನಿಟ್ಟಿನಲ್ಲಿ ಅಗತ್ಯ ಕೆಲಸಗಳು ನಡೆದಿವೆ. ನಗರದ ಎಲ್ಲಾ ರಸ್ತೆಗಳನ್ನು ಗುಂಡಿ ಮುಚ್ಚುವ ಮತ್ತು ರಸ್ತೆ ಅಭಿವೃದ್ಧಿ ಕೆಲಸಗಳು ನಡೆಯಲಿವೆ ಎಂದರು.

ವಿವಿಧ ರಸ್ತೆ ಮತ್ತು ಒರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ: ಮಡಿಕೇರಿ ನಗರದ ವಾರ್ಡ್ ನಂಬರ್ 1 ರಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.8 ರಲ್ಲಿ ಒಳದಾರಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.9 ರಲ್ಲಿ ಗೆಜ್ಜೆ ಸಂಗಪ್ಪ ಸಮುದಾಯ ಭವನ ಉನ್ನತೀಕರಣ ಕಾಮಗಾರಿ, ವಾರ್ಡ್ ನಂ.13 ರ ಪುಟಾಣಿ ನಗರದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂಬರ್ 14 ರ ಮುನೇಶ್ವರ ದೇವಸ್ಥಾನ ಹತ್ತಿರ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.23 ರ ಅಶೋಕ್ ಪುರದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಹೀಗೆ ಒಟ್ಟು 243.78 ಲಕ್ಷ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ನಗರಸಭಾ ಅಧ್ಯಕ್ಷರಾದ ಅನಿತಾ ಪೂವಯ್ಯ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಉಮೇಶ ಸುಬ್ರಮಣಿ, ಪೌರಾಯುಕ್ತರಾದ ವಿಜಯ, ನಗರಸಭೆ ಸದಸ್ಯರು, ಇತರರು ಇದ್ದರು.

ಮೂರ್ನಾಡು ರಸ್ತೆಗೆ ಮಹಾವೀರ ಚಕ್ರ ಪ್ರಶಸ್ತಿ ಪುರಸ್ಕೃತ ಕರ್ನಲ್ ಪುಟ್ಟಿಚಂಡ ಗಣಪತಿ ಹೆಸರು ನಾಮಕರಣ

ಜ.26ರ ಗಣರಾಜ್ಯೋತ್ಸವದಂದು ಉದ್ಘಾಟನೆ

ವಿರಾಜಪೇಟೆ, ಜ.20– ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಮೂರ್ನಾಡು ರಸ್ತೆಗೆ ಮಹಾವೀರ ಚಕ್ರ ಪ್ರಶಸ್ತಿ ಪುರಸ್ಕೃತ 'ಕರ್ನಲ್ ಪುಟ್ಟಿಚಂಡ ಗಣಪತಿ' ಅವರ ಹೆಸರನ್ನು ನಾಮಕರಣ ಮಾಡಲಾಗಿದ್ದು, ಜ.26 ರಂದು ಬೆಳಗ್ಗೆ 9.30 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಉದ್ಘಾಟಿಸಲಾಗುವುದು ಎಂದು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ತಿಳಿಸಿದ್ದಾರೆ.



ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸೈನಿಕರ ಸಂಘ ಹಾಗೂ ವಿರಾಜಪೇಟೆ ಲಯನ್ಸ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಮುರ್ನಾಡು ರಸ್ತೆಯಲ್ಲಿ ನಾಮಕರಣ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಈ ಹಿಂದೆ ಶ್ರೀಲಂಕಾದಲ್ಲಿ ಶಾಂತಿ ಪಾಲನ ಪಡೆಯಲ್ಲಿ ಕಾರ್ಯ ನಿರ್ವಹಿಸಿ ಅಂದಿನ ರಾಷ್ಟ್ರಪತಿಗಳಿಂದ ಕರ್ನಲ್ ಪುಟ್ಟಿಚಂಡ ಗಣಪತಿ ಅವರು ಮಹಾವೀರಚಕ್ರ ಪುರಸ್ಕಾರ ಪಡೆದಿದ್ದರು. ಅದರಿಂದ ಸದಾ ಅವರ ಹೆಸರನ್ನು ಸ್ಮರಿಸುವ ಸಲುವಾಗಿ ಹೆಸರನ್ನು ನಾಮಕರಣ ಮಾಡಲಾಗಿದೆ ಎಂದರು. ನಂತರ ತಾಲೂಕು ಮೈದಾನದಲ್ಲಿ ಗಣರಾಜ್ಯೋತ್ಸವ ಸಮಾರಂಭ ನಡೆಯಲಿದ್ದು, ತಾಲೂಕು ತಹಶೀಲ್ದಾರ್ ಅರ್ಚನ ಭಟ್ ಅವರು ಭಾಗವಹಿಸಲಿದ್ದು, ಈ ಕಾರ್ಯಕ್ರಮದಲ್ಲಿ ಎಲ್ಲಾ ಮಾಜಿ ಸೈನಿಕರು ಭಾಗವಹಿಸುವಂತೆ ಕೋರಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸೈನಿಕರ ಸಂಘದ ಕಾರ್ಯದರ್ಶಿ ಮುಗ್ಗೇರ ನಂದ, ನಿರ್ದೇಶಕ ಪುತ್ರಪಂಡ ರಮೇಶ್ ಕರುಂಬಯ್ಯ, ರಾಜಚಂದ್ರಶೇಖರ್, ಚೇನಂಡ ಕಾರ್ಯಪ್ಪ, ಮುಂಡಿಯೊಳಂಡ ಸುರೇಶ್, ಹೆಚ್.ಕೆ.ಅಪ್ಪಯ್ಯ ಉಪಸ್ಥಿತರಿದ್ದರು.

ಇ.ಕೆ.ಸುಬ್ರಾಯ ನಿಧನ

ಕುಶಾಲನಗರ, ಜ.20– ತಾಲೂಕಿನ



ಹೆಬ್ಬಾಲೆ ಪ್ರೌಢ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ಇ.ಕೆ. ಸುಬ್ರಾಯ (92) ಅವರು ಶುಕ್ರವಾರ ಸಂಜೆ ನಿಧನ ಹೊಂದಿದರು.

ಮೃತರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ ಅವರ ಸ್ವಗ್ರಾಮವಾದ ಕಣಿವೆ ಬಳಿಯ ಹಕ್ಕೆಯಲ್ಲಿ ನಡೆಯಲಿದೆ. ಮೃತ ಮುಖ್ಯೋಪಾಧ್ಯಾಯ ಇ.ಕೆ. ಸುಬ್ರಾಯ ಅವರು ಹೆಬ್ಬಾಲೆ ಪ್ರೌಢಶಾಲೆಯ ಅಪಾರ ವಿದ್ಯಾರ್ಥಿಗಳ ಮೆಚ್ಚಿನ ಶಿಕ್ಷಕರಾಗಿದ್ದರು. ಹೆಬ್ಬಾಲೆ ಶಾಲೆಯ 2 ದಶಕದ ಹಿರಿಮೆ ಹಾಗೂ ಗರಿಮೆಗೆ ಇವರ ಶ್ರಮ ಅಪಾರವಾಗಿದ್ದು, ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರು. ಹೆಬ್ಬಾಲೆ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಚ್.ಎಲ್.ರಮೇಶ್ ಮತ್ತು ಪದಾಧಿಕಾರಿಗಳು ಹಾಗೂ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್. ವಿ.ಶಿವಪ್ಪ ಅವರು ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

50 ವರ್ಷಗಳ ನಂತರ ಪೌರ ಕಾರ್ಮಿಕರಿಗೆ ಹಕ್ಕುಪತ್ರ ವಿತರಣೆ



ಯಳಂದೂರು, ಜ.20– ಕಳೆದ 50 ವರ್ಷಗಳಿಂದಲೂ ರಾಜ್ಯದಲ್ಲಿ ವಾಸ ಮಾಡುವ ಪೌರ ಕಾರ್ಮಿಕರಿಗೆ ಹಕ್ಕುಪತ್ರ ವಿತರಣೆ ಮಾಡಿರಲಿಲ್ಲ. ಈ ವಿಷಯ ರಾಜ್ಯ ಸರ್ಕಾರದ ಗಮನಕ್ಕೆ ಬಂದು ರಾಜ್ಯಾದ್ಯಂತ ಪೌರ ಕಾರ್ಮಿಕರಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಶಾಸಕ ಎನ್. ಮಹೇಶ್ ತಿಳಿಸಿದ್ದಾರೆ.

ಪಟ್ಟಣದ ಸಿಡಿಎಸ್ ಸಮುದಾಯ ಭನವದಲ್ಲಿ ಗುರುವಾರ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ ಪಟ್ಟಣದ ಪೌರ ಕಾರ್ಮಿಕರಿಗೆ ಹಕ್ಕುಪತ್ರಗಳ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 1018 ಪೌರ ಕಾರ್ಮಿಕ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದರು.

ಆಧಾರ್ ಕಾರ್ಡ್, ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಸೇರಿದಂತೆ ಎಲ್ಲಾ ಸವಲತ್ತುಗಳು ಇವರಿಗಿದ್ದರೂ. ಇವರು ವಾಸ ಮಾಡುವ ಮನೆಗಳಿಗೆ ಹಕ್ಕುಪತ್ರಗಳನ್ನೇ ನೀಡದಿರುವುದು ವಿಪರ್ಯಾಸ ಸಂಗತಿಯಾಗಿತ್ತು. ಈ ವಿಷಯ ಸರ್ಕಾರದ ಗಮನಕ್ಕೆ ಬಂದು ಇವರಿಗೆ ಹಕ್ಕುಪತ್ರ ನೀಡಲಾಗುತ್ತಿದೆ. ಇದರಿಂದ ಇವರೂ ಕೂಡ ತಮ್ಮ ಮನೆಗಳ ನಿಜವಾದ ಮಾಲೀಕರಾಗುವ ಅವಕಾಶ ಪಡೆದಂತಾಗಿದೆ. ಯಳಂದೂರು ಪಟ್ಟಣದಲ್ಲಿ 28 ಮಂದಿ ಹಾಗೂ ಕೊಳ್ಳೇಗಾಲದಲ್ಲಿ 990 ಮಂದಿಗೆ ಹಕ್ಕುಪತ್ರ ವಿತರಣೆ ಮಾಡಲಾಗುತ್ತಿದೆ ಎಂದರು.

ಕೊಳ್ಳೇಗಾಲದ ನಂಜಯ್ಯನಕಟ್ಟೆಯಲ್ಲಿ ವಾಸ ಮಾಡುವ 62 ಕುಟುಂಬಗಳು ಕಳೆದ 40 ವರ್ಷಗಳಿಂದ ಇಲ್ಲಿ ವಾಸವಾಗಿದ್ದಾರೆ. ಆದರೆ ಇವರಿಗೆ ಹಕ್ಕುಪತ್ರ ನೀಡಲು ನೀರಾವರಿ ಇಲಾಖೆಯು ಇದು ನಮ್ಮ ಜಾಗ ಎಂಬ ತಕರಾರು ಎತ್ತಿದೆ. ಈ ಸಮಸ್ಯೆಯನ್ನು ಕಾನೂನಾತ್ಮಕವಾಗಿ ಪರಿಹರಿಸಿ ಇವರಿಗೂ ಹಕ್ಕುಪತ್ರ ನೀಡಲು ಕ್ರಮ ವಹಿಸ ಲಾಗುವುದು. ಇದರೊಂದಿಗೆ ಡಿ.ದರ್ಜೆಯ ಎಲ್ಲಾ ನೌಕರಿಗೂ ನೇರವಾಗಿ ಅವರ ಖಾತೆಗೆ ಹಣವನ್ನು ವರ್ಗಾವಣೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ಗಮನ ಹರಿಸಲಾಗುವುದು ಎಂದು ಮಾಹಿತಿ ನೀಡಿದರು.

ಪಪಂ ಅಧ್ಯಕ್ಷೆ ಪ್ರಭಾವತಿರಾಜಶೇಖರ್, ನಾಮನಿರ್ದೇಶಿತ ಸದಸ್ಯರಾದ ಮಹೇಶ್, ರಘು, ನಿಂಗರಾಜು ಮುಖ್ಯಾಧಿಕಾರಿ ಮಲ್ಲೇಶ್, ಸಮುದಾಯ ಸಂಘಟಕ ಪರಶಿವಮೂರ್ತಿ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಎಇಇ ರಾಮಚಂದ್ರ ಜೆಇ ಕಿರಣ್ ಸೇರಿದಂತೆ ಹಲವರು ಇದ್ದರು.

ಇಂದು ವಿಜಯಸಂಕಲ್ಪ ಅಭಿಯಾನ



ಚಾಮರಾಜನಗರ, ಜ.20– ಜ.21ರಿಂದ 29ರವರೆಗೆ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ವಿಜಯ ಸಂಕಲ್ಪ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷರಾದ ಆರ್. ಸುಂದರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರುವ ಸಂಬಂಧ ಪಕ್ಷದಿಂದ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಅಂದು ವಿಜಯಪುರ ಜಿಲ್ಲೆಯ ಸಿಂಧಗಿಯಲ್ಲಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅಧಿಕೃತವಾಗಿ ಚಾಲನೆ ನೀಡುವರು. ಅದೇ ದಿನ ಏಕಕಾಲದಲ್ಲಿ ಜಿಲ್ಲೆಯ ನಾಲ್ಕು ವಿಧಾನಸಭೆ ಕ್ಷೇತ್ರಗಳಲ್ಲಿ ಪಕ್ಷದ ಪದಾಧಿಕಾರಿಗಳು, ಚುನಾಯಿತ ಜನಪ್ರತಿನಿಧಿಗಳು ಚಾಲನೆ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ನಗರದ ಕೊಳದಗಣಪತಿ ದೇವಾಲಯ, ಕೊಳ್ಳೇಗಾಲ ಪಟ್ಟಣದ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಹನೂರು ಪಟ್ಟಣದಲ್ಲಿ ಅಂದು ಬೆಳಗ್ಗೆ 9 ಗಂಟೆಗೆ ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಈ ವೇಳೆ ಸ್ಥಳೀಯ ನಾಯಕರು, ಮುಖಂಡರು, ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದರು.

ನಂತರ ಶಾಸಕ ಎನ್. ಮಹೇಶ್ ಮಾತನಾಡಿ, ಮುಂದಿನ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷ ಹಮ್ಮಿಕೊಂಡಿದ್ದ ಬೂತ್ ವಿಜಯ ಅಭಿಯಾನ ಅಭೂತಪೂರ್ವ ಯಶಸ್ಸು ಕಂಡಿತ್ತು. ಪ್ರಸ್ತುತ ಹಮ್ಮಿಕೊಂಡಿರುವ ವಿಜಯ ಸಂಕಲ್ಪ ಅಭಿಯಾನದಲ್ಲಿ ರಾಜ್ಯ ಮಟ್ಟದ ಕಾರ್ಯಕರ್ತರು ಎರಡು ಕೋಟಿ ಮತದಾರರನ್ನು ತಲುಪಲಿದ್ದಾರೆ. ಜಿಲ್ಲೆಯಲ್ಲಿ ನಾಲ್ಕರಿಂದ ಐದು ಲಕ್ಷ ಮತದಾರರಿಗೆ ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಸಾಧನೆಗಳನ್ನು ತಲುಪಿಸುವ ಗುರಿ ಹೊಂದಿದ್ದೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಆರ್. ಮಲ್ಲಿಕಾರ್ಜುನಪ್ಪ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಲ್ಲಾ ಬಿಜೆಪಿ ವಕ್ತಾರ ಅಯ್ಯನಪುರ ಶಿವಕುಮಾರ್, ಮಾಧ್ಯಮ ಪ್ರಮುಖ್ ಮಂಜುನಾಥ್ ಹಾಜರಿದ್ದರು.

ನಾಳೆ ಸಂತೇಮರಹಳ್ಳಿ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜ.20– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ನಾಲ್ಕನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಜ.22ರಂದು ಹಮ್ಮಿಕೊಳ್ಳಲಾಗಿದ್ದು, ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹೊನ್ನೂರು, ಕುದೇರು, ಉಮ್ಮತ್ತೂರು, ಸಂತೇಮರಹಳ್ಳಿ, ಕೆಂಪನಪುರ, ನವಿಲೂರು, ದುಗ್ಗಟ್ಟಿ, ಆಲ್ದೂರು, ಅಂಬಳೆ, ಮಂಗಲ ವಾಟರ್ ಸಪ್ಲೈ, ಚುಂಗಡಿಪುರ, ಅವಿತ್ ಗ್ರೀನ್ ಸೋಲಾರ್, ಮೂಡಲ ಅಗ್ರಹಾರ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ದೊಡ್ಡಯ್ಯ ನಿಧನ

ಚಾಮರಾಜನಗರ, ಜ.20– ಹನೂರು ತಾಲೂಕಿನ ಮಣಗಳ್ಳಿಯ ನಿವಾಸಿ ದೊಡ್ಡಯ್ಯ



(70) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು.

ಮೃತರು ಪತ್ನಿ ಹಾಗೂ ಮಕ್ಕಳಾದ ಕೊಳ್ಳೇಗಾಲ ಬಿಆರ್‌ಸಿ ಡಿ.ಮಹದೇವಕುಮಾರ್, ಸಿಯುಕೆ ಸಹಾಯಕ ಪ್ರಾಧ್ಯಾಪಕ ಡಾ.ಶ್ರೀನಿವಾಸ ಮಣಗಳ್ಳಿ ಸೇರಿ ಮೂವರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ (ಜ.21) ಸ್ವಗ್ರಾಮ ಮಣಗಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಪಿಜಿ ಪಾಳ್ಯದ ಹೊಸಮಠದ ರಾಜಶೇಖರ ಸ್ವಾಮೀಜಿಗಳ ಮೃತದೇಹ ಕಾವೇರಿ ನದಿಯಲ್ಲಿ ಪತ್ತೆ

ಅನಾರೋಗ್ಯದಿಂದ ಬಳಲುತ್ತಿದ್ದ ಸ್ವಾಮೀಜಿ

ಕೊಳ್ಳೇಗಾಲ, ಜ.20– ಪಿಜಿ ಪಾಳ್ಯ ಗ್ರಾಮದ ಹೊಸಮಠದ ರಾಜಶೇಖರ ಸ್ವಾಮೀಜಿ ಅವರ ಶವವು ಕಾವೇರಿ ತೀರದ ವೆಸ್ಲಿ ಸೇತುವೆ ಬಳಿ ಶುಕ್ರವಾರ ಪತ್ತೆಯಾಗಿದೆ.



ಜ.20 ರಂದು ಕಾವೇರಿ ನದಿ ತೀರದಲ್ಲಿ ಅಪರಿಚಿತ ಮೃತ ದೇಹ ತೇಲುತ್ತಿರುವ ವಿಷಯ ತಿಳಿದ ಗ್ರಾಮಾಂತರ ಪೊಲೀಸ್ ಠಾಣಾ ಪಿಎಸ್‌ಐ ಮಂಜುನಾಥ್ ಭೇಟಿ ನೀಡಿದ್ದು ಮೃತ ದೇಹವನ್ನು ನೀರಿನಿಂದ ಮೇಲಕ್ಕೆ ಎತ್ತಿಸಿದ್ದಾರೆ.

ಬಳಿಕ ಅದು ಹೊಸ ಮಠದ ರಾಜಶೇಖರ ಸ್ವಾಮೀಜಿ ಅವರ ಮೃತದೇಹ ಎಂದು ತಿಳಿದು ಬಂದಿದೆ ಈ ಸಂಬಂಧ ಪಟ್ಟವರಿಗೆ ಮಾಹಿತಿ ರವಾನಿಸಲಾಗಿದೆ. ನಂತರ ರಾಜಶೇಖರ ಸ್ವಾಮೀಜಿ ಸಹೋದರನಾದ ಪ್ರಕಾಶ್ ರಾಜಶೇಖರ ಸ್ವಾಮೀಜಿ ಅನಾರೋಗ್ಯ ಪೀಡಿತರಾಗಿದ್ದರು ಹಾಗೂ ಹೊಟ್ಟೆ ನೋವಿನಿಂದಲೂ ಬಳಲುತ್ತಿದ್ದರು. ಜ.17 ರಂದು ಕೊಳ್ಳೇಗಾಲದ ಕಡೆ ಹೋಗಿ ಬರುತ್ತೇನೆಂದು ಹೋದವರು ಮಠಕ್ಕೆ ಹಿಂದಿರುಗಿರಲಿಲ್ಲ. ಎಲ್ಲಾ ಕಡೆ ಹುಡುಕಿದರೂ ಸಿಕ್ಕಿರಲಿಲ್ಲ. ಅಷ್ಟರಲ್ಲಿ ಕಾವೇರಿ ವೆಸ್ಲಿ ಸೇತುವೆಯ ಬಳಿ ಅವರ ಮೃತದೇಹ ಸಿಕ್ಕಿದೆ ಎಂಬ ತಿಳಿಯಿತು. ಅನಾರೋಗ್ಯವಿದ್ದ ಕಾರಣಕ್ಕೆ ಜೀವನದಲ್ಲಿ ಜಿಗುಪ್ಸೆಗೊಂಡು ನೀರಿನಲ್ಲಿ ಮುಳುಗಿರಬಹುದು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ. ಸ್ವಾಮಿಜಿ ಮೃತ ದೇಹವನ್ನು ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು.

ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಶಂಕರ್‌ಗೆ ಸನ್ಮಾನ

ಚಾಮರಾಜನಗರ ಜ.20– ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಶಂಕರ್ ಅವರನ್ನು ನಗರದ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಸರಳ ಕಾರ್ಯಕ್ರಮದಲ್ಲಿ ವಿವೇಕಾನಂದ ಶಿಕ್ಷಣ ಸಂಸ್ಥೆ ಅಧ್ಯಕ್ಷ ಚಾ.ಹ.ರಾಮು ಸೇರಿದಂತೆ ಸಮುದಾಯದ ಇತರರು ಸನ್ಮಾನಿಸಿದರು.

ನಂತರ ಅವರು ಮಾತನಾಡಿ, ಅಂಬೇಡ್ಕರ್ ಹೇಳಿರುವಂತೆ ಯಾರೂ ಸಹ ಅದೃಷ್ಟ ನಂಬಿ ಕೂರಬಾರದು, ಎಲ್ಲರೂ ಪರಿಶ್ರಮದಿಂದ ಮುಂದೆ ಬರಬೇಕು, ಸಮುದಾಯದ ವಿದ್ಯಾರ್ಥಿಗಳು ಉನ್ನತ ಮಟ್ಟದ ವಿದ್ಯಾಭ್ಯಾಸ ಪಡೆದು, ಅತ್ಯುನ್ನತವಾದ ಸರಕಾರಿ ಹುದ್ದೆಗಳನ್ನು ತಮ್ಮದಾಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ ಸ್ವಾಮಿ, ವಕೀಲರಾದ ದಲಿತ್ ರಾಜ್, ನಾಗರಾಜೇಂದ್ರ, ಚನ್ನಿಪುರಮೋಳೆಯ ಚಿನ್ನಸ್ವಾಮಿ, ಮಹದೇವು, ಸಿ.ಎಂ.ಕೆಂಪರಾಜು, ಸುರೇಶ್, ಶ್ರೀಕಂಠಮೂರ್ತಿ, ದೊಡ್ಡಮೋಳೆ ರಂಗಸ್ವಾಮಿ ಹಾಜರಿದ್ದರು.

ದೇವಾಲಯ ತೆರವು ವಿರೋಧಿಸಿ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ



ಬೇಗೂರು(ಗುಂಡ್ಲುಪೇಟೆ), ಜ.20– ಬೇಗೂರು ಸಮೀಪದ ಶೀಗೇವಾಡಿ ಗ್ರಾಮದ ಹಿಂದೂ ದೇವಾಲಯವನ್ನು ಒಡೆದು ಹಾಕಲು ಮುಂದಾಗಿರುವ ಕ್ರಮವನ್ನು ಖಂಡಿಸಿ, ಗ್ರಾಮಸ್ಥರ ವಿರುದ್ಧವೇ ಪ್ರಕರಣ ದಾಖಲಿಸಿರುವುದನ್ನು ವಿರೋಧಿಸಿ, ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಇಲ್ಲಿನ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಿದರು.

ಶೀಗೇವಾಡಿ ಗ್ರಾಮದ ಗಣಪತಿ ಮತ್ತು ಚನ್ನಕೇಶವ ದೇವಾಲಯ ಪುರಾತನ ಕಾಲದಾಗಿದ್ದು, ಗ್ರಾಮಸ್ಥರು ಆಗಿನಿಂದಲೂ ಪೂಜೆ ಸಲ್ಲಿಸಿಕೊಂಡು ಬರುತ್ತಿದ್ದಾರೆ. ಬೆಂಗಳೂರು ಮೂಲದ ಸುಜಾತ ಎಂಬುವರು ದೇವಾಲಯದ ಪಕ್ಕದಲ್ಲಿ ಜಮೀನನ್ನು ಖರೀದಿ ಮಾಡಿದ್ದು ದೇವಾಲಯವನ್ನು ತೆರವುಗೊಳಿಸಲು ಮುಂದಾಗಿದ್ದರು.

ಇದನ್ನು ಗಮನಿಸಿದ ಗ್ರಾಮಸ್ಥರು ದೇವಾಲಯ ಒಡೆದು ಹಾಕುವುದನ್ನು ತಡೆದು ಬೇಗೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆದರೆ ಬೇಗೂರು ಪೊಲೀಸರು ಗ್ರಾಮಸ್ಥರು ನೀಡಿದ ದೂರನ್ನು ನಿರ್ಲಕ್ಷಿಸಿ, ಗ್ರಾಮಸ್ಥರ ವಿರುದ್ಧವೇ ದೂರು ದಾಖಲಿಸಿದ್ದು, ಇದು ಖಂಡನೀಯ ಎಂದು ಪ್ರತಿಭಟನಾಕಾರರು ಠಾಣೆಯ ಆವರಣದಲ್ಲಿ ಪೊಲೀಸರ ವಿರುದ್ಧ ದಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು. ಡಿವೈಎಸ್ಪಿ ಪ್ರಿಯದರ್ಶಿನಿ ಭೇಟಿ ನೀಡಿ, ಪ್ರತಿಭಟನಾಕಾರರೊಂದಿಗೆ ಮಾತನಾಡಿ, ಸುಜಾತ ಅವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಆದರೆ ಇದಕ್ಕೆ ಒಪ್ಪದ ಪ್ರತಿಭಟನಾಕಾರರು ಸಹ ಉನ್ನತ ಮಟ್ಟದ ಅಧಿಕಾರಿಗಳು ಬರುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ತಡರಾತ್ರಿವರೆಗೂ ಪ್ರತಿಭಟನೆ ಮುಂದುವರೆಸಿದ್ದಾರೆ.

ಪ್ರತಿಭಟನೆಯಲ್ಲಿ ಹಿಂದೂ ಜಾಗರಣ ವೇದಿಕೆ ದಕ್ಷಿಣ ಪ್ರಾಂತ ಸಂಚಾಲಕ ಲೋಹಿತ್ ಅರಸ್, ಹಿಂದೂ ಜಾಗರಣ ವೇದಿಕೆ ಮೈಸೂರು ಮಹಾನಗರ ಸಂಚಾಲಕ ನಂದೀಶ್, ಹಿಂದೂ ಜಾಗರಣ ವೇದಿಕೆ ಚಾಮರಾಜನಗರ ಜಿಲ್ಲಾ ಸಂಚಾಲಕ ನಂದೀಶ್, ರಂಗಸ್ವಾಮಿ ಸೇರಿದಂತೆ ವೇದಿಕೆಯ ಕಾರ್ಯಕರ್ತರು ಭಾಗವಹಿಸಿದ್ದರು.

ಇಂದು ಡೊಳ್ಳಿಪುರದಲ್ಲಿ ವಿದ್ಯುತ್ ಅದಾಲತ್

ಚಾಮರಾಜನಗರ, ಜ.20– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಹರದನಹಳ್ಳಿ ಉಪವಿಭಾಗದ ವತಿಯಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಅಧ್ಯಕ್ಷತೆಯಲ್ಲಿ ತಾಲೂಕಿನ ಡೊಳ್ಳಿಪುರ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಸಭೆಯನ್ನು ಜ.21ರಂದು ಬೆಳಗ್ಗೆ 11 ರಿಂದ 12 ಗಂಟೆಯವರೆಗೆ ಏರ್ಪಡಿಸಲಾಗಿದೆ. ಸಾರ್ವಜನಿಕರ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳಿದ್ದಲ್ಲಿ ಸಭೆಗೆ ಹಾಜರಾಗಿ ತಿಳಿಸುವಂತೆ ನಿಗಮದ ಪ್ರಕಟಣೆ ತಿಳಿಸಿದೆ.

ಜ.24ರಂದು ಚಾ.ನಗರ ನಗರಸಭೆ ಸಾಮಾನ್ಯ ಸಭೆ

ಚಾಮರಾಜನಗರ, ಜ.20– ಚಾಮರಾಜನಗರ ನಗರಸಭೆಯ ಸಾಮಾನ್ಯ ಸಭೆಯು ಅಧ್ಯಕ್ಷೆ ಸಿ.ಎಂ. ಆಶಾ ಅವರ ಅಧ್ಯಕ್ಷತೆ ಯಲ್ಲಿ ಜ.24ರಂದು ಬೆಳಿಗ್ಗೆ 11 ಗಂಟೆಗೆ ಚಾಮರಾಜನಗರ ನಗರಸಭೆ ಕಚೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

ಹಾಸನದ ಫ್ಯಾಷನ್ ಶೋನಲ್ಲಿ ಚಾ.ನಗರದ ತೇಜಸ್ ಪ್ರಥಮ

ಚಾಮರಾಜನಗರ, ಜ.20– ಹಳ್ಳಿಹೈದ ಪ್ಯಾಟೆಗ್ ಬಂದ ಖ್ಯಾತಿಯ ವರದಪ್ರಸಾದ್ ಹಾಗೂ ದಿವಾ ಮಾಡೆಲ್ ಮ್ಯಾನೇಜ್‌ಮೆಂಟ್‌ನ ವ್ಯವಸ್ಥಾಪಕರಾದ ದಿವ್ಯ ವರದಪ್ರಸಾದ್ ಅವರು ಇತ್ತೀಚೆಗೆ ಹಾಸನದ ಪವನಪುತ್ರ ರೆಸಾರ್ಟ್‌ನಲ್ಲಿ ಆಯೋಜಿಸಿದ್ದ ದಿವಾ ಮಾಡೆಲ್ ಮ್ಯಾನೇಜ್‌ಮೆಂಟ್ ಆಫ್ ಕರ್ನಾಟಕ-2022 ಫ್ಯಾಷನ್ ಶೋ ಸ್ಪರ್ಧೆಯಲ್ಲಿ ನಗರದ ತೇಜಸ್. ಜಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಗಮನ ಸೆಳೆಯುವ ಮೂಲಕ ಪ್ರಥಮ ಸ್ಥಾನ ಪಡೆದು ಟ್ರೋಫಿ, ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾನೆ. ಸ್ಪರ್ಧಿಗಳು ಗಳಿಸಿದ ಅಂಕಗಳ ಆಧಾರದ ಮೇಲೆ ತೇಜಸ್ ಗಂಡು ಮಕ್ಕಳ ಚಿಣ್ಣರ ವಿಭಾಗದಲ್ಲಿ ವಿಜೇತನಾಗಿದ್ದಾನೆ. ತೇಜಸ್‌ಗೆ ಪ್ರಮಾಣ ಪತ್ರ, ಟ್ರೋಫಿ, 3 ಸಾವಿರ ನಗದು ಪುರಸ್ಕಾರವನ್ನು ಮಣಿ ಸ್ಪೆಷಲ್ ಆಸ್ಪತ್ರೆ ಮಕ್ಕಳ ತಜ್ಞ ದಿನೇಶ್ ಭೈರೇಗೌಡ ವಿತರಿಸಿದ್ದಾರೆ. ಈತ ನಗರದ ಶಂಕರಪುರ 2ನೇ ಕ್ರಾಸ್‌ನಲ್ಲಿ ವಾಸವಿರುವ ಜಿ.ಗಿರೀಶ ಮತ್ತು ಆರ್.ಎನ್.ಗೀತಾ ರವರ ಪುತ್ರ.



ಮೈಸೂರು ಮಿತ್ರ

ಮೂರನೇ ಪುಟದಿಂದ

22 ಸ್ಥಾನ ಗೆದ್ದರೆ ಅದೇ ಹೆಚ್ಚು

ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ನಮ್ಮನ್ನು ಕಸಕ್ಕಿಂತ ಕಡೆಯಾಗಿ ನೋಡಿದರು. ಅಧಿಕಾರಿಗಳ ವರ್ಗಾವಣೆ, ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನ ಯಾವುದನ್ನೂ ನಮ್ಮ ಪಕ್ಷದವರಿಗೆ ನೀಡುತ್ತಿರಲಿಲ್ಲ. ಮುಡಾ ಅಧ್ಯಕ್ಷ ಸ್ಥಾನವನ್ನು ಕೊಡಲಿಲ್ಲ. ನಮ್ಮನ್ನು ಕ್ಯಾರೆ ಎನ್ನಲಿಲ್ಲ. ಅವಾಗಿಯೇ ಅಧಿಕಾರ ಕಳೆದುಕೊಂಡರು. ಆದರೆ ಅಧಿಕಾರ ಹೋಗಲು ಸಿದ್ದರಾಮಯ್ಯ ಕಾರಣ ಎಂದು ಅಪಪ್ರಚಾರ ಮಾಡತೊಡಗಿದರು ಎಂದು ಹೇಳಿದರು.

ಜೀವನದಲ್ಲಿ ಒಟ್ಟು 13 ಚುನಾವಣೆಗಳನ್ನು ಎದುರಿಸಿದ್ದೇನೆ. ಎರಡು ಬಾರಿ ಲೋಕಸಭೆ, 11 ಬಾರಿ ವಿಧಾನಸಭೆ, ಒಮ್ಮೆ ತಾಲೂಕು ಬೋರ್ಡ್ ಚುನಾವಣೆ ಎದುರಿಸಿದ್ದೇನೆ. ನಾನು ಜೆಡಿಎಸ್‌ನ ಸಂಸ್ಥಾಪಕ ಅಧ್ಯಕ್ಷನಾಗಿದ್ದೆ. ಅಹಿಂದ ಸಮಾವೇಶ ಮಾಡಿದ ಒಂದೇ ಕಾರಣಕ್ಕೆ ಹೆಚ್.ಡಿ.ದೇವೇಗೌಡರು ನನ್ನನ್ನು ಜೆಡಿಎಸ್‌ನಿಂದ ಹೊರ ಹಾಕಿದರು. ಧರ್ಮಸಿಂಗ್ ಅವರಿಗೆ ಹೇಳಿ ಉಪ ಮುಖ್ಯಮಂತ್ರಿ ಸ್ಥಾನದಿಂದ ತೆಗೆಸಿದರು. ನಂತರ ನಾನು ಕಾಂಗ್ರೆಸ್‌ನಿಂದ ಒತ್ತಾಯ ಬಂದ ಹಿನ್ನೆಲೆಯಲ್ಲಿ 2006ರಲ್ಲಿ ಎಲ್ಲರೊಂದಿಗೆ ಚರ್ಚಿಸಿ ಕಾಂಗ್ರೆಸ್ ಸೇರಿದೆ. 2008, 2013ರಲ್ಲಿ ವರುಣಾದಿಂದ ಗೆದ್ದೆ. ನಂತರ ಮುಖ್ಯಮಂತ್ರಿಯಾಗಿದ್ದನ್ನು ಸಿದ್ದರಾಮಯ್ಯ ವಿವರಿಸಿದರು.

ರಾಜಕೀಯ ಶಕ್ತಿ ನೀಡಿದ ಚಾಮುಂಡೇಶ್ವರಿ ಕ್ಷೇತ್ರ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನನಗೆ 1993ರಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದ್ದಾಗ ಆಶೀರ್ವಾದ ಮಾಡಿ ಗೆಲ್ಲಿಸಿದ್ದೀರಿ. ರಾಜಕೀಯವಾಗಿ ನನಗೆ ಶಕ್ತಿ ಕೊಟ್ಟಿದ್ದು ಚಾಮುಂಡೇಶ್ವರಿ ಕ್ಷೇತ್ರ. 1983, 1985, 1994ರಲ್ಲಿ ಗೆದ್ದು, ಶಾಸಕನಾಗಿ, ಮಂತ್ರಿ, ಉಪಮುಖ್ಯಮಂತ್ರಿ, ನಂತರ ಮುಖ್ಯಮಂತ್ರಿಯಾಗಿ ಕೆಲಸ ನಿರ್ವಹಿಸಿದ್ದೇನೆ. ಇಷ್ಟೆಲ್ಲಾ ಆಗಲು ಚಾಮುಂಡೇಶ್ವರಿ ಕ್ಷೇತ್ರದ ಜನರು ನನಗೆ ರಾಜಕೀಯ ಶಕ್ತಿ ಕೊಟ್ಟಿದ್ದರಿಂದಲೇ ಸಾಧ್ಯವಾಯಿತು ಎಂಬುದನ್ನು ಮರೆಯಲು ಸಾಧ್ಯವೇ ಇಲ್ಲ ಎಂದರು. ನಾನು ಚುನಾವಣೆಯಲ್ಲಿ 5 ಬಾರಿ ಗೆದ್ದು 3 ಬಾರಿ ಸೋತಿದ್ದೇನೆ. ನಾನು ಒಟ್ಟು 8 ಚುನಾವಣೆಯಲ್ಲಿ ಗೆದ್ದಿದ್ದೇನೆ. ಚಾಮುಂಡೇಶ್ವರಿಯಲ್ಲಿ 5 ಬಾರಿ, ವರುಣಾದಲ್ಲಿ ಎರಡು ಬಾರಿ, ಬಾದಾಮಿಯಲ್ಲಿ ಒಮ್ಮೆ ಗೆದ್ದಿದ್ದೇನೆ ಎಂದು ಸಿದ್ದರಾಮಯ್ಯ ನೆನಪಿಸಿಕೊಂಡರು. 136 ವರ್ಷಗಳ ಇತಿಹಾಸ ಇರುವ ಕಾಂಗ್ರೆಸ್ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಪಕ್ಷ. ಯಾವುದೇ ಜಾತಿ, ಧರ್ಮದ ತಾರತಮ್ಯ ಇಲ್ಲದ ಜಾತ್ಯಾತೀತ ಪಕ್ಷ. ಕಾಂಗ್ರೆಸ್ ಪಕ್ಷಕ್ಕೆ ಸೇರಲು ಯಾರಿಗೂ ಅಡೆತಡೆ ಇಲ್ಲ. ಹಾಗಾಗಿ ಷರತ್ತಿಲ್ಲದೆ ಬೀರಿಹುಂಡಿ ಬಸವಣ್ಣ, ಮಾವಿನಹಳ್ಳಿ ಸಿದ್ದೇಗೌಡ, ಯರಗನಹಳ್ಳಿ ಮಾದೇಗೌಡ, ಹಿನಕಲ್ ಸೋಮಣ್ಣ, ಬನ್ನೂರಿನ ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ಇನ್ನಿತರರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾರೆ. ಅವರೆಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸುತ್ತೇನೆ ಎಂದರು.

ಕಾಂಗ್ರೆಸ್ ಗೆಲುವು ಶತಸಿದ್ಧ

ಕಾಂಗ್ರೆಸ್ ಕಾರ್ಯಕರ್ತರು ಈಗಾಗಲೇ ತೀರ್ಮಾನಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಅನ್ನು ಸೋಲಿಸಲು ನಿರ್ಧರಿಸಿದ್ದಾರೆ. ಈ ಬಾರಿಯೂ ಅವರು ಒಳ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ. ಜೆಡಿಎಸ್, ಬಿಜೆಪಿ ಏನೇ ಒಳ ಒಪ್ಪಂದ ಮಾಡಿಕೊಂಡರೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದೆ ಗೆಲ್ಲುತ್ತದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್, ಕ್ಷೀರ ಭಾಗ್ಯ, ಶಾದಿ ಭಾಗ್ಯ, ಪಶು ಭಾಗ್ಯ, ಮೈತ್ರಿ, ಮನಸ್ವಿನಿ, ಪರಿಶಿಷ್ಟ ಜಾತಿ, ವರ್ಗಗಳಿಗೆ ಕರ್ನಾಟಕದ ಇತಿಹಾಸದಲ್ಲಿ ಯಾವ ಸರ್ಕಾರವೂ ಮಾಡದಷ್ಟು ಯೋಜನೆಗಳನ್ನು ಮಾಡಿದೆ. ನಾನೇನು ಕೇವಲ ಹಿಂದುಳಿದವರಿಗಷ್ಟೇ ಯೋಜನೆ ಮಾಡಿದ್ದಲ್ಲ ಎಂದ ಅವರು, ಈ ಎಲ್ಲಾ ಜನಪರ ಕಾರ್ಯಕ್ರಮಗಳನ್ನು ರಾಜ್ಯದ ಜನತೆ ಮತ್ತೊಮ್ಮೆ ಜ್ಞಾಪಿಸಿಕೊಳ್ಳಲು ಪ್ರಾರಂಭಿಸಿದ್ದಾರೆ. ರಾಜ್ಯದ ಮೂಲೆ ಮೂಲೆಯ ಜನ ಕಾಂಗ್ರೆಸ್ ಪರ ಒಲವು ವ್ಯಕ್ತಪಡಿಸುತ್ತಿದ್ದಾರೆ. ಈ ಬಾರಿ ಬಿಜೆಪಿ, ಜೆಡಿಎಸ್ ಸೋಲಿಸಿ, ಕಾಂಗ್ರೆಸ್ ಅಧಿಕಾರಕ್ಕೆ ತರಬೇಕೆಂದು ನಿರ್ಧರಿಸಿದ್ದಾರೆ ಎಂದರು. ಸಿದ್ದರಾಮಯ್ಯ ಲಿಂಗಾಯಿತ, ಒಕ್ಕಲಿಗರ ವಿರೋಧಿ ಎಂದು ಅಪಪ್ರಚಾರ ಮಾಡಿದರು. ನಾನು ಯಾವ ಜಾತಿ, ಧರ್ಮದ ಬೇಧ ಇಲ್ಲದೆ ,ಬಡವರ ಪರ ನಿಲ್ಲಬೇಕು ಎಂಬ ರಾಜಕೀಯ ಇಚ್ಛೆ ಹೊಂದಿರುವವನು. ಈಗ ಇದೆಲ್ಲವೂ ನಿಧಾನವಾಗಿಯಾದರೂ ರಾಜ್ಯದ ಜನರಿಗೆ ಅರ್ಥವಾಗುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ತರಲು ಕಾದಿದ್ದಾರೆ ಎಂದರು.

ಗೃಹಲಕ್ಷ್ಮಿ, ಗೃಹಭಾಗ್ಯ ಯೋಜನೆ ಘೋಷಣೆ: ಈಗ ನಾವು ಅನೇಕ ಜನಪರ ಯೋಜನೆಗಳನ್ನು ನೀಡಲಿದ್ದೇವೆ. ಪ್ರಿಯಾಂಕ ಗಾಂಧಿ ಅವರು ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯದ ಪ್ರತಿ ಕುಟುಂಬದ ಮನೆಯ ಒಡತಿಗೆ ತಿಂಗಳಿಗೆ 2 ಸಾವಿರ ರೂ. ಅಂದರೆ ವರ್ಷಕ್ಕೆ 24 ಸಾವಿರ ರೂ. ನೀಡುವ ಘೋಷಣೆ ಮಾಡಿದ್ದಾರೆ. ಅದೇ ರೀತಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ನೀಡುವ ಘೋಷಣೆ ಮಾಡಿದ್ದೇವೆ. ಇನ್ನೂ ಅನೇಕ ಜನಪರ ಯೋಜನೆಗಳನ್ನು ನೀಡಲು ಕಾಂಗ್ರೆಸ್ ಬದ್ಧವಾಗಿದೆ ಎಂದು ಹೇಳಿದರು.

ಉಚಿತ ವಿದ್ಯುತ್ ನೀಡುವ ಪ್ರಶ್ನೆಯೇ ಇಲ್ಲ

ಬೇಡಿಕೆ ಹೆಚ್ಚಾದಂತೆ ಪೂರೈಸಲು ಇಲಾಖೆ ಕ್ರಮ ವಹಿಸಿದೆ. 'ಬೆಳಕು' ಯೋಜನೆಯಡಿ 2.5 ಲಕ್ಷ ಮನೆಗಳಿಗೆ ಹೊಸ ಸಂಪರ್ಕ ಕಲ್ಪಿಸಿದ್ದೇವೆ. 'ಅಮೃತ ಜ್ಯೋತಿ'ಯಡಿ ಎಸ್ಸಿ, ಎಸ್ಟಿ ಸಮುದಾಯಗಳಿಗೆ 75 ಯೂನಿಟ್‌ವರೆಗೂ ಉಚಿತ ವಿದ್ಯುತ್ ಪೂರೈಸಲಾಗುತ್ತಿದೆ ಎಂದು ಸುನಿಲ್‌ಕುಮಾರ್ ನುಡಿದರು. ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಕೆಟ್ಟು ಹೋದರೆ 24 ಗಂಟೆಯೊಳಗಾಗಿ ಬದಲಿಸುವ ವ್ಯವಸ್ಥೆ ಇರುವುದು ಕೇವಲ ಕರ್ನಾಟಕದಲ್ಲಿ ಮಾತ್ರ. ಆದ್ದರಿಂದ ವಿದ್ಯುತ್ ಕಡಿತವಾಗದಂತೆ ಇಲಾಖೆಯು ಯೋಜನೆ ರೂಪಿಸಿ ಗ್ರಾಹಕರಿಗೆ ಗುಣಾತ್ಮಕ ಸೇವೆ ನೀಡಲಾಗುತ್ತಿದೆ ಎಂದು ಅವರು ಇದೇ ಸಂದರ್ಭ ಎಸ್ಕಾಂಗಳ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ತಿ.ನರಸೀಪುರದಲ್ಲಿ ಚಿರತೆಗೆ ಮತ್ತೊಂದು ಬಲಿ

ಪರಾರಿಯಾಗಿದೆ. ಈ ವೇಳೆ ಮೃತ ಸಿದ್ದಮ್ಮ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಗ್ರಾಮಸ್ಥರು ಅರಣ್ಯ ಇಲಾಖೆಗೆ ವಿಷಯ ಮುಟ್ಟಿಸಿದರಾದರೂ, ಘಟನೆ ನಡೆದು ಹಲವು ಗಂಟೆಗಳಾದರೂ ಅರಣ್ಯಾಧಿಕಾರಿಗಳು ಸ್ಥಳಕ್ಕಾಗಮಿಸದ ಕಾರಣ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಇದೇ ಸಂದರ್ಭ ತಿ.ನರಸೀಪುರ ಸಾರ್ವಜನಿಕ ಆಸ್ಪತ್ರೆ ಶವಾಗಾರಕ್ಕೆ ದೇಹವನ್ನು ರವಾನಿಸಲಾಯಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶಾಸಕ ಎಂ.ಅಶ್ವಿನ್ ಕುಮಾರ್ ಪರಿಶೀಲನೆ ನಡೆಸಿ, ಮಾಹಿತಿ ಪಡೆದರಲ್ಲದೇ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು. ತಹಸೀಲ್ದಾರ್ ಗೀತಾ, ಅರಣ್ಯ ಇಲಾಖೆ ಎಸಿಎಫ್ ಲಕ್ಷ್ಮಿಕಾಂತ, ವಲಯ ಅರಣ್ಯಾಧಿಕಾರಿ ಸೈಯ್ಯದ್ ನದೀಮ್, ಉಪ ವಲಯಾರಣ್ಯಾಧಿಕಾರಿ ಮಂಜುನಾಥ್, ಉಮೇಶ್, ಎಸ್‌ಐ ಪಚ್ಚೇಗೌಡ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇತ್ತೀಚೆಗೆ ತಾಲೂಕಿನ ಎಸ್.ಕೆಬ್ಬೇಹುಂಡಿ ಗ್ರಾಮದ ವಿದ್ಯಾರ್ಥಿನಿ ಮೇಘನಾ ಹಾಗೂ ಎಂ.ಎಲ್.ಹುಂಡಿ ಗ್ರಾಮದ ವಿದ್ಯಾರ್ಥಿ ಮಲ್ಲಿಕಾರ್ಜುನ ಎಂಬುವರ ಮೇಲೆ ದಾಳಿ ನಡೆಸಿದ್ದ ಚಿರತೆ ಈ ಇಬ್ಬರನ್ನು ಬಲಿ ಪಡೆದಿತ್ತು. ಬಳಿಕ ಅರಣ್ಯ ಇಲಾಖೆ ನಿರಂತರ ಕಾರ್ಯಾಚರಣೆಯಿಂದ ಉಕ್ಕಲಗೆರೆ ಮಲ್ಲಪ್ಪನಬೆಟ್ಟ ಹಾಗೂ ಮತ್ತತ್ತಿ ಗ್ರಾಮದಲ್ಲಿ 2 ಚಿರತೆಗಳನ್ನು ಸೆರೆ ಹಿಡಿಯಲಾಗಿತ್ತು. ಇನ್ನೇನು ಚಿರತೆ ಹಾವಳಿಯಿಂದ ಮುಕ್ತರಾಗಿದ್ದೇವೆ ಎಂದು ತಾಲೂಕಿನ ಗ್ರಾಮಸ್ಥರು ನಿಟ್ಟುಸಿರು ಬಿಡುತ್ತಿದ್ದಂತೆ ಇಂದು ನಡೆದ ಘಟನೆಯಿಂದ ಮತ್ತೆ ಭೀತಿ ಎದುರಾಗಿದೆ. ಈ ಹಿಂದೆ ಮಲ್ಲಪ್ಪನ ಬೆಟ್ಟದಲ್ಲಿ 8 ವರ್ಷದ ಚಿರತೆ ಸೆರೆ ಹಿಡಿಯಲಾಗಿತ್ತು. ಆ ಚಿರತೆ ಅದೇ ಸ್ಥಳದಲ್ಲಿ ಸೆರೆ ಸಿಕ್ಕಿತಾ ಅಥವಾ ಜನರ ಕಣ್ಣೊರೆಸಲು ಅರಣ್ಯ ಇಲಾಖೆ ಬೇರೆಡೆಯಿಂದ ಚಿರತೆ ತಂದು ನಾಟಕವಾಡಿತಾ ಎಂದು ಗ್ರಾಮಸ್ಥರು ಹಾಗೂ ತಾಲೂಕಿನ ಸಾರ್ವಜನಿಕರು ಅನುಮಾನ ವ್ಯಕ್ತಪಡಿಸಿದ್ದಾರೆ.

ಚಿರತೆ ದಾಳಿಗೆ ಮೂರನೇ ಬಲಿಯಾಗಿದ್ದು, ಅ.30ರಂದು ಎಂ.ಎಲ್.ಹುಂಡಿ ಗ್ರಾಮದ ಮಲ್ಲಿಕಾರ್ಜುನ, ಡಿ.1ರಂದು ಎಂ.ಕೆಬ್ಬೆಹುಂಡಿಯ ಮೇಘನಾರನ್ನು ಚಿರತೆ ಬಲಿ ಪಡೆದಿತ್ತು. ಈಗ ಮತ್ತೆ ಚಿರತೆ ದಾಳಿಗೆ ಮತ್ತೊಂದು ಬಲಿಯಾಗಿರುವುದು ಜನರಲ್ಲಿ ಮತ್ತಷ್ಟು ಆತಂಕ ಹೆಚ್ಚಿಸಿದೆ. ಚಿರತೆ ದಾಳಿಗೆ ಎರಡು ಬಲಿಯಾದ ನಂತರ ಅರಣ್ಯ ಇಲಾಖೆ 10 ನುರಿತ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಿ, ತಾಲೂಕಿನ ಮುತ್ತತ್ತಿ ಗ್ರಾಮದಲ್ಲಿ 3 ವರ್ಷದ ಗಂಡು ಚಿರತೆ ಮತ್ತು ಉಕ್ಕಲಗೆರೆಯ ಮಲ್ಲಪ್ಪ ಬೆಟ್ಟದಲ್ಲಿ 8 ವರ್ಷದ ಗಂಡು ಚಿರತೆ ಸೆರೆ ಹಿಡಿಯಲಾಗಿತ್ತು. ಎರಡು ಚಿರತೆಗಳ ಸೆರೆಯಿಂದ ತಾಲೂಕಿನ ಜನತೆ ನೆಮ್ಮದಿ ನಿಟ್ಟುಸಿರು ಬಿಟ್ಟಿದ್ದರು. ಆದರೆ, ಈಗ ಮತ್ತೆ ಚಿರತೆಗೆ ವೃದ್ಧೆ ಬಲಿಯಾಗಿರುವುದರಿಂದ ಜನರಲ್ಲಿ ಆತಂಕ ಹೆಚ್ಚಿದೆ.

ಬಿಜೆಪಿ ರಾಜ್ಯಾದ್ಯಂತ 'ರಥಯಾತ್ರೆ'

ಯಾವ ದಿನಾಂಕದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂಬುದರ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ. ಒಂದಲ್ಲ ಒಂದು ರೀತಿ ಜನರನ್ನು ಸಂಪರ್ಕಿಸಲೇಬೇಕು. ಮಂಡಲ, ತಾಲೂಕು ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಎಲ್ಲಾ ಮೋರ್ಚಾಗಳ ಸಮಾವೇಶಗಳನ್ನು ಜಿಲ್ಲಾ ಮಟ್ಟದಲ್ಲಿ ಮಾಡ ಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಿಎಂ ತಿಳಿಸಿದರು. 'ವಿಜಯ ಸಂಕಲ್ಪ' ಅಭಿಯಾನ ನಾಳೆ (ಜ. 21)ಯಿಂದ ಆರಂಭವಾಗಲಿದೆ. ವಿಜಯಪುರ ಜಿಲ್ಲೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ನಾನು (ಸಿಎಂ) ಒಂದು ಕಡೆ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಕೇಂದ್ರ ಹಾಗೂ ರಾಜ್ಯ ಸಚಿವರು ಬೇರೆ ಬೇರೆ ಸ್ಥಳಗಳಲ್ಲಿ 'ವಿಜಯಸಂಕಲ್ಪ' ಅಭಿಯಾನಕ್ಕೆ ಚಾಲನೆ ನೀಡಲಿದ್ದು, ಕೇಂದ್ರ-ರಾಜ್ಯ ಸರ್ಕಾರಗಳ ಕೊಡುಗೆಗಳು, ಯೋಜನೆಗಳ ಕುರಿತು ಕರಪತ್ರ ಹಂಚಿಕೆ ಸೇರಿ ವಿವಿಧ ಪ್ರಚಾರ ತಂತ್ರಗಳು ಅಭಿಯಾನದಲ್ಲಿ ಅನುಷ್ಠಾನಕ್ಕೆ ಬರಲಿವೆ ಎಂದು ಅವರು ಹೇಳಿದರು. ಮುಂದಿನ 2 ತಿಂಗಳು ವಿಧಾನಮಂಡಲ ಅಧಿವೇಶನದ ಜೊತೆಗೆ ರಾಜಕೀಯ, ಸಂಘಟನಾತ್ಮಕ ಚಟುವಟಿಕೆಗಳ ರೂಪುರೇಷಗಳ ಬಗ್ಗೆ ಚರ್ಚಿಸಿದ್ದು, ಹಿರಿಯರ ಸಮಕ್ಷಮದಲ್ಲಿ ಮತ್ತೊಂದು ಸುತ್ತಿನ ಸಭೆಯಲ್ಲಿ ಎಲ್ಲವೂ ಫೈನಲ್ ಆಗಲಿದೆ ಎಂದ ಅವರು, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಈ ಸಭೆಗೆ ಆಹ್ವಾನಿಸದೆ ಇರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಾವು ಸಭೆಯಲ್ಲಿ ಕೈಗೊಳ್ಳುವ ತೀರ್ಮಾನಗಳನ್ನು ಯಡಿಯೂರಪ್ಪ ಅವರ ಮುಂದಿಟ್ಟು ಅಂತಿಮಗೊಳಿಸುತ್ತೇವೆ ಎಂದರು.

ಮೂರು ದಿನಗಳ ವರ್ಣರಂಜಿತ ಕಾವಾ ಮೇಳಕ್ಕೆ ಚಾಲನೆ

● ಕಾವಾ ಕಲಾ, ಪೇಂಟಿಂಗ್ ವಿಭಾಗದ ಕಟ್ಟಡ ಲೋಕಾರ್ಪಣೆ ● ವಿದ್ಯಾರ್ಥಿಗಳ ನಾನಾ ಕಲಾ ಪ್ರೌಢಿಮೆ ಪ್ರತಿಭೆ ಅನಾವರಣಗೊಳಿಸಿದ ಮೇಳ





ಮೈಸೂರು,ಜ.20(ಎಂಟಿವೈ)- ಮೈಸೂರಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು(ಕಾವಾ) ಆವರಣದಲ್ಲಿ ಕಾವಾ ಮೇಳದ ಸಂಭ್ರಮ ಮನೆ ಮಾಡಿತ್ತು. ವಿವಿಧ ವಿಭಾಗಗಳ ವಿದ್ಯಾರ್ಥಿಗಳು ರಚಿಸಿದ ಕಲಾಕೃತಿಗಳ ಪ್ರದರ್ಶನ ಮನಸೂರೆಗೊಂಡವು.

ಈ ವರ್ಷವೂ ಕಾವಾದ ಚಿತ್ರಕಲೆ, ಶಿಲ್ಪಕಲೆ, ಮುದ್ರಣಕಲೆ, ಅನ್ವಯ ಕಲೆ, ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ರಚಿಸಿ, ಚಿತ್ರಿಸಿ ಹಾಗೂ ಕೆತ್ತನೆ ಮಾಡಿರುವ ಕಲಾ ಕೃತಿಗಳನ್ನು ಪ್ರದರ್ಶಿಸಿ ಕಾವಾ ಮೇಳಕ್ಕೆ ಮೆರುಗು ತುಂಬಿದರು. ಅಲ್ಲದೆ, ವೈಟ್‌ಹೌಸ್ ಪರಿಕಲ್ಪನೆಯ ಕೊಠಡಿ ನಿರ್ಮಿಸಿ, ನಾನಾ ಬಣ್ಣಗಳ ಬಿಳಿ ಬಣ್ಣದ ಹಿಮ್ಮೇಳದಲ್ಲಿ ಯಾವ ರೀತಿ ಗೋಚರಿಸುತ್ತದೆ ಎಂಬ ವಿಭಿನ್ನ ಆಲೋಚನೆ ಮೂಲಕ ನೋಡುಗರ ಪ್ರಶಂಸೆಗೆ ಪಾತ್ರರಾದರು.

ಮಿತಿ ಮೀರಿದ ಪ್ಲಾಸ್ಟಿಕ್ ಬಳಕೆಯಿಂದ ಮಾನವನ ದೇಹ ಹೊಕ್ಕುತ್ತಿರುವ ಪ್ಲಾಸ್ಟಿಕ್ ಎಂಬ ಪೆಡಂಭೂತದ ಬಳಕೆ ನಿಷೇಧಕ್ಕೆ ಸಂಬಂಧಿಸಿದಂತೆ ಪ್ಲಾಸ್ಟಿಕ್ ಪೇಪರ್‌ನಿಂದ ಮಾಡಿರುವ ಆಕೃತಿ ಪ್ರದರ್ಶಿಸಿ ಸಂದೇಶ ಸಾರುತ್ತಿದ್ದಾರೆ. ಇದರೊಂದಿಗೆ ಗಿಡ-ಮರಗಳ ಹನನ, ಭ್ರೂಣ ಹತ್ಯೆಯ ಬಗ್ಗೆಯೂ ಜನರ ಕಣ್ತೆರೆಸುವ ಪ್ರಯತ್ನ ಮಾಡಿದ್ದಾರೆ. ಕಟ್ಟಡದ ಮುಂಭಾಗದ ಗಿಡವೊಂದಕ್ಕೆ ಸೀರೆ ಉಡಿಸಿ, ಅದರ ಕಾಂಡವನ್ನು ಹೊಟ್ಟೆಯಂತೆ ಮಾಡಿ, ಭ್ರೂಣ, ಗರ್ಭಕೋಶದ ಚಿತ್ರ ಬರೆದು ಜಾಗೃತಿ ಮೂಡಿಸುವ ಪ್ರಯತ್ನ ನೋಡುಗರನ್ನು ಮೂಕ ವಿಸ್ಮಿತರನ್ನಾಗಿಸುತ್ತಿದೆ. ಒಟ್ಟಾರೆ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ವಿಭಿನ್ನವಾಗಿ ಚಿತ್ರ, ಕಲಾಕೃತಿ ಸೇರಿದಂತೆ ವಿವಿಧ ಕಲೆ ಪ್ರದರ್ಶಿಸಿದ್ದಾರೆ.

ಮೇಳಕ್ಕೆ ಚಾಲನೆ: ಸಿದ್ಧಾರ್ಥನಗರದ ಹೊಸ ಜಿಲ್ಲಾಧಿಕಾರಿ ಕಚೇರಿ ಹಿಂಭಾಗವಿರುವ ಕಾವಾ ಕಾಲೇಜಿನ ಆವರಣದಲ್ಲಿ ನೂತನ ಎರಡು ಕಟ್ಟಡ ಹಾಗೂ 'ಕಾವಾ ಮೇಳ-2023'ವನ್ನು ಶುಕ್ರವಾರ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಸಚಿವರು, ಕಾವಾ ಚಟುವಟಿಕೆಗಳನ್ನು ವಿಸ್ತರಿಸಬೇಕು. ಮೈಸೂರು ಅರಸರ ಕಾಲದಿಂದಲೂ ಕಾವಾ ಕಲೆ ಕುರಿತು ಶಿಕ್ಷಣ ನೀಡುತ್ತಾ ಬಂದಿದೆ. ಈ ಸಂಸ್ಥೆಯಲ್ಲಿ ಕಲಿತಿರುವ ನೂರಾರು ವಿದ್ಯಾರ್ಥಿಗಳು ಬೇರೆ ಬೇರೆ ಕ್ಷೇತ್ರ ಮತ್ತು ಆಯಾಮಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ದೃಶ್ಯಕಲೆ ಎಂಬುದು ಪ್ರಮುಖವಾದ ಚಟುವಟಿಕೆ. ಈ ಕಲೆಯನ್ನು ಇನ್ನಷ್ಟು ಪರಿಣಾಮಕಾರಿಗಾಗಿ ವಿಸ್ತರಿಸುವುದಕ್ಕಾಗಿ ಆಸಕ್ತಿ ಇದೆ. ಕಾವಾದಲ್ಲಿ 230 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು, ಸ್ಥಳಾವಕಾಶದ ಕೊರತೆ ಇತ್ತು. ಆ ಸಮಸ್ಯೆಯನ್ನು ಹೊಸ ಕಟ್ಟಡಗಳು ನೀಗುತ್ತವೆ ಎಂದರು.

ಸರ್ಕಾರ ಕನ್ನಡ ಭಾಷೆ, ಸಂಸ್ಕೃತಿ, ಚಿತ್ರಕಲೆಯನ್ನು ವಿಸ್ತರಿಸಬೇಕೆಂಬ ಆಶಯ ಹೊಂದಿದೆ. ಹಲವು ಕೊರತೆಯ ನಡುವೆಯೂ ಕಾವಾ ಅಭಿವೃದ್ಧಿಪಡಿಸಲಾಗುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಿಂದ ಕಾವಾದ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಪಡೆದಿದ್ದೇನೆ. ಸಣ್ಣ ಪುಟ್ಟ ಗೊಂದಲ ಇರುವುದು ಗಮನಕ್ಕೆ ಬಂದಿದೆ. ಅಲ್ಲದೆ, ಕೆಲವು ವಿಷಯಗಳಿಗೆ ತಾಂತ್ರಿಕ ಸಮಸ್ಯೆ ಇರುವುದು ಕಂಡು ಬಂದಿದೆ. ಕಾವಾ ಸಂಸ್ಥೆಗೆ ಹೆಚ್ಚಿನ ಅನುದಾನ ಕೊಡಬೇಕು. ಹೆಚ್ಚುವರಿ ಹುದ್ದೆಗಳ ಸೃಷ್ಟಿ ಹಾಗೂ ಖಾಲಿ ಹುದ್ದೆ ನಿಯೋಜನೆಗೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಸರ್ಕಾರ ಬಜೆಟ್‌ನಲ್ಲಿ ಈ ಬಾರಿ ಕಾವಾಗೆ ಹೆಚ್ಚಿನ ಅನುದಾನ ಘೋಷಣೆ ಮಾಡಲಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಅಭಿವೃದ್ಧಿ ಎಂದರೆ ಕೇವಲ ರಸ್ತೆಗಳು, ಕಟ್ಟಡಗಳಿಗೆ ಸೀಮಿತವಾಗದೇ ಸಾಂಸ್ಕೃತಿಕವಾಗಿಯೂ ಅಭಿವೃದ್ಧಿ ಮಾಡುತ್ತಾ ಬಂದಿದೆ. ಸಾಂಸ್ಕೃತಿಕ ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಹತ್ತಾರು ಭಾಷೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗೆ ಉತ್ತೇಜನ ಕೊಡುತ್ತಾ ಬಂದಿದೆ. ಕಾವಾ ವಿದ್ಯಾರ್ಥಿಗಳು ಕಲ್ಪನೆ ಅದ್ಭುತವಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ನಶಿಸಿ ಹೋಗುತ್ತಿರುವ ಸಂಸ್ಕೃತಿ ಅಭಿಯಾನವನ್ನು ಮುಂದಿನ ತಿಂಗಳಿಂದ ಆರಂಭಿಸಲು ಉದ್ದೇಶಿಸಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಶಾಸಕ ತನ್ವೀರ್ ಸೇಠ್ ಮಾತನಾಡಿ, ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ(ಕಾವಾ) ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿದ್ದರೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಕಾವಾದಲ್ಲಿ 230 ವಿದ್ಯಾರ್ಥಿಗಳಿದ್ದರೂ ಕೇವಲ 5 ಮಂದಿ ಸಿಬ್ಬಂದಿ ಇದ್ದಾರೆ. ಕ್ರೀಡೆ ಹಾಗೂ ಕಲಾ ಕ್ಷೇತ್ರವನ್ನು ಕಡೆಗಣಿಸಿದರೆ, ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಕ್ರೀಡೆ ಮತ್ತು ಕಲೆ ಸಮಾಜವನ್ನು ಒಂದುಗೂಡಿಸುತ್ತದೆ. ಹಾಗಾಗಿ ಈ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವವರ ಅಗತ್ಯವಿದೆ. ಇನ್ನಾದರು ಕಾವಾಗೆ ಬೋಧಕ ಸಿಬ್ಬಂದಿಗಳನ್ನು ನಿಯೋಜಿಸಬೇಕು ಎಂದು ಸಲಹೆ ನೀಡಿದರು.

ಮಕ್ಕಳಿಗೆ ಕಲಾ ಸ್ಪರ್ಧೆ: ಜ.22ರಂದು 1ರಿಂದ 12ನೇ ತರಗತಿ ಮಕ್ಕಳಿಗೆ ಸ್ಥಳದಲ್ಲೇ ಚಿತ್ರರಚನೆ ಮತ್ತು ಮಣ್ಣಿನ ಶಿಲ್ಪ ರಚನಾ ಸ್ಪರ್ಧೆ ಆಯೋಜಿಸಲಾಗಿದೆ. 1ರಿಂದ 4ನೇ ತರಗತಿ, 5ರಿಂದ 8 ಮತ್ತು 9ರಿಂದ 12ನೇ ತರಗತಿವರೆಗೆ ಮೂರು ವಿಭಾಗಗಳಲ್ಲಿ ಈ ಎರಡು ಪ್ರಕಾರದ ಸ್ಪರ್ಧೆಗಳು ನಡೆಯಲಿವೆ. ಮೂರು ವಿಭಾಗಗಳಲ್ಲಿಯೂ ಸಮಾನವಾಗಿ ಐದು ಬಹುಮಾನ ನೀಡಲಾಗುವುದು. ಅಲ್ಲದೆ, ಭಾಗವಹಿಸಿದ ಪ್ರತಿಯೊಬ್ಬರಿಗೂ ಪ್ರಮಾಣ ಪತ್ರ ನೀಡಲಾಗುವುದು. ಸ್ಪರ್ಧೆಗಳು ಅಂದು ಬೆಳಗ್ಗೆ 10ರಿಂದ ನಡೆಯಲಿದ್ದು, ಅದಕ್ಕೂ ಮುನ್ನ ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳಬಹುದು. ಸಾರ್ವಜನಿಕರು ಪ್ರದರ್ಶನ ವೀಕ್ಷಣೆಗೆ ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತವಾಗಿ ಭೇಟಿ ನೀಡಬಹುದಾಗಿದೆ.

ಕಾರ್ಯಕ್ರಮದಲ್ಲಿ ಕಾವಾ ಡೀನ್ ಎ.ದೇವರಾಜು, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.


ಚಾಮುಂಡಿಬೆಟ್ಟದಲ್ಲಿ ದೇವೇಗೌಡರಿಂದ ಚಂಡಿಕಾ ಹೋಮ



ಮೈಸೂರು,ಜ.20(ಎಂಟಿವೈ)- ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರು ತಮ್ಮ ಪತ್ನಿ ಶ್ರೀಮತಿ ಚನ್ನಮ್ಮ ಅವರೊಂದಿಗೆ ಚಾಮುಂಡಿಬೆಟ್ಟದಲ್ಲಿ ಚಂಡಿಕಾ ಹೋಮದಲ್ಲಿ ಪಾಲ್ಗೊಂಡಿದ್ದರು.

ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನಾಡದೇವಿಯ ಮೊರೆಹೋಗಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಶುಕ್ರವಾರ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಬೆಟ್ಟದ ದೇವಾಲಯದಲ್ಲೇ ರುದ್ರಾಕ್ಷಿ ಮಂಟಪದ ಬಳಿಯಿರುವ ಹೋಮ ಕುಂಡದಲ್ಲಿ ಚಂಡಿಕಾ ಹೋಮದಲ್ಲಿ ಪಾಲ್ಗೊಂಡರು. ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಅವರ ನೇತೃತ್ವದಲ್ಲಿ ನಡೆದ ಹೋಮ ಹಾಗೂ ವಿವಿಧ ಯಜ್ಞದಲ್ಲಿ ದೇವೇಗೌಡ ದಂಪತಿ ಪಾಲ್ಗೊಂಡು ಪೂರ್ಣಾಹುತಿ ನೆರವೇರಿಸಿದರು.

ಮಹಾ ದೈವಭಕ್ತರಾಗಿರುವ ಹೆಚ್.ಡಿ.ದೇವೇಗೌಡರು ಪ್ರತಿವರ್ಷವೂ ಚಾಮುಂಡಿಬೆಟ್ಟದಲ್ಲಿ ಚಂಡಿಕಾ ಹೋಮ ನಡೆಸುವ ಪರಿಪಾಠ ಹೊಂದಿದ್ದಾರೆ. ಈ ವೇಳೆ ಶಾಸಕರಾದ ಸಾ.ರಾ. ಮಹೇಶ್, ಕೆ.ಮಹದೇವ್, ಮಾಜಿ ಮೇಯರ್ ರವಿಕುಮಾರ್, ಮುಖಂಡ ದ್ವಾರಕೀಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.



ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಮಂಜುನಾಥ ಬುದ್ದಿ ಅವರ ಜನ್ಮ ದಿನವನ್ನು ಮಾಲಂಗಿ ಸುರೇಶ್, ನಗರ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಆಚರಿಸಲಾಯಿತು. ಈ ವೇಳೆ ಪ್ರಶಾಂತ್ ಆರ್ಯ, ನಾಗೇಶ್, ಮಂಜು, ನಾಣಿ ಹಾಗೂ ಇತರರು ಹಾಜರಿದ್ದರು.

ಸೇವಾ ಕಾರ್ಯಗಳೊಂದಿಗೆ ಕರೀಗೌಡ ಹುಟ್ಟುಹಬ್ಬ ಆಚರಣೆ



ಮೈಸೂರು, ಜ.20- ಇಲವಾಲ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹಳೇಕಾಮನ ಕೊಪ್ಪಲು ಕರೀಗೌಡರ ಹುಟ್ಟುಹಬ್ಬವನ್ನು ಸೇವಾ ಕಾರ್ಯಕ್ರಮದೊಂದಿಗೆ ಆಚರಿಸಲಾಯಿತು.

ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಇಲವಾಲದಲ್ಲಿರುವ ಮನೋಜ್ ಅಂಗವಿಕಲರ ಹಾಗೂ ವಯೋವೃದ್ಧರ ವೃದ್ಧಾಶ್ರಮದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ನಂತರ ಸಂಜೆ ಹಳೆಕಾಮನ ಕೊಪ್ಪಲು ಗೇಟ್ ಬಳಿ ನಡೆದ ಅಭಿನಂದನಾ ಸಮಾರಂಭದಲ್ಲಿ ಜಿ.ಪಂ. ಮಾಜಿ ಅಧ್ಯಕ್ಷ ಕೆ. ಮರೀಗೌಡರ ಸಮ್ಮುಖದಲ್ಲಿ ಕೇಕ್ ಕತ್ತರಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕೆ. ಮರೀಗೌಡರು ಮಾತನಾಡಿ ಕರೀಗೌಡರು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಈ ಭಾಗದಲ್ಲಿ ಯುವ ನಾಯಕರಾಗಿ ಬೆಳೆಯುತ್ತಿದ್ದಾರೆ. ಅವರಿಗೆ ಚಾಮುಂಡೇಶ್ವರಿ ತಾಯಿ ಒಳ್ಳೆಯದು ಮಾಡಲಿ ಎಂದರು.

ಸಮಾರಂಭದಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ, ಜಿ.ಪಂ. ಮಾಜಿ ಸದಸ್ಯರಾದ ಬೀರಿಹುಂಡಿ ಬಸವಣ್ಣ, ಅರುಣ್‌ಕುಮಾರ್, ಮಾದೇಗೌಡ, ಡಾ॥ ಪ್ರಕಾಶ್, ಕೆಂಪನಾಯ್ಕ, ತಾ.ಪಂ. ಮಾಜಿ ಸದಸ್ಯರಾದ ಕೆಂಚಪ್ಪ, ಸಿ.ಎಂ. ಸಿದ್ದರಾಮೇಗೌಡ, ಮಲ್ಲಿಗೆರೆ ಯಶವಂತ್, ನಾಗವಾಲ ನರೇಂದ್ರ, ವೈ.ಸಿ. ಸ್ವಾಮಿ, ಮೈದನಹಳ್ಳಿ ಶಿವಣ್ಣ, ಪಾಷಾ, ರಾಘವೇಂದ್ರ, ಹಿನಕಲ್ ಹೊನ್ನಪ್ಪ, ಗಡ್ಡಬಸಪ್ಪ, ಕರಕನಹಳ್ಳಿ ಮಂಜು, ಕಡಕೊಳ ಶಿವಲಿಂಗ, ಯಶವಂತ್, ಬಸಪ್ಪಾಜಿ, ರವಿ, ರಮೇಶ್, ಕುಮಾರ್, ನಾಗೇಶ್, ಯೋಗೇಶ್, ಮಂಜು ನೂರಾರು ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮ ಆಚರಿಸಿದರು.

ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜ.20- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2022-23ನೇ ಸಾಲಿನಲ್ಲಿ ನಶಿಸಿ ಹೋಗುತ್ತಿರುವ ತಳಸಮುದಾಯದ ವಿಶಿಷ್ಟ ಕಲೆಗಳನ್ನು ಉಳಿಸಿ ಮುನ್ನೆಲೆಗೆ ತರಲು "ಮೂಲ ಸಂಸ್ಕೃತಿ- ಕನ್ನಡ ಸಂಸ್ಕೃತಿ" ಶೀರ್ಷಿಕೆಯಡಿ ವಿವಿಧ ಐದು ಕಲಾಪ್ರಕಾರಗಳ 20 ದಿನಗಳ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಅರ್ಜಿ ಸಲ್ಲಿಸುವವರು ಗರಿಷ್ಟ 30 ವರ್ಷ ವಯೋಮಾನದ ಒಳಗಿರಬೇಕು. ಅರ್ಜಿಗಳನ್ನು ಜ.21ರ ಸಂಜೆ 5.30 ರೊಳಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಾಮಂದಿರ ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಚೇರಿ ದೂ.ಸಂ:0821-2513225 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ 'ಬಿಜೆಪಿ ನಿಜ ಕನಸುಗಳು' ಕರಪತ್ರ ಬಿಡುಗಡೆ

ಬಿಜೆಪಿಯ ಆಡಳಿತ ವಿಫಲತೆಯನ್ನು ಎತ್ತಿ ತೋರಿಸುವ ಯತ್ನ



ಮೈಸೂರು, ಜ.20(ಆರ್‌ಕೆಬಿ)- ಅನ್ನದಾತರಿಗೆ ವಿಷ ಉಣಿಸಿದ ಶೇ.40 ಸರ್ಕಾರ, ಕರ್ನಾಟಕವನ್ನು ನಾಶ ಮಾಡುತ್ತಿದೆ ಶೇ.40ರ ಸರ್ಕಾರ, ಕರ್ನಾಟಕದ ಜನರ ಬದುಕು ಜಟಕಾ ಬಂಡಿಯಾಗಿದೆ, ಅಬಲೆಯಾದ ಮಹಿಳೆಯರು, ತಬ್ಬಲಿಯಾದ ಮಕ್ಕಳು, ಸಾಮಾಜಿಕ ನ್ಯಾಯದ ವಿರೋಧಿ ಬಿಜೆಪಿ, ಕರಾಳ ಭವಿಷ್ಯದತ್ತ ಯುವ ಜನತೆ... ಇಂತಹ ಹಲವು ವಿಚಾರಗಳನ್ನು ಒಳಗೊಂಡ 'ಬಿಜೆಪಿಯ ನಿಜ ಕನಸುಗಳು' ಕರಪತ್ರವನ್ನು ಕಾಂಗ್ರೆಸ್ ಭವನದಲ್ಲಿ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಲಕ್ಷ್ಮಣ್, ಬಿಜೆಪಿಯು ರೈತ ವಿರೋಧಿ ಕಾನೂನುಗಳಾದ ಎಪಿಎಂಸಿ ಕಾಯ್ದೆ, ಅಗತ್ಯ ವಸ್ತುಗಳ ಕಾಯ್ದೆ, ಗುತ್ತಿಗೆ ಕೃಷಿ ಕಾಯ್ದೆ, ಭೂ ಸುಧಾರಣಾ ಕಾಯ್ದೆಗಳ ಮೂಲಕ ತಿದ್ದುಪಡಿಯನ್ನು ಇನ್ನು ಹಿಂಪಡೆದಿಲ್ಲ. ರೈತರ ಆತ್ಮಹತ್ಯೆಯಲ್ಲಿ ಕರ್ನಾಟಕ ದೇಶಕ್ಕೆ 2ನೇ ಸ್ಥಾನಕ್ಕೇರಿದೆ. ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ, ಸರ್ಕಾರದಿಂದ ಬೆಂಬಲ ಬೆಲೆ ಸಿಗದೇ ರೈತರಿಗೆ 13,408 ಕೋಟಿ ನಷ್ಟವಾಗಿದೆ. ರಸಗೊಬ್ಬರ ಬೆಲೆ ಶೇ.58ಕ್ಕೆ ಏರಿಕೆಯಾಗಿ ಲಕ್ಷಾಂತರ ರೈತರು ತತ್ತರಿಸಿ ಹೋಗಿದ್ದಾರೆ. ಗೋಹತ್ಯೆ ನಿಷೇಧದಿಂದ ರೈತರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಸರ್ಕಾರದ ಗೋ ಶಾಲೆಗಳು ಸಂಪೂರ್ಣವಾಗಿ ವಿಫಲವಾಗಿವೆ. ಸರ್ಕಾರದ ಅಸಡ್ಡೆಯಿಂದ ಚರ್ಮಗಂಟು ರೋಗಕ್ಕೆ ಸುಮಾರು 2 ಲಕ್ಷ ಗೋವುಗಳು ಸಾವನ್ನಪ್ಪಿವೆ. ತೊಗರಿ, ರಾಗಿ, ಭತ್ತ, ಅಡಿಕೆ, ತೆಂಗು, ಹತ್ತಿ, ಜೋಳ ಹೀಗೆ ಹಲವು ಬೆಳೆಗಳು ರೋಗಕ್ಕೆ ತುತ್ತಾಗಿದ್ದು, ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರ ಎಳ್ಳಷ್ಟೂ ಸಹಾಯ ಮಾಡಿಲ್ಲ ಎಂದು ವಿವರಿಸಿದರು.

ಬಿಜೆಪಿ ಸರ್ಕಾರದ ಶೇ.40 ಕಮಿಷನ್ ಕಿರುಕುಳಕ್ಕೆ ಗುತ್ತಿಗೆದಾರರ ಸಂಘ, ಖಾಸಗಿ ಶಾಲೆಗಳ ಸಂಘ ಪ್ರಧಾನಿಗಳಿಗೆ ಪತ್ರ ಬರೆದಿದೆ. ಗುತ್ತಿಗೆದಾರ ಸಂತೋಷ್ ಪಾಟೀಲ್ ಶೇ.40 ಕಮಿಷನ್ ಕಿರುಕುಳಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದು, ಮತ್ತು ಹಲವಾರು ಗುತ್ತಿಗೆದಾರರು ದಯಾ ಮರಣಕ್ಕಾಗಿ ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ. ಪ್ರತಿ ಕೆಲಸಕ್ಕೂ ಶೇ.50 ಕಮಿಷನ್ ಬೇಡಿಕೆಯಿಡುವ ಬಿಬಿಎಂಪಿ ಈಗ ಭಯಾನಕ ಭ್ರಷ್ಟಾಚಾರದಲ್ಲಿ ಮುಳುಗಿರುವ ಪಾಲಿಕೆಯಾಗಿದೆ. ರಾತ್ರೋರಾತ್ರಿ 3,400 ಕೋಟಿಗಳ ಟೆಂಡರ್ ಹಂಚಿಕೆ ಮಾಡಿ, ತ್ಯಾಜ್ಯ ವಿಲೇವಾರಿಯಲ್ಲಿ 1 ಸಾವಿರ ಕೋಟಿ ಭ್ರಷ್ಟಾಚಾರ ಮಾಡಿರುವ ಸರ್ಕಾರ, ಮಠಾಧೀಶರನ್ನೂ ಬಿಡದೆ ಶೇ.30 ಕಮಿಷನ್ ಕೊಡುವಂತೆ ಕಿರುಕುಳ ನೀಡಿದೆ. ಸ್ವ ಪಕ್ಷೀಯರಿಂದಲೇ ಸಿಎಂ ಬೊಮ್ಮಾಯಿ ಮೇಲೆ ಭ್ರಷ್ಟಾಚಾರದ ಆರೋಪ, ಅಭಿವೃದ್ಧಿಯ ಹಣವನ್ನು ಕೊಳ್ಳೆ ಹೊಡೆಯುತ್ತಿದೆ ಶೇ.40ರ ಸರ್ಕಾರ ಎಂದು ದೂರಿದರು.

ಬಿಜೆಪಿ ದುರಾಡಳಿತದಿಂದ ಗಾರ್ಡನ್ ಸಿಟಿ ಗಲೀಜ್ ಸಿಟಿಯಾಗಿದೆ. ಐಟಿ ಸಿಟಿ ಲೂಟಿಯಾಗಿದೆ. ವ್ಯಾಪಕ ಭ್ರಷ್ಟಾಚಾರದ ಕಾರಣ ಇಡೀ ರಾಜ್ಯದಲ್ಲಿ ರಸ್ತೆ ಗುಂಡಿಗಳಿಗೆ ನೂರಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ ಒಂದು ಲಕ್ಷಕ್ಕೂ ಅಧಿಕ ರಸ್ತೆ ಗುಂಡಿಗಳು ಬಾಯಿ ತೆರೆದಿದ್ದು, ಮುಚ್ಚಲು ಕಮಿಷನ್‌ಗಾಗಿ ಕಾಯುತ್ತಿದೆ. ದಿನಕ್ಕೆ 2ರಿಂದ 3 ಕೊಲೆಗಳು ಸಂಭವಿಸುತ್ತಿವೆ. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಸುಮಾರು 10 ಸಾವಿರ ರೌಡಿ ಶೀಟರ್‌ಗಳು ಹೆಚ್ಚುವರಿಯಾಗಿ ಸೇರ್ಪಡೆಯಾಗಿದ್ದಾರೆ. ಬಿಜೆಪಿ ವಿರುದ್ಧವಿರುವ ಮತದಾರರನ್ನು ಪಟ್ಟಿಯಿಂದ ತೆಗೆಯಲಾಗುತ್ತಿದೆ. ಮಾಹಿತಿ ಕದಿಯಲಾಗುತ್ತಿದೆ ಎಂದರು.

ರಾಜ್ಯದಲ್ಲಿ ನಿರ್ಭಯಾ ನಿಧಿಯ ಶೆ.90 ಹಣ ಬಳಕೆಯೇ ಆಗಿಲ್ಲ. ಕಾಣೆಯಾದ ಮಹಿಳೆಯರ ಪ್ರಕರಣಗಳ ಸಂಖ್ಯೆ ಶೆ.48ಕ್ಕೆ ಹೆಚ್ಚಳವಾಗಿದೆ. ಮಕ್ಕಳ ಮೇಲಿನ ಅಪರಾಧ ಶೇ.18ಕ್ಕೆ ಹೆಚ್ಚಳವಾಗಿದೆ. ಬಾಲ್ಯ ವಿವಾಹ ಪ್ರಕರಣಗಳು ಶೇ.300ರಷ್ಟು ಏರಿಕೆಯಾಗಿವೆ. ಹಾಲು, ಮೊಸರು, ಎಲ್‌ಪಿಜಿ ಸಿಲಿಂಡರ್ ಬೆಲೆಗಳು ಗಗನಕ್ಕೇರಿದ್ದು, ಗೃಹಿಣಿಯರು ತತ್ತರಿಸಿಹೋಗಿದ್ದಾರೆ ಎಂದರು.

ಎಸ್‌ಸಿ ಮೀಸಲಾತಿಯನ್ನು ಶೇ.15ರಿಂದ 17 ಮತ್ತು ಎಸ್‌ಟಿ ಮೀಸಲಾತಿಯನ್ನು ಶೆ.3ರಿಂದ 7ಕ್ಕೆ ಏರಿಕೆ ಮಾಡಿದ್ದೇವೆಂದು ಸುಳ್ಳು ಹೇಳುತ್ತಿರುವ ಬಿಜೆಪಿ, ಕೇಂದ್ರ ಸರ್ಕಾರದ ಮೂಲಕ 9ನೇ ಶೆಡ್ಯೂಲ್‌ಗೆ ಸೇರ್ಪಡೆ ಮಾಡಿಸುತ್ತಿಲ್ಲ ಏಕೆ ಎಂದು ಪ್ರಶ್ನಿಸಿದರು.

ಕೆಪಿಎಸ್‌ಸಿ, ಕೆಇಎ, ಕೆಎಸ್‌ಆರ್‌ಪಿ ಸೇರಿ ಎಲ್ಲಾ ಸರ್ಕಾರಿ ಪ್ರಾಧಿಕಾರಗಳ ನೇಮಕಾತಿಯಲ್ಲಿ ಲಂಚವಿಲ್ಲದೆ ಕೆಲಸವಿಲ್ಲ. ಹಣದ ದುರಾಸೆಗೆ ಶೇ. 40 ಸರ್ಕಾರ 2.52 ಲಕ್ಷ ಸರ್ಕಾರಿ ಹುದ್ದೆಗಳನ್ನು ಖಾಲಿ ಉಳಿಸಿಕೊಂಡಿದೆ. ಬಿಜೆಪಿ ಆಡಳಿತದಲ್ಲಿ ನಿರುದ್ಯೋಗ ಹೆಚ್ಚಾಗಿದ್ದು, 1,129ಕ್ಕೂ ಹೆಚ್ಚು ನಿರುದ್ಯೋಗಿ ಯುವಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಪಿಎಸ್‌ಐ, ಕೆಪಿಟಿಸಿಎಲ್‌ಗೆ ಸೇರಿದ ಸಹಾಯಕ ಇಂಜಿನಿಯರ್ ಹೀಗೆ ಪ್ರತಿ ಸರ್ಕಾರಿ ಹುದ್ದೆಯನ್ನು 40 ಲಕ್ಷದಿಂದ ಒಂದು ಕೋಟಿಗೆ ಹರಾಜು ಹಾಕಿ, ಲಕ್ಷಾಂತರ ಯುವಕರ ಭವಿಷ್ಯವನ್ನೇ ಅತಂತ್ರ ಮಾಡಿದ ಶೇ.40 ಸರ್ಕಾರ. ಬಿಜೆಪಿ ಆಡಳಿತದಲ್ಲಿ ಮಾದಕ ವಸ್ತುಗಳಿಗೆ ಬಲಿಯಾಗುವವರ ಸಂಖ್ಯೆ ಶೆ.462ಕ್ಕೆ ಏರಿಕೆಯಾಗಿದೆ ಎಂದು ಬಿಜೆಪಿಯ ನಿಜ ಕನಸುಗಳು ಕರಪತ್ರದಲ್ಲಿ ಸಾರಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಇನ್ನಿತರರನ್ನು ಕಾಣಬಹುದು.

ಮೈಸೂರು ಮಿತ್ರ

ಜ.26 ರಂದು ಮೈಸೂರಿನಲ್ಲಿ ಪ್ರಜಾಧ್ವನಿ ಯಾತ್ರೆ ಸಮಾವೇಶ

● ಸದ್ಯದಲ್ಲೇ ಬಿಜೆಪಿ ಸರ್ಕಾರದ 'ಪಾಪ್ಯುಲರ್ ಪುರಾಣ' ಚಾರ್ಜ್‌ಶೀಟ್ ಬಿಡುಗಡೆ ● ಸಮಾವೇಶ ಸಂಬಂಧ ಮೈಸೂರು, ಚಾ,ನಗರ ಜಿಲ್ಲೆ ಕಾಂಗ್ರೆಸ್ ಮುಖಂಡರೊಂದಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಸಮಾಲೋಚನೆ; ಒಗ್ಗಟ್ಟಾಗಿ ಪಕ್ಷದ ಗೆಲುವಿಗೆ ಶ್ರಮಿಸಲು ಸೂಚನೆ

ಮೈಸೂರು, ಜ.20(ಎಂಕೆ)– 'ಬಿಜೆಪಿ ಸರ್ಕಾರದ ಪಾಪ್ಯುಲರ್ ಪುರಾಣ' ಚಾರ್ಜ್‌ಶೀಟ್ ಅನ್ನು ರಾಜ್ಯದ ಜನತೆ ಮುಂದಿಡುವ ಮೂಲಕ ವಚನ ಭ್ರಷ್ಟ ಬಿಜೆಪಿ ಸರ್ಕಾರದ ನಿಜರೂಪವನ್ನು ಸದ್ಯದಲ್ಲೇ ಅನಾವರಣಗೊಳಿಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ತಮ್ಮ ನಿವಾಸದಲ್ಲಿ ಜ.26 ರಂದು ನಗರದ ಜೆ.ಕೆ.ಮೈದಾನದಲ್ಲಿ ಹಮ್ಮಿಕೊಂಡಿರುವ ಪ್ರಜಾಧ್ವನಿ ಯಾತ್ರೆ ಸಮಾವೇಶ ಕುರಿತು ಹಾಲಿ ಶಾಸಕರು, ಮಾಜಿ ಶಾಸಕರು, ವಿಧಾನಸಭಾ ಚುನಾವಣಾ ಟಿಕೆಟ್ ಆಕಾಂಕ್ಷಿಗಳು ಹಾಗೂ ಮೈಸೂರು ಮತ್ತು ಚಾ.ನಗರ ಜಿಲ್ಲೆಯ ಪ್ರಮುಖ ಮುಖಂಡರೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಬಿಜೆಪಿ ಸರ್ಕಾರ ಮಾಡಿರುವಂತಹ ಭ್ರಷ್ಟಾಚಾರ ಕುರಿತು 'ಬಿಜೆಪಿ ಸರ್ಕಾರದ ಪಾಪ್ಯುಲರ್ ಪುರಾಣ'ವೆಂಬ ಚಾರ್ಜ್‌ಶೀಟ್ ಅನ್ನು ಜನತೆ ಮುಂದಿಡಲಾಗುವುದು. ಬಿಜೆಪಿ ಸರ್ಕಾರ ಮಾಡಿರುವ ಭ್ರಷ್ಟಾಚಾರ, ವಚನ ಭ್ರಷ್ಟತೆ, ಯಾವ ಮಾರ್ಗದಲ್ಲಿ ಅಧಿಕಾರಕ್ಕೆ ಬಂದಿದೆ ಎಂಬುದನ್ನು ರಾಜ್ಯದ ಜನತೆಗೆ ತಿಳಿಸುವ ಕೆಲಸದೊಂದಿಗೆ ಮುಂಬರುವ ವಿಧಾನಸಭಾ ಚುನಾವಣೆಗೆ ತಯಾರಾಗಬೇಕಾಗಿದೆ ಎಂದು ತಿಳಿಸಿದರು.



ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ತಿಳಿಸಿ...

ಕಾಂಗ್ರೆಸ್‌ನಿಂದ ಈಗಾಗಲೇ ಎರಡು ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಪ್ರತೀ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಪೂರೈಕೆ ಹಾಗೂ ಮನೆ ಯಜಮಾನಿಗೆ ಪ್ರತೀ ತಿಂಗಳಿಗೆ 2000 ರೂ. ನೀಡುವ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಈ ಎರಡು ಯೋಜನೆಗಳಿಂದ ಸುಮಾರು 35 ಸಾವಿರ ಕೋಟಿ ರೂ. ಆಗಲಿದೆ. ಅಲ್ಲದೆ 10 ಕೆಜಿ ಅಕ್ಕಿ ನೀಡುತ್ತೇವೆ ಎಂದೂ ಸಹ ಹೇಳಿದ್ದೇವೆ. ಜೊತೆಗೆ ಕಾಂಗ್ರೆಸ್ ಅಧಿಕಾರದಲ್ಲಿದ್ದ ಅವಧಿಯಲ್ಲಿ ಕೈಗೊಂಡ ಜನಪ್ರಿಯ ಯೋಜನೆಗಳನ್ನು ತಿಳಿಸಿ.

- ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ಬಿಜೆಪಿ ಬಾವುಟಗಳು ಮೂರು ದಿನ... ಕಾಂಗ್ರೆಸ್‌ನ ಬಾವುಟಗಳು ಮಾತ್ರ ಒಂದೇ ದಿನ...!

ಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಬಿಜೆಪಿ ಸಮಾವೇಶಗಳಿಗೆ ನಗರದೆಲ್ಲೆಡೆ ಬಂಟಿಂಗ್ಸ್, ಬಾವುಟಗಳನ್ನು ಹಾಕುತ್ತಿದೆ. ಪಾಲಿಕೆಯವರು ಮೂರು ದಿನಗಳಾದರೂ ಬಿಜೆಪಿ ಬಾವುಟಗಳನ್ನು ತೆಗೆಯುವುದಿಲ್ಲ ಆದರೆ ಕಾಂಗ್ರೆಸ್ ಬಾವುಟಗಳು ಎಲ್ಲಿ ಕಂಡರೂ ಒಂದೇ ದಿನದಲ್ಲಿ ತೆರವು ಮಾಡುತ್ತಾರೆ ಎಂದು ಸಿದ್ದರಾಮಯ್ಯ ಅವರ ಬಳಿ ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಈ ಕುರಿತು ಪಾಲಿಕೆ ಆಯುಕ್ತರೊಂದಿಗೆ ಮಾತನಾಡಲಾಗುವುದು. ಸಮಾವೇಶ ನಡೆಯುವ ಸ್ಥಳದಲ್ಲಿ ಅಡ್ಡಾದಿಡ್ಡಿಯಾಗಿ ಫ್ಲೆಕ್ಸ್ ಹಾಕದೆ, ಪ್ರೋಟೋಕಾಲ್ ಪ್ರಕಾರವೇ ಫ್ಲೆಕ್ಸ್ ಹಾಕುವಂತೆ ತಿಳಿಸಿದರಲ್ಲದೆ ಸಮಾವೇಶ ಯಶಸ್ಸಿಗೆ ಜವಾಬ್ದಾರಿ ವಹಿಸಿಕೊಳ್ಳುವಂತೆ ತಿಳಿಸಿದರು.

ಈ ಬಾರೀ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಎಲ್ಲಾ ಮುನ್ಸೂಚನೆ ಇದ್ದು, ನೂರಕ್ಕೆ ನೂರು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆ. ಕುಮಾರ ಸ್ವಾಮಿ ಎಷ್ಟೇ ಪಂಚರತ್ನ ಯಾತ್ರೆ ಮಾಡ್ಲಿ, ಬಿಜೆಪಿಯೋರು ಜನ ಸಂಕಲ್ಪ ಯಾತ್ರೆ ಮಾಡ್ಲಿ, ಆಮೇಲೆ ನರೇಂದ್ರ ಮೋದಿ ವಾರಕ್ಕೊಮ್ಮೆ ಬಂದರೂ ಏನೂ ಬದಲಾವಣೆ ಆಗಲ್ಲ. ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು, ಅದಕ್ಕಾಗಿ ಎಲ್ಲರೂ ಸೈನಿಕರಂತೆ ಕೆಲಸ ಮಾಡುವುದು ಮುಖ್ಯ ಎಂದರು.

ವಾರ್ ಟೈಮ್: ವಿಧಾನಸಭಾ ಚುನಾವಣೆ ಏಪ್ರಿಲ್ ಕಡೆಯ ವಾರ ಅಥವಾ ಮಾರ್ಚ್ ತಿಂಗಳ ಮೊದಲ ವಾರ ನಡೆಯುವ ಸಾಧ್ಯತೆ ಇದೆ. ಹೆಚ್ಚೆಂದರೆ ಇನ್ನೂ 75–80 ದಿನ ಮಾತ್ರ, ಯಾರೂ ರೆಸ್ಟ್ ತೆಗೆದುಕೊಳ್ಳುವಂತಿಲ್ಲ. ಇದು ನಮಗೆ ವಾರ್ ಟೈಮ್ ಇದ್ದಂತೆ. ಹಗಲು–ರಾತ್ರಿ ಕಾರ್ಯಕರ್ತರನ್ನು ಸಂಘಟಿಸಬೇಕು. ನಾನು ಈ ವಯಸ್ಸಿನಲ್ಲೂ ರಾಜ್ಯದೆಲ್ಲೆಡೆ ಸುತ್ತಾಡುತ್ತಿದ್ದೇನೆ. ನೀವು ಕೂಡ ಸ್ವಲ್ಪ ಶ್ರಮ ಹಾಕಬೇಕು. ಜೊತೆಗೆ ದುಡ್ಡು ಖರ್ಚಾಗಲಿದ್ದು, ಮಾಡಬೇಕಾಗುತ್ತದೆ. ಆದರೆ ಅದೆಲ್ಲವನ್ನು ಲೆಕ್ಕಕೊಡಬೇಡಿ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಹೊಂದಾಣಿಕೆ ಇರಲಿ: ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿ ಆಯ್ಕೆಯೂ ಮುಖ್ಯವಾಗುತ್ತದೆ. ಅರ್ಜಿ ಹಾಕಿದವರಿಗೆಲ್ಲಾ ಟಿಕೆಟ್ ಸಿಗುವುದಿಲ್ಲ. ಕೊಡಲು ಸಾಧ್ಯವಿಲ್ಲ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ 11 ಮಂದಿ ಆಕಾಂಕ್ಷಿಗಳು ಅರ್ಜಿ ಹಾಕಿದ್ದಾರೆ. ಅವರಿಗೆಲ್ಲಾ ಟಿಕೆಟ್ ಕೊಡಲು ಸಾಧ್ಯನಾ? ಒಬ್ಬರಿಗೆ ಮಾತ್ರ ಟಿಕೆಟ್ ನೀಡಬಹುದು. ಯಾರಿಗೆ ಟಿಕೆಟ್ ಸಿಕ್ಕರೂ ಅವರೊಂದಿಗೆ ಉಳಿದವರೆಲ್ಲರು ಸೇರಿ ಕೆಲಸ ಮಾಡಬೇಕು. ಹೊಂದಾಣಿಕೆ ಮಾಡಿಕೊಂಡು ಬೆಂಬಲ ನೀಡಬೇಕು. ಅದನ್ನು ಬಿಟ್ಟು ಒಬ್ಬರ ಕಾಲನ್ನು ಮತ್ತೊಬ್ಬರು ಎಳೆಯಬಾರದು. ನಾವು ಅಧಿಕಾರದಲ್ಲಿದ್ದರೆ ಜನರಿಗೆ ಸಹಾಯ ಮಾಡಲು ಸಾಧ್ಯ. ಅಧಿಕಾರವೇ ಇಲ್ಲದಿದ್ದರೆ ಸಹಾಯ ಮಾಡಲು ಹೇಗೆ ಸಾಧ್ಯ. ಎಲ್ಲರೂ ಕೂಡ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಜಯ ನೂರಕ್ಕೆ ನೂರು ಗ್ಯಾರಂಟಿ ಎಂದು ಹೇಳಿದರು.

ಎರಡು ಜಿಲ್ಲೆಯಲ್ಲೂ ಯಶಸ್ವಿಯಾಗಬೇಕು: ಪ್ರಜಾಧ್ವನಿ ಯಾತ್ರೆ ಈಗಾಗಲೇ ರಾಜ್ಯದ 8 ಜಿಲ್ಲೆಗಳಲ್ಲಿ ಮುಗಿದಿದ್ದು, ಜ.28ರವರೆಗೆ ನಡೆಯಲಿದೆ. 20 ಜಿಲ್ಲೆಗಳಲ್ಲಿ ಯಾತ್ರೆ ಸಾಗಲಿದ್ದು, ಜ.26 ರಂದು ಬೆಳಗ್ಗೆ ಚಾಮರಾಜನಗರದಿಂದ ಸಂಜೆ ವೇಳೆಗೆ ಮೈಸೂರಿಗೆ ಬರಲಿದೆ. ಅಂದು ಎರಡು ಜಿಲ್ಲೆಯಲ್ಲೂ ನಡೆಯುವ ಯಾತ್ರಾ ಸಮಾವೇಶ ಯಶಸ್ವಿಯಾಗಬೇಕು. ಮೈಸೂರಿನಲ್ಲಿ ನಡೆಯುವ ಸಮಾವೇಶದಲ್ಲಿ 50 ಸಾವಿರ ಜನರನ್ನು ಸೇರಿಸುವುದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಹಾಲಿ ಶಾಸಕರು, ಮಾಜಿ ಶಾಸಕರು ಹಾಗೂ ಆಕಾಂಕ್ಷಿಗಳು ಸಮಾವೇಶ ಯಶಸ್ಸಿಗೆ ಕೈ ಜೋಡಿಸಬೇಕು. ಜನರನ್ನು ಸೇರಿಸುವುದರಿಂದ ಹಿಡಿದು ಕುಡಿಯುವ ನೀರು, ವೇದಿಕೆ, ಧ್ವನಿವರ್ಧಕ ಸೇರಿದಂತೆ ಎಲ್ಲಾ ಬಗೆಯ ಅಗತ್ಯತೆಗಳನ್ನು ಪೂರೈಸಬೇಕು ಎಂದರಲ್ಲದೆ ಮೈಸೂರು ನಗರದ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಕ್ಷೇತ್ರಗಳ ಆಕಾಂಕ್ಷಿಗಳ ಸಭೆ ನಡೆಸಿ ಜವಾಬ್ದಾರಿ ಹಂಚಿಕೆ ಮಾಡುವಂತೆ ನಗರಾಧ್ಯಕ್ಷ ಆರ್.ಮೂರ್ತಿ ಅವರಿಗೆ ಸೂಚಿಸಿದರು.

ಜ.30ಕ್ಕೆ ಭಾರತ್ ಜೋಡೋ ಯಾತ್ರೆ ಮುಕ್ತಾಯಗೊಳ್ಳಲಿದ್ದು, ನಂತರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ನಾನು ಪ್ರತ್ಯೇಕವಾಗಿ ಯಾತ್ರೆ ನಡೆಸಲಿದ್ದೇವೆ. ನಾನು ಉತ್ತರ ಕರ್ನಾಟಕದಿಂದ ಆರಂಭಿಸಿ, ದಕ್ಷಿಣಕ್ಕೆ ಬಂದರೆ, ಡಿ.ಕೆ.ಶಿವಕುಮಾರ್ ಹಳೇ ಮೈಸೂರು ಭಾಗದಿಂದ ಆರಂಭಿಸಿ ಉತ್ತರ ಕರ್ನಾಟಕದೆಲ್ಲೆಡೆ ಯಾತ್ರೆ ನಡೆಸಲಿದ್ದಾರೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಮಾಜಿ ಶಾಸಕರಾದ ಕೆ.ವೆಂಕಟೇಶ್, ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮುಖಂಡರಾದ ಕೆ.ಹರೀಶ್‌ಗೌಡ, ಪ್ರದೀಪ್ ಕುಮಾರ್, ಸಿ.ಮಹದೇವ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿಯಲ್ಲಿ ಬಿಜೆಪಿ ಬಲವೃದ್ಧಿ

ಕೋಟೆಹುಂಡಿಯಲ್ಲಿ ಯುವ ಮುಖಂಡರ ಬಿಜೆಪಿಗೆ ಸ್ವಾಗತಿಸಿದ ಅರುಣ್ ಕುಮಾರ್‌ಗೌಡ



ಮೈಸೂರು, ಜ.20(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಬಲ ಹೆಚ್ಚುತ್ತಿದೆ ಎಂದು ಯುವ ಮುಖಂಡ ಎನ್.ಅರುಣ್ ಕುಮಾರ್‌ಗೌಡ ತಿಳಿಸಿದರು.

ಕ್ಷೇತ್ರದ ಕೋಟೆಹುಂಡಿ ಗ್ರಾಮದಲ್ಲಿ ಬಿಜೆಪಿಗೆ ಸೇರಿದ ಯುವ ಮುಖಂಡರನ್ನು ಆತ್ಮೀಯವಾಗಿ ಪಕ್ಷಕ್ಕೆ ಸ್ವಾಗತಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿಯಲ್ಲಿ ಯುವಕರ ನಡೆ ಬಿಜೆಪಿ ಕಡೆ ಎನ್ನುವ ವಾತಾವರಣ ಸೃಷ್ಟಿಯಾಗಿದೆ ಕ್ಷೇತ್ರದೆಲ್ಲೆಡೆ ಯುವ ಸಮುದಾಯದಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ. ಹಲವು ಯುವ ಮುಖಂಡರು ಬಿಜೆಪಿ ಸೇರುತ್ತಿರುವುದು ಪಕ್ಷದ ಬಲ ಹೆಚ್ಚಿಸಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವವನ್ನು ವಿಶ್ವವೇ ಮೆಚ್ಚಿದೆ. ಯುವ ಸಮುದಾಯ ಮೋದಿ ಅವರ ಬಗ್ಗೆ ಗಟ್ಟಿಯಾದ ವಿಶ್ವಾಸ ಹೊಂದಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ನಿಶ್ಚಿತ. ಈ ನಿಟ್ಟಿನಲ್ಲಿ ಪ್ರತಿ ಬೂತ್ ಮಟ್ಟದಲ್ಲೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಕ್ರಮ, ಯೋಜನೆಗಳ ಬಗ್ಗೆ ತಿಳಿಸಿ, ಚುನಾವಣೆ ದೃಷ್ಟಿಯಿಂದ ವಿಪಕ್ಷಗಳು ಮಾಡುವ ಆರೋಪದ ಸತ್ಯಾ ಸತ್ಯತೆ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಪ್ರತಿಯೊಬ್ಬರೂ ಮತದಾರರ ಸಂಪರ್ಕಿಸುವ ಅಭಿಯಾನದಲ್ಲಿ ಸಕ್ರಿಯರಾಗಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಪಕ್ಷಕ್ಕೆ ಸೇರ್ಪಡೆಗೊಂಡ ಗ್ರಾಮದ ಯುವ ಮುಖಂಡರಾದ ಮಾಲೆಗೌಡ, ಮಹದೇವಸ್ವಾಮಿ, ಶೇಖರಗೌಡ, ಪ್ರಸಾದ್, ನಾರಾಯಣ, ಪುಟ್ಟೇಗೌಡ, ನಾಗರಾಜ್, ಶಿವ, ರಮೇಶ, ಸೋಮೇಗೌಡ, ಶಿವರಾಜ, ಮಂಜುನಾಥ್ ಮತ್ತಿತರರಿಗೆ ಅಭಿನಂದನೆ ತಿಳಿಸಿದರು. ಬಿಜೆಪಿ ಮುಖಂಡರಾದ ಎನ್.ಕೆ ರವಿಕುಮಾರ್, ಮಂಜು ಮತ್ತಿತರರಿದ್ದರು.

ಕೆಆರ್ ಕ್ಷೇತ್ರದಲ್ಲಿ ಶಾಸಕ ರಾಮದಾಸ್ ನೇತೃತ್ವದಲ್ಲಿ 'ಸರ್ಕಾರಿ ಸೌಲಭ್ಯ, ಪಿಂಚಣಿ ಅದಾಲತ್'



ಮೈಸೂರು, ಜ.20(ಎಸ್‌ಬಿಡಿ)– ಸರ್ಕಾರದ ಸೌಲಭ್ಯಗಳನ್ನು ಅರ್ಹರಿಗೆ ಸಮರ್ಪಕವಾಗಿ ತಲುಪಿಸುವ ಉದ್ದೇಶದೊಂದಿಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ 'ಸರ್ಕಾರಿ ಸೌಲಭ್ಯ ಹಾಗೂ ಪಿಂಚಣಿ ಅದಾಲತ್' ವಿನೂತನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಶಾಸಕರ ನೇತೃತ್ವ ಹಾಗೂ 64ನೇ ವಾರ್ಡ್ ಕಾರ್ಪೊರೇಟರ್ ಚಂಪಕ ಅವರ ಅಧ್ಯಕ್ಷತೆಯಲ್ಲಿ ಅರವಿಂದನಗರದ ಜನನಿ ಜನ್ಮಭೂಮಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಅದಾಲತ್‌ನಲ್ಲಿ ವಿಕಲಚೇತನರು, ವೃದ್ಧರು ಸರ್ಕಾರಿ ಸೌಲಭ್ಯಗಳಿಗೆ ಅರ್ಹರಾದ ನೂರಾರು ಮಂದಿಗೆ ನೆರವು ದೊರಕಿತು.

ಅದಾಲತ್ ಮೂಲಕ ಒಂದೇ ಸೂರಿನಡಿ ಸರ್ಕಾರಿ ಸೌಲಭ್ಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಂದ ಸಾರ್ವಜನಿಕರಿಗೆ ಮಾಹಿತಿ ಒದಗಿಸಲಾಯಿತು. ಪಿಂಚಣಿ ಇನ್ನಿತರ ಸಾಮಾಜಿಕ ಭದ್ರತಾ ಪಿಂಚಣಿಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ತಾಲೂಕು ಕಚೇರಿ ಪಿಂಚಣಿ ವಿಭಾಗದ ಅಧಿಕಾರಿಗಳನ್ನು ಅದಾಲತ್‌ಗೆ ಆಹ್ವಾನಿಸಿ ಮಾರ್ಗದರ್ಶನ ಕಲ್ಪಿಸಲಾಯಿತು. ಅಲ್ಲದೆ ಅರ್ಹರಿಂದ ಸ್ಥಳದಲ್ಲೇ ಅರ್ಜಿ ಸ್ವೀಕರಿಸುವುದರ ಜೊತೆಗೆ ಪಿಂಚಣಿ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲಾಯಿತು.

ಚುನಾವಣಾ ಗುರುತಿನ ಚೀಟಿಗೆ ನೋಂದಣಿ ಹಾಗೂ ತಿದ್ದುಪಡಿಗೆ ಅರ್ಜಿ ಸ್ವೀಕಾರ, ಧರ್ಮಸ್ಥಳ ಕ್ಷೇಮಾಭಿವೃದ್ಧಿ ಸ್ವಸಹಾಯ ಸಂಘದ ವತಿಯಿಂದ ಉಚಿತವಾಗಿ ಇ–ಶ್ರಮ್ ಕಾರ್ಡ್ ಮತ್ತು ಆಯುಷ್ಮಾನ್ ಕಾರ್ಡ್, ವೈದ್ಯರಿಂದ ಪಿಂಚಣಿ ಸೌಲಭ್ಯಕ್ಕೆ ಅಗತ್ಯವಾದ ವೈದ್ಯಕೀಯ ದೃಢೀಕರಣ ವರದಿಯನ್ನು ಸ್ಥಳದಲ್ಲೇ ಕಲ್ಪಿಸಲಾಯಿತು. ಆಯುಷ್ಮಾನ್ ಕಾರ್ಡ್, ವಿಧವಾ ವೇತನ, ವೃದ್ಧಾಪ್ಯ ವೇತನ, ವಿಶೇಷ ಚೇತನರ ಮಾಸಿಕ ವೇತನ ಸೇರಿದಂತೆ ಅನೇಕ ರೀತಿಯ ಅನುಕೂಲಗಳನ್ನು ಸಾರ್ವಜನಿಕರು ಅದಾಲತ್ ಮೂಲಕ ಪಡೆದುಕೊಂಡರು.

ನೂರಾರು ಮಂದಿಗೆ ಅನುಕೂಲ: ಸರ್ಕಾರಿ ಸೌಲಭ್ಯಕ್ಕೆ ಅರ್ಹರಿದ್ದರೂ ಸಮರ್ಪಕ ಮಾಹಿತಿ ಇಲ್ಲದ ಕಾರಣದಿಂದ ಇಂದಿಗೂ ಅದೆಷ್ಟೋ ಮಂದಿ ವಂಚಿತರಾಗಿದ್ದಾರೆ. ಕಚೇರಿಗಳಿಗೆ ಅಲೆದು ಬೇಸರದಿಂದ ಸುಮ್ಮನಾಗಿರುವ ಜನರೂ ಇದ್ದಾರೆ. ಆದ್ದರಿಂದ ಶಾಸಕ ಎಸ್.ಎ.ರಾಮದಾಸ್ ಅವರು ವಿವಿಧ ಇಲಾಖೆಗಳ ಅಧಿಕಾರಿಗಳ ಉಪಸ್ಥಿತಿಯೊಂದಿಗೆ ಅದಾಲತ್ ನಡೆಸಿದ ಅದಾಲತ್‌ಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ಅದಾಲತ್‌ನಲ್ಲಿ ಒಟ್ಟು 28 ಫಲಾನುಭವಿಗಳಿಗೆ ಆಯುಷ್ಮಾನ್ ಕಾರ್ಡ್, 53 ಮಂದಿಗೆ ಚುನಾವಣೆ ಗುರುತಿನ ಚೀಟಿ, 112 ಮಂದಿಗೆ ವಿವಿಧ ಪಿಂಚಣಿ, 89 ಮಂದಿಗೆ ಇ–ಶ್ರಮ್ ಕಾರ್ಡ್, 43 ಫಲಾನುಭವಿಗಳಿಗೆ ಪಾನ್ ಕಾರ್ಡ್ ದಕ್ಕಿದೆ ಎಂದು ತಿಳಿಸಲಾಗಿದೆ.

ಅದಾಲತ್‌ನಲ್ಲಿ ಶಾಸಕ ರಾಮದಾಸ್ ಹಾಗೂ ಕಾರ್ಪೊರೇಟರ್ ಚಂಪಕ ಅವರು ಫಲಾನುಭವಿಗಳಿಗೆ ದಾಖಲೆ ವಿತರಿಸಿದರು. ಸ್ಥಳೀಯ ಮುಖಂಡರಾದ ಗೋಪಾಲ್, ಪ್ರಫುಲ್ಲಾ, ದೀಪ, ಗೀತಾ, ನಾಗರತ್ನ ಗೌಡ, ಉಮಾ, ವಿಜಯಲಕ್ಷ್ಮಿ, ಕವಿತ, ಪ್ರದೀಪ್, ಗಿರೀಶ್, ಸತೀಶ್, ನಾಗೇಶ್, ಕೃಷ್ಣ, ಶ್ರೀನಿಧಿ, ಶ್ರೀವತ್ಸ ರಕ್ಷಿತ್, ರವಿ, ಸುನೀಲ್, ರಾಜೀವ್, ಅನಿಲ್, ಮಹೇಶ್ ಮತ್ತಿತರು ಉಪಸ್ಥಿತರಿದ್ದರು.

ಶ್ರೀ ವೀರ ಮಡಿವಾಳ ಮಾಚಿದೇವರ ಸಂಘದ ಕ್ಯಾಲೆಂಡರ್ ಬಿಡುಗಡೆ



ಮೈಸೂರು,ಜ.20(ಪಿಎಂ)–ಶ್ರೀ ಶ್ರೀ ವೀರ ಮಡಿವಾಳ ಮಾಚಿದೇವರ ಸಂಘದಿಂದ ಹೊರತಂದಿರುವ ಪ್ರಸಕ್ತ ಸಾಲಿನ ಕ್ಯಾಲೆಂಡರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಡುಗಡೆ ಮಾಡಲಾಯಿತು. ಇದೇ ವೇಳೆ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ರವಿನಂದನ್, ಫೆ.1ರಂದು ಜಿಲ್ಲಾಡಳಿತದ ವತಿಯಿಂದ ಮೈಸೂರಿನ ಕಲಾಮಂದಿರದಲ್ಲಿ ಶ್ರೀ ವೀರ ಮಡಿವಾಳ ಮಾಚಿದೇವರ ಜಯಂತಿ ಹಮ್ಮಿಕೊಳ್ಳಲಾಗಿದೆ. ಅಲ್ಲದೆ, ಜ.27ರಂದು ಸಂಘದ ರಾಜ್ಯ ಘಟಕದ ವತಿಯಿಂದ ವರುಣ ಕ್ಷೇತ್ರದ ಸಮುದಾಯದ ಬಡವರಿಗೆ ಗೃಹೋಪಯೋಗಿ ಸಾಮಗ್ರಿಗಳನ್ನು ವಿತರಿಸುವ ಕಾರ್ಯಕ್ರಮ ಆಯೋಜಿಲಾಗಿದೆ ಎಂದು ತಿಳಿಸಿದರು.

ಡಾ.ಅನ್ನಪೂರ್ಣಮ್ಮ ವರದಿಯಂತೆ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಿಸಲು ಫೆ.22ರಂದು ಬೆಂಗಳೂರಿನಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಮೈಸೂರು ಜಿಲ್ಲೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದವರು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಸಂಘದ ಗೌರವಾಧ್ಯಕ್ಷ ಪುಟ್ಟಸ್ವಾಮಿ, ಅಧ್ಯಕ್ಷ ಸಿ.ಎಸ್. ಮಹೇಶ್, ಪದಾಧಿಕಾರಿಗಳಾದ ಚಂದ್ರಶೇಖರ್ ಭೈರಿ, ಜಿ.ಸುಂದರ್ ಮತ್ತಿತರರು ಹಾಜರಿದ್ದರು.



ಮೈಸೂರು ಹಿರಿಯ ಸಮಾಜವಾದಿ, ಕನ್ನಡಪರ ಹಾಗೂ ಪ್ರಗತಿಪರ ಹೋರಾಟಗಾರ ಪ. ಮಲ್ಲೇಶ್ ನಿಧನಕ್ಕೆ ಶ್ರೀ ಮನೆಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಅಧ್ಯಕ್ಷರಾದ ಹುಯಿಲಾಳು ರಾಮಸ್ವಾಮಿ ಶ್ರದ್ಧಾಂಜಲಿ ಸಲ್ಲಿಸಿದರು. ಈ ವೇಳೆ ಗ್ರಾಪಂ ಸದಸ್ಯ ಸದಸ್ಯರಾದ ಪಿ.ಮಹದೇವು, ಸಾಹುಕಾರ್‌ಹುಂಡಿ ಗೋಪಾಲ್ ಗೌಡ, ಹರೀಶ್‌ರೆಡ್ಡಿ, ಜಟ್ಟಿಹುಂಡಿ ರಾಚಪ್ಪ, ಕುಮಾರ್ ಮುಂತಾದವರು ಹಾಜರಿದ್ದರು.

ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಬೈಕ್ ರ‍್ಯಾಲಿ

ಸಂಚಾರವೇ ನಗರಗಳ ಮೂಲ ದಿಕ್ಸೂಚಿ : ಪೊಲೀಸ್ ಕಮಿಷ್ನರ್

ಮೈಸೂರು, ಜ.20(ಜಿಎ)–ಒಂದು ನಗರದ ಬಗ್ಗೆ ತಿಳಿಯಬೇಕೆಂದರೆ ಅಲ್ಲಿನ ಸಂಚಾರವೇ ಮೂಲ ದಿಕ್ಸೂಚಿಯಾಗಿರುತ್ತದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಬಾನೋತ್ ಅಭಿಪ್ರಾಯಪಟ್ಟಿದ್ದಾರೆ.

ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಮೈಸೂರು ನಗರ ಸಂಚಾರ ಪೊಲೀಸ್ ವಿಭಾಗ ಮತ್ತು ಎಎಸ್‌ಜಿ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ ಆಯೋಜಿಸಿದ್ದ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮೈಸೂರು ನಗರಕ್ಕೆ ವಿಶ್ವಮಟ್ಟದಲ್ಲಿ ವಿಭಿನ್ನವಾದ ಹೆಸರಿದ್ದು, ಇಲ್ಲಿಗೆ ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ಇಂತಹ ಸ್ಥಳದಲ್ಲಿ ಸಂಚಾರ ನಿಯಮ ಪಾಲಿಸುವುದು ಬಹಳ ಮುಖ್ಯವಾಗಿದೆ ಎಂದರು.



ಯಾವುದೇ ಒಂದು ನಗರಕ್ಕೆ ಜನರು ಭೇಟಿ ನೀಡುವ ಮೊದಲು ಅಲ್ಲಿನ ಟ್ರಾಫಿಕ್ ಬಗ್ಗೆ ಮಾಹಿತಿ ಕಲೆ ಹಾಕುತ್ತಾರೆ, ಅದರಂತೆ ನಗರದ ದಿಕ್ಸೂಚಿಯೇ ಅಲ್ಲಿನ ಸಂಚಾರ ನಿಯಮ ಪಾಲನೆಯಾಗಿರುತ್ತದೆ. ಸಾರ್ವಜನಿಕರಲ್ಲಿ ಸಂಚಾರ ನಿಯಮಗಳ ಬಗ್ಗೆ ಅರಿವಿದೆ. ಆದರೆ, ಹೆಲ್ಮೆಟ್ ಧರಿಸದೆ, ಮದ್ಯಪಾನ ಮಾಡಿ ಮತ್ತು ಸೀಟ್ ಬೆಲ್ಟ್ ಹಾಕದೆ ಇದ್ದರೂ ನನಗೆ ಏನೂ ಆಗುವುದಿಲ್ಲ ಎಂಬ ಮನೋಭಾವದಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಕಳೆದ ವರ್ಷ 170 ಮಂದಿ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಆದ್ದರಿಂದ ಪ್ರತಿಯೊಬ್ಬರು ಸಂಚಾರ ನಿಯಮ ಪಾಲಿಸಿ ಎಂದು ಸಲಹೆ ನೀಡಿದರು.

ನಮಗೆ ಪ್ರತಿಯೊಬ್ಬ ಸಾರ್ವಜನಿಕರ ಜೀವ ಮುಖ್ಯವಾಗಿದೆ. ಆದರಿಂದ ಜನರ ಸುರಕ್ಷತೆಗಾಗಿ ಕೆಲಸ ಮಾಡುತ್ತಿದ್ದೇವೆ. ದಂಡ ವಸೂಲಿ ಮಾಡುವುದು ನಮ್ಮ ಮೂಲ ಉದ್ದೇಶವಲ್ಲ. ಸ್ವಯಂ ಪ್ರೇರಣೆಯಿಂದ ನಿಯಮಗಳನ್ನು ಪಾಲಿಸಿದರೆ, ಇಡೀ ನಗರವೇ ಸುರಕ್ಷತೆಯ ನಗರವಾಗಲಿದೆ. ನೀವು ನಮ್ಮೊಟ್ಟಿಗೆ ಕೈಜೋಡಿಸಿ ಎಂದು ಮನವಿ ಮಾಡಿದರು.

ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಿಂದ ಆರಂಭವಾದ ಬೈಕ್ ರ‍್ಯಾಲಿ ಹಾರ್ಡಿಂಜ್ ವೃತ್ತ, ಗನ್ ಹೌಸ್ ವೃತ್ತ, ಪಾಠಶಾಲಾ ಸಿಗ್ನಲ್ ಮೂಲಕ ಚಾಮರಾಜ ಜೋಡಿ ರಸ್ತೆ ಮಾರ್ಗವಾಗಿ ರಾಮಸ್ವಾಮಿ ವೃತ್ತ, ಕಾಫರ್ಡ್ ಹಾಲ್ ಮುಂಭಾಗದ ರಸ್ತೆ, ಮೆಟ್ರೋಪೋಲ್, ರೈಲ್ವೇ ನಿಲ್ದಾಣದ ವೃತ್ತ, ಆಯುರ್ವೇದ ವೃತ್ತ, ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ಮತ್ತೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ತಲುಪಿತು.

ಈ ವೇಳೆ ಡಿಸಿಪಿಗಳಾದ ಮುತ್ತುರಾಜ್, ಗೀತಪ್ರಸನ್ನ, ಎಸಿಪಿಗಳಾದ ಶಶಿಧರ್, ಶಿವಶಂಕರ್, ಪರಮೇಶ್ವರಪ್ಪ, ಎಎಸ್‌ಜಿ ಆಸ್ಪತ್ರೆಯ ಡಾ.ಮಹೇಶ್ ಕುಮಾರ್, ಡಾ.ಪವನ್ ಜೋಷಿ, ಡಾ. ವಿನಿ ಬದಲಾನಿ ಮತ್ತು ವಿಜಯನ್ ಸೇರಿದಂತೆ ನಗರದ ಎಲ್ಲಾ ಸಂಚಾರ ಠಾಣೆಯ ಸಿಬ್ಬಂದಿ ಹಾಗೂ ಶೇಷಾದ್ರಿಪುರಂ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಬೈಕ್‌ಗೆ ಜೀಪ್ ಡಿಕ್ಕಿ: ಹಿಂಬದಿ ಸವಾರ ಸಾವು

ಮೈಸೂರು, ಜ.20–ಬೈಕ್‌ಗೆ ಜೀಪ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ಲಲಿತಾದ್ರಿಪುರದ ಬಳಿ ರಿಂಗ್ ರಸ್ತೆಯಲ್ಲಿ ಸಂಭವಿಸಿದೆ.

ಚಾಮರಾಜನಗರ ತಾಲೂಕು ಸರಗೂರು ಮೋಳೆ ಗ್ರಾಮದ ಕಾರ್ಮಿಕ ಬಸವರಾಜು(55) ಅಪಘಾತದಲ್ಲಿ ಮೃತಪಟ್ಟಿದ್ದು, ಬೈಕ್ ಚಾಲನೆ ಮಾಡುತ್ತಿದ್ದ ಅದೇ ಗ್ರಾಮದ ಮಹದೇವಶೆಟ್ಟಿ(48) ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಮಹದೇವಶೆಟ್ಟಿ ಅವರ ಬೈಕ್ (ಕೆಎ 10 ಎಕ್ಸ್ 4955)ನಲ್ಲಿ ಬಸವರಾಜು ಹಿಂದೆ ಕುಳಿತ್ತಿದ್ದರು. ಜ.18ರಂದು ಮಧ್ಯಾಹ್ನ 1.30ರ ಸುಮಾರಿನಲ್ಲಿ ರಿಂಗ್ ರಸ್ತೆಯ ತಿ.ನರಸೀಪುರ ಜಂಕ್ಷನ್‌ನಿಂದ ನಂಜನಗೂಡು ಕಡೆಗೆ ಇವರ ಬೈಕ್ ತೆರಳುತ್ತಿದ್ದಾಗ ಲಲಿತಾದ್ರಿಪುರದ ಬಳಿ ಪೆಟ್ರೋಲ್ ಬಂಕ್ ಸಮೀಪ ಜೀಪ್ (ಎಂಇಎಸ್ 2635) ಹಿಂಬದಿಯಿಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಬೈಕ್ ಸವಾರರಿಬ್ಬರೂ ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಅಂದು ಸಂಜೆ 5.55ರ ಸುಮಾರಿನಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಬಸವರಾಜು ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಗೃಹಿಣಿಯ ಮಾಂಗಲ್ಯ ಸರ ಕಳವು

ಮೈಸೂರು, ಜ.20–ಖದೀಮರು ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ಸಾತಗಳ್ಳಿಯ ಹೆಚ್.ಪಿ. ಅಂಡ್ ಆರ್.ಎಂ.ಎಸ್. ಲೇಔಟ್‌ನಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಶೋಭಾ(59) ಸರ ಕಳೆದುಕೊಂಡವರಾಗಿದ್ದು, ಜ.16ರಂದು ರಾತ್ರಿ 8.15ರ ಸುಮಾರಿನಲ್ಲಿ ಕೆಲಸದ ನಿಮಿತ್ತ ಸಿಟಿಗೆ ಹೋಗಿ ಆಟೋದಲ್ಲಿ ವಾಪಸ್ ಬಂದ ಇವರು, ಮನೆ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಬಂದ ಖದೀಮ, ಇವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಅನತಿ ದೂರದಲ್ಲಿ ಮತ್ತೋರ್ವ ಸ್ಟಾರ್ಟ್ ಮಾಡಿಕೊಂಡು ನಿಂತಿದ್ದ ಬೈಕ್ ಹತ್ತಿ ಪರಾರಿಯಾಗಿದ್ದಾನೆ. ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ರ್ಯಾಕ್ಟರ್ ಟ್ರೇಲರ್‌ಗೆ ಬೈಕ್ ಡಿಕ್ಕಿ: ಸವಾರ ಸಾವು

ಬೈಲುಕುಪ್ಪೆ, ಜ.20–ನಿಂತಿದ್ದ ಟ್ರ್ಯಾಕ್ಟರ್‌ನ ಟ್ರೇಲರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಪಿರಿಯಾಪಟ್ಟಣ ತಾಲೂಕಿನ ಹೂನಾಡಹಳ್ಳಿ ಗೇಟ್‌ನಲ್ಲಿ ಸಂಭವಿಸಿದೆ. ಪಿರಿಯಾಪಟ್ಟಣ ತಾಲೂಕು ಆಲನಹಳ್ಳಿ ಗ್ರಾಮದ ಕುಮಾರ(38) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಕೂಲಿ ಕಾರ್ಮಿಕನಾಗಿರುವ ಈತ ಪಿರಿಯಾಪಟ್ಟಣದಿಂದ ಸ್ವಗ್ರಾಮ ಆಲನಹಳ್ಳಿಗೆ ಜ.18ರಂದು ರಾತ್ರಿ 8.30ರ ಸುಮಾರಿನಲ್ಲಿ ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್(ಕೆಎ 45 ವಿ 8640)ನಲ್ಲಿ ತೆರಳುತ್ತಿದ್ದಾಗ ಹೂನಾಡಹಳ್ಳಿ ಗೇಟ್ ಬಳಿ ಇಂಡಿಕೇಟರ್ ಹಾಕದೇ ರಸ್ತೆ ಬದಿ ನಿಲ್ಲಿಸಿದ್ದ ಟ್ರ್ಯಾಕ್ಟರ್‌ನ ಟ್ರೇಲರ್‌ಗೆ ಬೈಕ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಈತನನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಆತ ಮೃತಪಟ್ಟಿದ್ದಾನೆ. ಈ ಸಂಬಂಧ ಟ್ರ್ಯಾಕ್ಟರ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಬೈಲುಕುಪ್ಪೆ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಲಾರಿ ಡಿಕ್ಕಿ: ಮೊಪೆಡ್ ಸವಾರ ಸಾವು

ಕ್ರೈಂ ಬಾಕ್ಸ್

ಹುಲ್ಲಹಳ್ಳಿ, ಜ.20–ಮೊಪೆಡ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಮೈಸೂರು–ಹುಲ್ಲಹಳ್ಳಿ ಮುಖ್ಯ ರಸ್ತೆಯಲ್ಲಿರುವ ಕೆಂಬಾಲು ಗ್ರಾಮದಲ್ಲಿ ಸಂಭವಿಸಿದೆ. ನಂಜನಗೂಡು ತಾಲೂಕು ಮಹದೇವನಗರದ ಬಲೂನು ವ್ಯಾಪಾರಿ ರಾಜು(25) ಅಪಘಾತದಲ್ಲಿ ಸಾವನ್ನಪ್ಪಿದ್ದು, ಹಿಂಬದಿ ಸವಾರರಾಗಿದ್ದ ಈತನ ಪತ್ನಿ ಸುಮಿತ್ರಾ(20) ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಉದ್ಬೂರು ಗ್ರಾಮದ ಜಾತ್ರೆಯಲ್ಲಿ ಬಲೂನು ಮಾರಾಟ ಮಾಡಲು ಪತ್ನಿಯೊಂದಿಗೆ ಜ.17ರಂದು ತೆರಳಿದ್ದ ರಾಜು, ಮರು ದಿನ ಬೆಳಗ್ಗೆ 8 ಗಂಟೆ ಸುಮಾರಿನಲ್ಲಿ ಟಿವಿಎಸ್ ಎಕ್ಸೆಲ್ ಹೆವಿ ಡ್ಯೂಟಿ ಮೊಪೆಡ್‌ನಲ್ಲಿ ಪತ್ನಿಯೊಂದಿಗೆ ಉದ್ಬೂರಿನಿಂದ ಸ್ವಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಕೆಂಬಾಲು ಹಾಗೂ ಶ್ರೀರಾಂಪುರ ಗ್ರಾಮಗಳ ನಡುವೆ ಎದುರಿನಿಂದ ಲಾರಿ ಇವರ ಮೊಪೆಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ರಾಜು ಮತ್ತು ಆತನ ಪತ್ನಿ ತೀವ್ರವಾಗಿ ಗಾಯಗೊಂಡಿದ್ದು, ಇವರಿಬ್ಬರನ್ನೂ ಹುಲ್ಲಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು, ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ರಾಜು ಮೃತಪಟ್ಟಿದ್ದಾನೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಟ್ಟಿಗೆ ಕಾರ್ಖಾನೆಯಲ್ಲಿ ಜನರೇಟರ್, ಇನ್ನಿತರೆ ಸಾಮಗ್ರಿ ಕಳವು

ಹುಣಸೂರು, ಜ.20–ಇಟ್ಟಿಗೆ ಕಾರ್ಖಾನೆಯಲ್ಲಿ ಜನರೇಟರ್ ಮತ್ತು ಇಟ್ಟಿಗೆ ಡೈ ಕಳವು ಮಾಡಿರುವ ಘಟನೆ ಹುಣಸೂರಿನ ಡಿ.ಎಲ್.ಬಾರ್ ಹಿಂಭಾಗ ನಡೆದಿದೆ.

ಹುಣಸೂರಿನ ಶಿವಜ್ಯೋತಿನಗರ ನಿವಾಸಿ ಮೊಹಮ್ಮದ್ ಅಜೀಜುಲ್ಲಾ(50) ಎಂಬುವರು ಇಟ್ಟಿಗೆ ಕಾರ್ಖಾನೆ ನಡೆಸುತ್ತಿದ್ದು, ಜ.13ರಂದು ರಾತ್ರಿ ಕೆಲಸ ಮುಗಿಸಿ ಮನೆಗೆ ಹೋಗಿದ್ದು, ಮರು ದಿನ ಬೆಳಗ್ಗೆ 7.30ರ ಸುಮಾರಿನಲ್ಲಿ ಕೆಲಸಗಾರರು ಬಂದಾಗ ಕಾರ್ಖಾನೆಯಲ್ಲಿದ್ದ ಜನರೇಟರ್ ಮತ್ತು ಇಟ್ಟಿಗೆ ತಯಾರಿಸುವ ಡೈ ಕಳುವಾಗಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಅಜೀಜುಲ್ಲಾ ಅವರು ಜ.18ರಂದು ಸಂಜೆ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹುಣಸೂರು ಪಟ್ಟಣ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮತ್ತೊಂದು ಪ್ರಕರಣ: ಗೃಹಿಣಿಯ ಚಿನ್ನದ ಮಾಂಗಲ್ಯ ಸರವನ್ನು ಖದೀಮರು ಕಿತ್ತುಕೊಂಡು ಪರಾರಿಯಾದ ಘಟನೆ ಕೆ.ಆರ್.ನಗರ ಟೌನ್ ಏಳನೇ ರಸ್ತೆಯಲ್ಲಿ ನಡೆದಿದೆ.

ಕೆ.ಆರ್.ನಗರ ಟೌನ್‌ನ ಬಜಾರ್ ರಸ್ತೆ ನಿವಾಸಿ ಮುನಿಯಮ್ಮ(66) ಸರ ಕಳೆದುಕೊಂಡವರಾಗಿದ್ದು, ಇವರು ಜ.18ರಂದು ಬೆಳಗ್ಗೆ ಏಳನೇ ರಸ್ತೆಯಲ್ಲಿರುವ ತಮ್ಮನ ಮನೆಗೆ ಹೋಗಿ ತಮ್ಮ ಮನೆಗೆ ಹಿಂತಿರುಗುತ್ತಿದ್ದ ವೇಳೆ ಎದುರಿಗೆ ಬಂದ ಪಲ್ಸರ್ ಬೈಕ್ ಅವರನ್ನು ದಾಟಿ ನಿಂತಿದೆ. ಅದರ ಹಿಂಬದಿ ಸವಾರ ಓಡಿ ಬಂದು ಮುನಿಯಮ್ಮ ಅವರ ಕತ್ತಿನಲ್ಲಿದ್ದ ಸರವನ್ನು ಕೀಳಲು ಪ್ರಯತ್ನಿಸಿದಾಗ ಅವರು ಅದನ್ನು ಬಲವಾಗಿ ಹಿಡಿದುಕೊಂಡರಾದರೂ, ಕೈಯ್ಯಲ್ಲಿ 4 ರಿಂದ 5 ಗ್ರಾಂ ತೂಕದಷ್ಟು ಸರದ ತುಂಡು ಮಾತ್ರ ಉಳಿದಿದ್ದು, ಸುಮಾರು 25 ಗ್ರಾಂ ಸರ ಖದೀಮನ ಪಾಲಾಗಿದೆ. ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟ ಯತ್ನ: ಇಬ್ಬರ ಬಂಧನ

ಬೇಗೂರು, ಜ.20–ಕಾಳಸಂತೆಯಲ್ಲಿ ಮಾರಾಟ ಮಾಡಲು ಅಕ್ರಮವಾಗಿ ಸಾಗಿಸುತ್ತಿದ್ದ 190 ಕೆ.ಜಿ. ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸುವಲ್ಲಿ ಬೇಗೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರಿನ ಗೌಸಿಯಾನಗರ ನಿವಾಸಿಗಳಾದ ಅಬ್ದುಲ್(33) ಮತ್ತು ಮೊಹಮ್ಮದ್ ಗೌಸ್(19) ಬಂಧಿತರಾಗಿದ್ದು, ಇವರು ಪ್ಯಾಸೆಂಜರ್ ಆಟೋ (ಕೆಎ 09 ಸಿ 6649)ದಲ್ಲಿ ಪಡಿತರ ಅಕ್ಕಿಯನ್ನು ಸಾಗಿಸುತ್ತಿದ್ದ ವೇಳೆ ಮೈಸೂರು–ಊಟಿ ಮುಖ್ಯ ರಸ್ತೆಯಲ್ಲಿರುವ ಚಿಕ್ಕಾಟಿ ಗ್ರಾಮದಲ್ಲಿ ಗಸ್ತಿನಲ್ಲಿದ್ದ ಬೇಗೂರು ಠಾಣೆಯ 112 ಸಹಾಯವಾಣಿ ಪೊಲೀಸರಾದ ಪ್ರಕಾಶ್ ಅವರು ಆಟೋವನ್ನು ತಡೆದು ಸಬ್ ಇನ್ಸ್‌ಪೆಕ್ಟರ್ ಜಗದೀಶ್ ದೂಳಶೆಟ್ಟಿ ಅವರಿಗೆ ಮಾಹಿತಿ ನೀಡಿದ್ದಾರೆ.

ಈ ಮಾಹಿತಿಯನ್ವಯ ಸಬ್ ಇನ್ಸ್‌ಪೆಕ್ಟರ್ ಅವರು ಗುಂಡ್ಲುಪೇಟೆ ತಾಲೂಕು ಆಹಾರ ನಿರೀಕ್ಷಕಿ ಕೆ.ಎಂ.ಭಾರತಿ ಎಎಸ್‌ಐ ಪ್ರಸನ್ನಕುಮಾರ್, ಮುಖ್ಯ ಪೇದೆಗಳಾದ ಗಣೇಶ್, ಮಹದೇವಸ್ವಾಮಿ ಮತ್ತು ಕಾನ್ಸ್‌ಟೇಬಲ್ ಶಿವಕುಮಾರ್ ಅವರೊಂದಿಗೆ ಸ್ಥಳಕ್ಕೆ ತೆರಳಿ ಪಡಿತರ ಅಕ್ಕಿ ಮತ್ತು ಆಟೋವನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳನ್ನು ಆಹಾರ ನಿರೀಕ್ಷಕಿ ಭಾರತಿ ವಿಚಾರಿಸಿದಾಗ ಅವರು ತೊಂಡವಾಡಿ ಮತ್ತು ಚಿಕ್ಕಹುಂಡಿ ಗ್ರಾಮಗಳ ಮನೆಗಳಿಂದ ಕಡಿಮೆ ಬೆಲೆಗೆ ಪಡಿತರ ಅಕ್ಕಿ ಖರೀದಿಸಿ, ಅದನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ಮೈಸೂರಿಗೆ ಕೊಂಡೊಯ್ಯುತ್ತಿರುವುದಾಗಿ ಹೇಳಿಕೆ ನೀಡಿದ್ದಾರೆ ಎಂದು ಭಾರತಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಬೇಗೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಮಾಡಿ 2.10 ಲಕ್ಷ ಕಳೆದುಕೊಂಡ ಕಂದಾಯ ಅಧಿಕಾರಿ!

ಯಳಂದೂರು, ಜ.20–ಹೆಚ್ಚಿನ ಲಾಭದ ಆಸೆಗಾಗಿ ಆನ್‌ಲೈನ್ ಅಪ್ಲಿಕೇಷನ್‌ನಲ್ಲಿ ಹಣ ಹೂಡಿಕೆ ಮಾಡಿದ ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು 2.10 ಲಕ್ಷ ರೂ. ಕಳೆದುಕೊಂಡ ಘಟನೆ ವರದಿಯಾಗಿದೆ.

ಮೈಸೂರಿನ ಬೆಲವತ್ತ ನಿವಾಸಿಯಾಗಿರುವ ಯಳಂದೂರು ತಾಲೂಕು ಕಸಬಾ ಹೋಬಳಿಯ ರೆವೆನ್ಯೂ ಇನ್ಸ್‌ಪೆಕ್ಟರ್ ಎಂ.ಎಸ್.ಯದುಗಿರಿ(52) ಹಣ ಕಳೆದುಕೊಂಡವರಾಗಿದ್ದು, 2022ರ ಡಿಸೆಂಬರ್ ತಿಂಗಳಿನಲ್ಲಿ ಇವರು ಸಾಮಾಜಿಕ ಜಾಲ ತಾಣದಲ್ಲಿ ಎ.ಎಕ್ಸ್. ಫಂಡ್ ಎಂಬ ಆನ್‌ಲೈನ್ ಅಪ್ಲಿಕೇಷನ್‌ನಲ್ಲಿ ಹಣ ಹೂಡಿಕೆ ಮಾಡಿದರೆ 1 ಲಕ್ಷಕ್ಕೆ ದಿನಕ್ಕೆ 4590 ರೂ. ಲಾಭಗಳಿಸಬಹುದು ಎಂಬುದನ್ನು ನೋಡಿ ಅಪ್ಲಿಕೇಷನ್ ಅನ್ನು 2022ರ ಡಿಸೆಂಬರ್ 23ರಂದು ಡೌನ್ ಲೋಡ್ ಮಾಡಿಕೊಂಡಿದ್ದಾರೆ. ನಂತರ ದೊರೆತ ಲಿಂಕ್‌ನಲ್ಲಿ ರಿಜಿಸ್ಟರ್ ಮಾಡಿಕೊಂಡ ಬಳಿಕ 7054018026 ನಂಬರ್‌ನಿಂದ ಪುರಿಂಜೂ ವೆಳಿಯತ್ ಎಂಬಾತ ವಾಟ್ಸಾಪ್ ಸಂದೇಶ ಕಳುಹಿಸಿ ಹಣ ಹೂಡಿಕೆಯ ವಿವರಗಳನ್ನು ನೀಡಿದ್ದಾನೆ. ಇವರು ಜ.3ರವರೆಗೂ ಒಟ್ಟು 2,01,503 ರೂ.ಗಳನ್ನು ಹೂಡಿಕೆ ಮಾಡಿದ್ದು, ಅದೇ ದಿನ ಎ.ಎಕ್ಸ್. ಫಂಡ್ ಆನ್‌ಲೈನ್ ಅಪ್ಲಿಕೇಷನ್ ನಿಷ್ಕ್ರಿಯಗೊಂಡಿದೆ. ಹೀಗಾಗಿ ಅವರು ಪುರಿಂಜೂ ವೆಳಿಯತ್ ಎಂಬಾತನ ಮೊಬೈಲ್‌ಗೆ ಕರೆ ಮಾಡಿದರೆ ರಾಂಗ್ ನಂಬರ್ ಎಂಬ ಉತ್ತರ ಬಂದಿದೆ. ಆನಂತರ ಇವರ ಕರೆಯೇ ಸ್ವೀಕೃತವಾಗುತ್ತಿಲ್ಲ.

ಈ ಸಂಬಂಧ ಯದುಗಿರಿ ಅವರು ಹಣ ಹೂಡಿಕೆ ವಿಚಾರವಾಗಿ ತಮ್ಮನ್ನು ಸಂಪರ್ಕಿಸಿದ್ದ ಪುರಿಂಜೂ ವೆಳಿಯತ್, ಎಸ್ತರ್ ಅಳುರ್ರೈ ಪುಳಿ, ಸುನೀತಾದೇವಿ, ಪ್ರದೀಪ್, ಶನ್‌ಷಾಲ್ ಸೇರಿದಂತೆ ನಾಲ್ವರ ವಿರುದ್ಧ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಚಾಮರಾಜನಗರ ಜಿಲ್ಲಾ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಾಯ್ದೆಯಿಂದ ಮತಾಂತರ ತಡೆ ಸಾಧ್ಯವಿಲ್ಲ: ಸಮಾಜ ಜಾಗೃತಿಯಿಂದ ಮಾತ್ರ ಸಾಧ್ಯ

ಸುತ್ತೂರು ಜಾತ್ರೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಮತ



> ಸುತ್ತೂರು ಮಠದೊಂದಿಗೆ ಮೈಸೂರಿನ ರಾಜಮನೆತನ ಅತ್ಯುತ್ತಮ ಸಂಬಂಧ ಹೊಂದಿದೆ. ಮೈಸೂರಿನ ರಾಜ ಜಯಚಾಮರಾಜ ಒಡೆಯರ್ ಅವರೊಂದಿಗೆ ರಾಜೇಂದ್ರ ಶ್ರೀಗಳು ಉತ್ತಮ ಬಾಂಧವ್ಯ ಹೊಂದಿದ್ದರು. ಅದನ್ನು ಮುಂದುವರೆಸುತ್ತಿರುವುದು ನನಗೆ ಸಂತಸ ತಂದಿದೆ. ಸುತ್ತೂರು ಜಾತ್ರಾ ಮಹೋತ್ಸವ ಅತ್ಯಂತ ವಿಜೃಂಭಣೆಯಿಂದ ನಡೆದು ಧಾರ್ಮಿಕತೆಯ ಜೊತೆಗೆ ಜನರಿಗೆ ಜಾಗೃತಿ ಮೂಡಿಸುತ್ತಿದೆ.
> **–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜವಂಶಸ್ಥ.**

ನಂಜನಗೂಡು, ಜ.20– ಮತಾಂತರ ನಿಷೇಧ ಕಾಯ್ದೆಯಿಂದ ಮತಾಂತರ ನಿಲ್ಲುವುದಿಲ್ಲ. ಬದಲಿಗೆ ಮಠಮಾನ್ಯಗಳು ನಿರಾಶ್ರಿತರಿಗೆ, ದಲಿತರಿಗೆ, ಹಿಂದುಳಿದವರಿಗೆ ಆಶ್ರಯ ನೀಡುವ ಮೂಲಕ ಸಮಾಜವನ್ನು ಜಾಗೃತಗೊಳಿಸಿ ತಿಳುವಳಿಕೆ ಮೂಡಿಸುವ ಕೆಲಸ ಮಾಡುವುದರಿಂದ ಮತಾಂತರ ಶಾಶ್ವತವಾಗಿ ನಿಲ್ಲಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಶ್ರೀಕ್ಷೇತ್ರ ಸುತ್ತೂರಿನಲ್ಲಿ ಆದಿಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ರಥೋತ್ಸವ ಮತ್ತು ಕಟ್ಟಡಗಳ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಮತ್ತೆ ಹಿಂದೂ ಧರ್ಮಕ್ಕೆ ಕರೆತನ್ನಿ: ಅನಿವಾರ್ಯ ಕಾರಣಗಳಿಂದ ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಮತಾಂತರವಾಗಲು ಅವಕಾಶ ನೀಡದೆ ಜನರಿಗೆ ತಿಳುವಳಿಕೆ ಮೂಡಿಸಬೇಕು ಮತ್ತು ಹಿಂದೂ ಧರ್ಮ ತ್ಯಜಿಸಿರುವವರನ್ನು ಮತ್ತೆ ಹಿಂದೂ ಧರ್ಮಕ್ಕೆ ಕರೆತರುವ ಕಾರ್ಯ ಮಾಡಬೇಕು ಎಂದರು.

ಮಠಮಾನ್ಯಗಳು ಗ್ರಾಮೀಣ ಭಾಗದಲ್ಲಿ ಸರ್ಕಾರ ಒದಗಿಸಿದ ಹಲವು ಸೇವೆ ನೀಡುವ ಮೂಲಕ ಜನಮಾನಸದಲ್ಲಿ ಬೇರೂರಿದೆ. ಆದ್ದರಿಂದಲೇ ಬಜೆಟ್‌ನಲ್ಲಿ ಮಠಗಳಿಗೆ ಅನುದಾನ ನೀಡುವುದನ್ನು ಆರಂಭಿಸಿದೆ. ಅದನ್ನು ಈಗಿನ ಸರ್ಕಾರಗಳೂ ಮುಂದುವರೆಸಿರುವುದು ಸಂತಸ ತಂದಿದೆ. ಜೆಎಸ್ಎಸ್ ಮಠ ಜಾತ್ರಾ ಮಹೋತ್ಸವ ಮೂಲಕ ಗ್ರಾಮೀಣ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿ ರೈತರಿಗೆ ತಂತ್ರಜ್ಞಾನ, ಆಧುನಿಕತೆಯ ಅರಿವು ಮೂಡಿಸುತ್ತಿದೆ ಎಂದರು.

ಪ್ರಧಾನಿ ಮೋದಿ ಮತ್ತೊಮ್ಮೆ ಪ್ರಧಾನಿಯಾಗಲಿ: ಶ್ರೀಲಂಕಾ, ಪಾಕಿಸ್ತಾನ ಅವನತಿಯತ್ತ ಸಾಗುತ್ತಿವೆ. ಮಠಮಾನ್ಯಗಳ ಧಾರ್ಮಿಕ ನೆಲೆಗಟ್ಟಿನ ಕಾರಣದಿಂದ ಹಾಗೂ ಪ್ರಧಾನಿ ಮೋದಿ ಅವರ ಸಮರ್ಥ ನಾಯಕತ್ವದಿಂದಾಗಿ ಭಾರತ ಪ್ರಪಂಚದಲ್ಲೇ ಬಲಿಷ್ಠ ರಾಷ್ಟ್ರವಾಗಿ ವಿಶ್ವಗುರುವಾಗುವತ್ತ ಹೆಜ್ಜೆ ಇಟ್ಟಿದೆ. ಪ್ರಧಾನಿ ಮೋದಿ ಒಂದು ದಿನವೂ ರಜೆ ತೆಗೆದುಕೊಳ್ಳದೆ ರೈತರ ಕಲ್ಯಾಣಕ್ಕಾಗಿ ಅನೇಕ ಯೋಜನೆ ರೂಪಿಸಿ ಅವರ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಪ್ಲಾಸ್ಟಿಕ್ ತ್ಯಜಿಸಿ: ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಯಥೇಚ್ಛವಾದ ಪ್ಲಾಸ್ಟಿಕ್ ಬಳಕೆಯಿಂದ ನದಿಗಳು, ಮಣ್ಣು, ಪರಿಸರ ಮಾಲಿನ್ಯ ಹೆಚ್ಚಾಗಿದೆ. ಜೊತೆಗೆ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಲಿದೆ. ಹಿರಿಯರು ಕೊಡುಗೆಯಾಗಿ ನೀಡಿದ ನಮ್ಮ ಉತ್ತಮ ಪರಿಸರವನ್ನು ಮುಂದಿನ ಪೀಳಿಗೆಗೂ ಉಳಿಸುವುದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ನಾವೆಲ್ಲರೂ ಕೂಡ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕು ಎಂದರು.

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಮಾತನಾಡಿ, ಸುತ್ತೂರು ಜಾತ್ರೆ ವೈಶಿಷ್ಟ ಪೂರ್ಣವಾಗಿದ್ದು ಇಡೀ ದೇಶಕ್ಕೆ ಮಾದರಿಯಾದ ಜಾತ್ರೆಯಾಗಿದೆ ಎಂದರು.

ವಿಶ್ವವಾಣಿ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಸುತ್ತೂರು ಮಠ ದೊಡ್ಡ ಹೆಮ್ಮರವಾಗಿ ಇಡೀ ಸಮಾಜವನ್ನು ಆವರಿಸುವ ಮೂಲಕ ಆಶ್ರಯ ಕಲ್ಪಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಹೊಸದುರ್ಗ ಭಗೀರಥ ಉಪ್ಪಾರ ಪೀಠದ ಶ್ರೀಪುರುಷೋತ್ತಮನಂದಪುರಿ ಸ್ವಾಮೀಜಿ ಶುಭ ಸಂದೇಶ ನೀಡಿದರು. ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಕರ್ನಾಟಕ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾ.ಪು. ಸಿದ್ದಲಿಂಗಸ್ವಾಮಿ, ವೀಣಾ ತೋಟಕುರ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮ ಶೇಖರ್, ವೆಂಕಟೇಶ್ ಹೊಸಬಾಳೆ, ಅಶ್ವಿನಿ ಸಿದ್ದರಾಮಪ್ಪ ಇದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಪುಸ್ ಇನ್ ಬೂಟ್ಸ್ ದಿ ಲಾಸ್ಟ್ ವಿಶ್ (3ಡಿ)(ಇಂ): ಬೆ.11.20ಕ್ಕೆ, ಸಂ.5.10ಕ್ಕೆ, ರಾ.7.25ಕ್ಕೆ, ರಾ.9.40ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ) (ಇಂ): ಮ.1.30ಕ್ಕೆ.

ಸ್ಕ್ರೀನ್ 2 ಆಯಿಷ (ಮ): ಬೆ.10.25ಕ್ಕೆ, ಕಾಕಿಪದ (ಮ): ಮ.1.20ಕ್ಕೆ, ವಾಲ್ತೆರ್ ವೀರಯ್ಯ (ತೆ): ಸಂ.4ಕ್ಕೆ, ವಾರಿಸು (ತ): ರಾ.7ಕ್ಕೆ, ರಾ.10.10ಕ್ಕೆ.

ಸ್ಕ್ರೀನ್ 3 ಹುಷಾರ್ (ಕ): ಬೆ10.10ಕ್ಕೆ, ವೇದ (ಕ): ಮ.1.10ಕ್ಕೆ, ತುನಿವು (ತ): ಸಂ.4.10ಕ್ಕೆ, ಆರ್ಕೆಸ್ಟ್ರಾ ಮೈಸೂರು (ಕ): ರಾ.7ಕ್ಕೆ, ನನ್ಪಕಲ್ ನೆರತು ಮಾಯಕ್ಕಲ್ (ಮ): ರಾ.10.15ಕ್ಕೆ.

ಸ್ಕ್ರೀನ್ 4 ವಾರಿಸು (ತ): ಮ.12.50ಕ್ಕೆ, ಸಂ.4.05ಕ್ಕೆ, ತುನಿವು (ತ): ರಾ.7.20ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ವಾಲ್ತೆರ್ ವೀರಯ್ಯ (ತೆ): ಬೆ.10.10ಕ್ಕೆ, ಪುಸ್ ಇನ್ ಬೂಟ್ಸ್ ದಿ ಲಾಸ್ಟ್ ವಿಶ್ (3ಡಿ)(ಇಂ): ಮ.1.30ಕ್ಕೆ, ವಾರಿಸು (ತ): ಮ.3.45ಕ್ಕೆ, ವೇದ (ಕ): ರಾ.7.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ರಾ.10.20ಕ್ಕೆ.

ಸ್ಕ್ರೀನ್ 2 ವಾರಿಸು (ತ): ಬೆ.11ಕ್ಕೆ, ಸಂ.5.35ಕ್ಕೆ, ವೇದ (ಕ): ಮ.2.25ಕ್ಕೆ, ತುನಿವು (ತ): ರಾ.9ಕ್ಕೆ.

ಸ್ಕ್ರೀನ್ 3 ತುನಿವು (ತ): ಬೆ.10ಕ್ಕೆ, ಸಂ.4.15ಕ್ಕೆ, ವಾಲ್ತೆರ್ ವೀರಯ್ಯ (ತೆ): ಮ.1ಕ್ಕೆ, ರಾ.7.15ಕ್ಕೆ, ವಾರಿಸು (ತ): ರಾ.10.30ಕ್ಕೆ.

ಸ್ಕ್ರೀನ್ 4 ಪುಸ್ ಇನ್ ಬೂಟ್ಸ್ ದಿ ಲಾಸ್ಟ್ ವಿಶ್ (3ಡಿ)(ಇಂ): ಬೆ.10.45ಕ್ಕೆ, ಸಂ.4.50ಕ್ಕೆ, ರಾ.7.05ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.1ಕ್ಕೆ, ರಾ.9.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ10.40ಕ್ಕೆ, ಬನಾರಸ್ (ಕ): ಮ1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾರಿಸು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೇದ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸನ್‌ಸನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕುಟ್ಟೆ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ತುನಿವು (ತ)	4 ಪ್ರದರ್ಶನಗಳು
ಗಾಯಿತ್ರಿ	
ತುನಿವು (ತ)	4 ಪ್ರದರ್ಶನಗಳು
ರಾಜ್‌ಕಮಲ್	
ತುನಿವು (ತ)	4 ಪ್ರದರ್ಶನಗಳು
ಸಂಗಂ	
ವಾಲ್ಟರ್ ವೀರಯ್ಯ (ತೆ)	2 ಪ್ರದರ್ಶನಗಳು
ವಾರಿಸು (ತ)	2 ಪ್ರದರ್ಶನಗಳು
ಲಿಡೋ	
ವೀರಸಿಂಹ ರೆಡ್ಡಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ತುನಿವು (ತ)	4 ಪ್ರದರ್ಶನಗಳು
ಪ್ರಭಾ	
ಬೇಬಿ ಮಿಸ್ಸಿಂಗ್ (ಕ) ಲವ್ ಸ್ಟೋರಿ–1998 (ಕ)	2 ಪ್ರದರ್ಶನಗಳು

1.27 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ



ಹುಣಸೂರು, ಜ.20– ತಾಲೂಕಿನ ವಿವಿಧ ಗ್ರಾಮಗಳಲ್ಲಿ ಆರ್‌ಡಿಪಿಆರ್ ಮತ್ತು ಮಲೆನಾಡು ಅಭಿವೃದ್ಧಿ ಯೋಜನೆಯಡಿ 1.27 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು.

ಬಿಳಿಕೆರೆ ಹೋಬಳಿ ಕುಪ್ಪೆ ಗ್ರಾಮದಲ್ಲಿ ಆರ್‌ಡಿಪಿಆರ್ ಇಲಾಖೆಯ 50:54 ಯೋಜನೆಯಡಿ 27 ಲಕ್ಷ ರೂ., ಕೆಬ್ಬೆಕೊಪ್ಪಲು ಗ್ರಾಮದಲ್ಲಿ 18 ಲಕ್ಷ ರೂ., ಕೊಳಗಟ್ಟ ಗ್ರಾಮದಲ್ಲಿ 20 ಲಕ್ಷ ರೂ., ಮಲೆನಾಡು ಅಭಿವೃದ್ಧಿ ಯೋಜನೆಯಡಿ ಮಧುಗಿರಿ ಕೊಪ್ಪಲು ಗ್ರಾಮದಲ್ಲಿ 38 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ, ಕಾಳೇಗೌಡನಕೊಪ್ಪಲು ಗ್ರಾಮದಲ್ಲಿ ಮಾತನಾಡಿದ ಅವರು, ಕೋವಿಡ್ ನೆಪದಲ್ಲಿ ರಾಜ್ಯ ಸರ್ಕಾರ ಎರಡೂವರೆ ವರ್ಷ ತಾಲೂಕಿಗೆ ಅನುದಾನ ನೀಡದೆ ಇದೀಗ ಹಿಂದಿನ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸುತ್ತಿದೆ. ಪ್ರತಿ ಹಳ್ಳಿಗಳಿಗೂ ಮುಖ್ಯರಸ್ತೆ ಸಂಪರ್ಕ ಕಲ್ಪಿಸುವ ಯೋಜನೆ ಬಹುತೇಕ ಪೂರ್ಣಗೊಂಡಿದೆ. ಸಾಮಾಜಿಕ ನ್ಯಾಯದಡಿ ಎಲ್ಲರಿಗೂ ಸರ್ಕಾರಿ ಸವಲತ್ತು ಒದಗಿಸಲು ಶ್ರಮಿಸಿದ್ದೇನೆ. ಆರೋಗ್ಯ, ಶಿಕ್ಷಣ ಮತ್ತು ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ತಾಲೂಕು ಮಹತ್ತರ ಬದಲಾವಣೆ ಕಾಣುತ್ತಿದೆ ಎಂದರು. ಈ ವೇಳೆ ಮರದೂರು ಗ್ರಾಪಂ ಅಧ್ಯಕ್ಷ ಗುರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾರಾಯಣ್, ರಮೇಶ್, ದೇವರಾಜ್, ಮುಖಂಡರಾದ ದೇವರಾಜೇಗೌಡ, ಚೆನ್ನೇಗೌಡ, ಸುರೇಶ್, ಮಾದೇಗೌಡ, ಶಿವಕುಮಾರ್, ವೆಂಕಟೇಶಚಾರಿ, ವಿಜಯಕುಮಾರ್, ಲೋಕೇಶ್, ರೇವಣ್ಣ ಆಚಾರಿ, ಕೃಷ್ಣೇಗೌಡ, ಶಿವೇಗೌಡ, ಗೀತಾ, ಶಿವರಾಜು, ಚೆನ್ನಯ್ಯ, ಶಂಕರ್, ಕುಮಾರ್, ರವಿ ಇತರರಿದ್ದರು.

ಇಂದು ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ



ತಿ.ನರಸೀಪುರ, ಜ.20– ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನಾಳೆ (ಜ.21) ಬಿಜೆಪಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ವರುಣಾ ಬಿಜೆಪಿ ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯ ಕುಮಾರ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ನಾಯಕರ ಸೂಚನೆ ಮೇರೆಗೆ ಜ.21ರಿಂದ 9 ದಿನ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರದ ಸಾಧನೆಗಳನ್ನು ಪ್ರತಿ ಮನೆಯ ಪ್ರತಿ ಮತದಾರನಿಗೆ ಮನದಟ್ಟು ಮಾಡಿ ಕೊಡುವ ಉದ್ದೇಶದಿಂದ ಹಮ್ಮಿಕೊಂಡಿರುವ ವಿಜಯ ಸಂಕಲ್ಪ ಅಭಿಯಾನ ವರುಣಾ ಕ್ಷೇತ್ರದಲ್ಲಿಯೂ ನಡೆಯಲಿದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದು, ಸಂಸದ ವಿ.ಶ್ರೀನಿವಾಸ ಪ್ರಸಾದ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಕ್ಷೇತ್ರದ ಪ್ರತಿ ಬೂತ್‌ನಲ್ಲಿ ಡಬಲ್ ಇಂಜಿನ್ ಸರ್ಕಾರದ ಸಾಧನೆಗಳ ಕರಪತ್ರಗಳನ್ನು ಮನೆ ಮನೆಗೆ ತಲುಪಿಸಿ, ಮತದಾರರಿಗೆ ಸಾಧನೆಗಳ ಬಗ್ಗೆ ಮನದಟ್ಟು ಮಾಡಿಸಿ ಹೆಚ್ಚಿನ ಮತ ಪಕ್ಷದ ಕಡೆಗೆ ವಾಲುವಂತೆ ಮಾಡುವ ಉದ್ದೇಶ ಕಾರ್ಯಕ್ರಮದ್ದಾಗಿದೆ. ಕಿಸಾನ್ ಸಮ್ಮಾನ್, ರಸ್ತೆ ಅಭಿವೃದ್ಧಿ, ವಿಮಾ ಯೋಜನೆ, ವಿದ್ಯಾಸಿರಿ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಕಾರ್ಯಕರ್ತರು ಮನೆ–ಮನೆಗೆ ಭೇಟಿ ನೀಡಲಿದ್ದಾರೆ. ಈ ಬಾರಿ ಬೂತ್ ಅಭಿಯಾನ ಕಾರ್ಯಕ್ರಮ ಕ್ಷೇತ್ರದಲ್ಲಿ ಯಶಸ್ವಿಯಾಗಿ ನಡೆದಿದೆ. ಈಗ 9 ದಿನ ನಡೆಯುವ ವಿಜಯ ಸಂಕಲ್ಪ ಅಭಿಯಾನವನ್ನು ಬೂತ್ ಮಟ್ಟದಲ್ಲಿ ಯಶಸ್ವಿಗೊಳಿಸಲಾಗುವುದು ಎಂದರು.

ಮೊಬೈಲ್ ಮೂಲಕ ಸದಸ್ಯತ್ವ ಅಭಿಯಾನ: ಇದೇ 21 ರಿಂದ ಪಕ್ಷ ಹೊಸದಾಗಿ ಸದಸ್ಯತ್ವ ನೋಂದಣಿ ಆರಂಭಿಸಲಿದೆ. ಪ್ರಪಂಚದಲ್ಲೇ ಹೆಚ್ಚು ಕಾರ್ಯಕರ್ತರನ್ನು ಹೊಂದಿರುವ ಪಕ್ಷ ನಮ್ಮದಾಗಿದ್ದು, ಕಳೆದ ಬಾರಿ 18 ಕೋಟಿ ಸದಸ್ಯತ್ವ ಹೊಂದಿ ದಾಖಲೆ ನಿರ್ಮಿಸಿತ್ತು. ಅದೇ ರೀತಿ ಈ ಬಾರಿ ಸದಸ್ಯತ್ವ ಅಭಿಯಾನ ಆರಂಭಿಸ ಲಾಗಿದ್ದು, ಮೊಬೈಲ್‌ನಲ್ಲಿ ಮಿಸ್ಡ್ ಕಾಲ್ ನೀಡುವ ಮೂಲಕ ಸದಸ್ಯತ್ವ ನೋಂದಣಿ ಮಾಡಿಕೊಳ್ಳಲಾಗುತ್ತದೆ ಎಂದರು.

ವಿಜಯ ಸಂಕಲ್ಪ ಅಭಿಯಾನದ ಸಂಚಾಲಕ ಚಿನ್ನಂಬಳ್ಳಿ ಮಂಜುನಾಥ್, ಜಿಲ್ಲಾ ಕಾರ್ಯದರ್ಶಿಗಳಾದ ಎನ್.ರಂಗೂನಾಯಕ್, ವೆಂಕಟರಮಣ ಶೆಟ್ಟಿ, ಯುವ ಮೋರ್ಚಾ ಅಧ್ಯಕ್ಷ ಮೋಹನ್ ಇದ್ದರು.

ಹಾಡಹಗಲೇ ಮನೆಗೆ ನುಗ್ಗಿ ಚಿನ್ನಾಭರಣ ಕಳವು

ಪೊಲೀಸರಿಂದ ಆರೋಪಿ ಬಂಧನ

ಸರಗೂರು, ಜ.20– ಖದೀಮನೋರ್ವ ಹಾಡಹಗಲೇ ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಪಟ್ಟಣದ ಒಂದನೇ ವಾರ್ಡ್‌ನಿಂದ ವರದಿಯಾಗಿದೆ.

ಪಟ್ಟಣದ ವರ್ತಕ ಮಂಡಳಿ ಉಪಾಧ್ಯಕ್ಷ ಎಸ್.ವಿ.ವೇಣುಗೋಪಾಲ್ ಎಂಬುವರ ಮನೆಯಲ್ಲೇ ಕಳ್ಳತನ ನಡೆದಿರುವುದು. ಜ.13ರಂದು ಮಧ್ಯಾಹ್ನ ಪಟ್ಟಣದ ಎಸ್.ಎಸ್.ಮಂಜುನಾಥ್ ಅಲಿಯಾಸ್ ತರಕಾರಿ ಮಂಜು ಎಂಬಾತ ವೇಣುಗೋಪಾಲ್ ಅವರ ಮನೆಗೆ ನುಗ್ಗಿ, ಬೀರುವಿನಲ್ಲಿದ್ದ ಚಿನ್ನದ ಸರ, ಉಂಗುರಗಳು ಹಾಗೂ 15 ಸಾವಿರ ರೂ. ನಗದು ಕಳವು ಮಾಡಿ ಪರಾರಿಯಾಗುತ್ತಿದ್ದ ವೇಳೆ ಬಟ್ಟೆ ತೊಳೆಯುತ್ತಿದ್ದ ವೇಣುಗೋಪಾಲ್ ಪತ್ನಿ ಎಸ್.ಆರ್.ಪೂರ್ಣಿಮಾ ಮಂಜುನಾಥ್‌ನನ್ನು ನೋಡಿ ಕೂಗಿಕೊಂಡಿದ್ದು, ಅಲ್ಲಿಂದ ಆತ ಪರಾರಿಯಾಗಿದ್ದ. ಈ ಸಂಬಂಧ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸಿಪಿಐ ಲಕ್ಷ್ಮಿಕಾಂತ್ ಅವರ ನಿರ್ದೇಶದ ಮೇರೆಗೆ ಸಿಸಿಟಿವಿ ಫುಟೇಜ್ ಪರಿಶೀಲಿಸಿದ ಎಸ್‌ಐ ಗೋಪಾಲ್ ನೇತೃತ್ವದ ತಂಡ ದೂರು ದಾಖಲಾದ 24 ಗಂಟೆಯೊಳಗಾಗಿ ಆರೋಪಿ ಮಂಜುನಾಥ್‌ನನ್ನು ಬಂಧಿಸಿ ವಿಚಾರಣೆ ನಡೆಸಿ 95 ಸಾವಿರಕ್ಕೆ ಮುತ್ತೂಟ್ ಫೈನಾನ್ಸ್‌ನಲ್ಲಿ ಇಟ್ಟಿದ್ದ ಚಿನ್ನದ ಸರ ಹಾಗೂ ಪಟ್ಟಣದ ಪ್ರಿಯಾಂಕ ಜುವೆಲರ್ಸ್‌ನಲ್ಲಿ 53 ಸಾವಿರಕ್ಕೆ ಇಟ್ಟಿದ ಉಂಗುರಗಳನ್ನು ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಎಸ್‌ಐ ಲಿಂಗರಾಜು, ದಫೇದಾರ್ ಶಿವಕುಮಾರ್, ನಾಗನಾಯಕ, ಇಮ್ರಾನ್, ಕೃಷ್ಣಯ್ಯ, ಜಗದೀಶ್, ದೇವರಾಜು, ಆನಂದ್ ಇದ್ದರು.

ಹಿರಿಯ ಸಮಾಜವಾದಿ ಪ.ಮಲ್ಲೇಶ್‌ಗೆ ಶ್ರದ್ಧಾಂಜಲಿ



ಹೆಚ್.ಡಿ.ಕೋಟೆ, ಜ.20– ಹಿರಿಯ ಸಮಾಜವಾದಿ ಪ.ಮಲ್ಲೇಶ್ ನಿಧನಕ್ಕೆ ತಾಲೂಕು ಕಸಾಪ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಶುಕ್ರವಾರ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಲ್ಲೇಶ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನುಡಿ ನಮನ ಸಲ್ಲಿಸಲಾಯಿತು.

ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿ, ಸಮಸಮಾಜ ನಿರ್ಮಾಣವಾಗಬೇಕು ಎಂದು ಪ.ಮಲ್ಲೇಶ್ ಅವರು ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ರಾಮ ಮನೋಹರ್ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಅವರ ಮೌಲ್ಯ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡು ಅದರಂತೆ ನಡೆದರು. ಹಾಗೆ ಕನ್ನಡನಾಡು, ನುಡಿ, ಭಾಷೆ ಬಗ್ಗೆ ಅಭಿಮಾನ ಹೊಂದಿದ್ದ ಅವರು, ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲೇ ಆಗಬೇಕು. ಎನ್‌ಟಿಎಂಎಸ್ ಶಾಲೆ ಉಳಿಯಬೇಕು ಎಂದು ತಮ್ಮ ಕನ್ನಡ ಕ್ರಿಯಾ ಸಮಿತಿಯಿಂದ ಹಲವಾರು ಹೋರಾಟ ಮಾಡಿದರು. ಮೈಸೂರಲ್ಲಿ ಬಡವರು ಹಾಗೂ ಹಿಂದುಳಿದ ವರ್ಗದ ಮಕ್ಕಳಿಗಾಗಿ ನೃಪತುಂಗ ಶಾಲೆ ತೆರೆದು ನೆರವಾದರು ಎಂದು ಸ್ಮರಿಸಿದರು.

ಇದೇ ಸಂದರ್ಭ ಕಸಾಪ ತಾಲೂಕು ಸಮ್ಮೇಳನ ಆಯೋಜಿಸುವ ಕುರಿತು ಸದಸ್ಯರೊಂದಿಗೆ ಚರ್ಚಿಸಲಾಯಿತು. ಕಳೆದ ಸಾಲಿನಲ್ಲಿ ನಡೆದ ಜಿಲ್ಲಾ ಕಸಾಪ ಸಮ್ಮೇಳನದ ಖರ್ಚು ವೆಚ್ಚದ ವಿವರ ನೀಡಲಾಯಿತು.

ತಾಲೂಕು ಸಮ್ಮೇಳನವನ್ನು ಶಾಸಕ ಅನಿಲ್ ಚಿಕ್ಕಮಾದು ಅವರ ಸೂಚನೆಯಂತೆ ಫೆ.15 ರಂದು ತಾಲೂಕಿನ ಅಂತರಸಂತೆ ಹೋಬಳಿ ಕೇಂದ್ರದಲ್ಲಿ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಗ್ರೇಡ್–2 ತಹಸೀಲ್ದಾರ್ ಸಣ್ಣ ರಾಮಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಎಸ್.ಮಹದೇವು, ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಕಸಾಪ ಗೌರವ ಕಾರ್ಯದರ್ಶಿ ಗಿರೀಶ್ ಮೂರ್ತಿ, ಕಸಬಾ ಹೋಬಳಿ ಘಟಕದ ಅಧ್ಯಕ್ಷ ಕಾಳೇಗೌಡ, ಮುಖಂಡರಾದ ಹೊ.ಕೆ.ಮಹೇಂದ್ರ, ಶಿವಯ್ಯ, ಉಮೇಶ, ರಘುರಾಮ್, ಶ್ರೀಕಾಂತ್, ದೇವನಾಯಕ, ಸದಾಶಿವ, ಶ್ರೀನಿವಾಸ್ ಇದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕೆ.ಆರ್.ನಗರ, ಜ.20– ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದಿಂದ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜ.23 ಕೊನೆ ದಿನ. ಹೆಚ್ಚಿನ ಮಾಹಿತಿಗೆ ಮೊ: 9945309169, 9632400409, 9880178984 ಸಂಪರ್ಕಿಸುವಂತೆ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಬಿ.ಟಿ.ಗೋವಿಂದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಲಕಾಡಿನ ಸಮಗ್ರ ಅಭಿವೃದ್ಧಿ ಕನಸು ನನಸಾಗಲಿಲ್ಲ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಸಮಾಧಾನ



> **ಹಲವು ಗೊಂದಲಗಳಿಂದ ಕ್ಷೇತ್ರದಲ್ಲಿ ಕಳೆದ ಬಾರಿ ಕಾಂಗ್ರೆಸ್ ಪರಾಭವಗೊಂಡಿತು. ಪ್ರಸ್ತುತ ಕಾರ್ಯಕರ್ತರು ಮತ್ತು ಮತದಾರರು ಕಾಂಗ್ರೆಸ್ ಪರವಾಗಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯಕರ್ತರು ಕಾರ್ಯ ನಿರ್ವಹಿಸಬೇಕು. - ಸುನೀಲ್ ಬೋಸ್,**
> *ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿ.*

ತಿ.ನರಸೀಪುರ, ಜ.20– ಐತಿಹಾಸಿಕ ಹಿನ್ನೆಲೆಯುಳ್ಳ ತಲಕಾಡನ್ನು ಪ್ರಮುಖ ಪ್ರವಾಸಿತಾಣವಾಗಿಸುವ ಸಂಪೂರ್ಣ ಜವಾಬ್ದಾರಿ ನನ್ನ ಮೇಲಿತ್ತು. ಕಳೆದ ಚುನಾವಣೆ ಸೋಲಿನಿಂದ ಪ್ರವಾಸಿತಾಣವೊಂದನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಕನಸು ಸಾಕಾರಗೊಳ್ಳಲಿಲ್ಲ ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನ ತಲಕಾಡು ಗ್ರಾಮದ ಶ್ರೀ ಶಿವ ಪಾರ್ವತಿ ಮಂಗಳ ಮಂದಿರದಲ್ಲಿ ನಡೆದ ಗ್ರಾಪಂ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಅಧಿಕಾರವಧಿಯಲ್ಲಿ ಗ್ರಾಮದಲ್ಲಿ ಒಳಚರಂಡಿ, ಸುಸಜ್ಜಿತ ಪ್ರವಾಸಿ ಮಂದಿರ ಸೇರಿದಂತೆ ಪ್ರವಾಸಿ ಸ್ಥಳಗಳನ್ನು ನವೀನ ಮಾದರಿಯಲ್ಲಿ ಅಭಿವೃದ್ಧಿ ಪಡಿಸುವ ನೀಲನಕ್ಷೆ ಸಿದ್ಧಪಡಿಸಲಾಗಿತ್ತು ಎಂದ ಅವರು, ಬಾಕಿ ಅಭಿವೃದ್ಧಿ ಕೆಲಸವನ್ನು ಚುನಾವಣೆ ಬಳಿಕ ಎಲ್ಲರೂ ಒಗ್ಗೂಡಿ ಮುಂದುವರೆಸೋಣ ಎಂದರು.

ಕ್ಷೇತ್ರದ ಮತದಾರರ ಬೆಂಬಲದಿಂದ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ. ಪ್ರಜಾಪ್ರಭುತ್ವದ ಆಶಯ ಈಡೇರಲು ದೇಶ ಸರ್ವತೋಮುಖ ಅಭಿವೃದ್ಧಿಯಾಗಬೇಕು. ಶಿಕ್ಷಣ, ಉದ್ಯೋಗ, ಆರೋಗ್ಯ ಮತ್ತು ಮೂಲ ಸೌಕರ್ಯಗಳಿಗೆ ನಾಗರಿಕರು ಪರದಾಡುವಂತಾಗಬಾರದು. ದೇಶದ ಪ್ರತಿ ನಾಗರಿಕನ ಆರ್ಥಿಕ ಸದೃಢತೆ ಕಾಣಬೇಕಾದಲ್ಲಿ ಹಲವು ಜನಪರ ಯೋಜನೆಗಳನ್ನು ಸರ್ಕಾರ ಜಾರಿಗೆ ತರಬೇಕಾಗುತ್ತದೆ ಎಂದರು. ಸಭೆಯಲ್ಲಿ ಮುಂಬರುವ ಚುನಾವಣೆಗೆ ಕಾರ್ಯಕರ್ತರನ್ನು ಜಾಗೃತಗೊಳಿಸುವುದು ಸೇರಿದಂತೆ ಸರ್ಕಾರದ ವೈಫಲ್ಯಗಳನ್ನು ಕ್ಷೇತ್ರದ ಜನತೆಗೆ ಮನದಟ್ಟು ಮಾಡುವುದು. ಕಳೆದ ಅವಧಿಯಲ್ಲಿ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಬಗ್ಗೆ ಪರಾಮರ್ಶೆ ನಡೆಸಲಾಯಿತು.

ಈ ವೇಳೆ ತಾಪಂ ಮಾಜಿ ಸದಸ್ಯ ನರಸಿಂಹ ಮಾದನಾಯಕ, ವಿಜಯ್ ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಣ್ಣಿ, ಮೋಹನ್ ನಾಯಕ, ನಾಗರಾಜು, ವಸಂತ, ಮಹೇಂದ್ರ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪಾರ್ವತಮ್ಮ, ಚೇತನ್ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದಕ್ಕೂ ಮುನ್ನ ಗ್ರಾಪಂ ಸದಸ್ಯ ಮೇದನಿ ಕುಮಾರ್ ಕಾಂಗ್ರೆಸ್ ಬಾವುಟದ ತ್ರಿವರ್ಣ ಬಣ್ಣದ ಭಾರೀ ಗಾತ್ರದ ಹೂವಿನ ಹಾರ ಹಾಕಿ ಹೆಚ್.ಸಿ.ಮಹದೇವಪ್ಪ ಹಾಗೂ ಯುವ ಮುಖಂಡ ಸುನೀಲ್ ಬೋಸ್ ಅವರನ್ನು ಅಭಿನಂದಿಸಿದರು. ಜೆಡಿಎಸ್ ಮುಖಂಡರಾದ ಹೂವಯ್ಯ, ಸಾದಿಕ್ ಪಾಷ, ಬಂಗಾರಿ, ಬಸವಣ್ಣ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸರಾಜು, ಜಿಪಂ ಮಾಜಿ ಅಧ್ಯಕ್ಷೆ ಲತಾಸಿದ್ದಶೆಟ್ಟಿ, ಗ್ರಾಪಂ ಅಧ್ಯಕ್ಷ ಕೆಂಪಯ್ಯ, ಎಸ್ಸಿ ಬ್ಲಾಕ್ ಅಧ್ಯಕ್ಷ ಹಸ್ತಿಕೇರಿ ನಾಗರಾಜು, ಮುಖಂಡರಾದ ನಾಗೇಂದ್ರ ಕುಮಾರ್, ಜಗದೀಶ್, ಮೂರ್ತಿ, ನಾಗೇಶ್, ಟೈಲರ್ ಕೆಂಪರಾಜು, ದುಂಡಯ್ಯ, ಶೇಷಯ್ಯ ಮತ್ತಿತರರಿದ್ದರು.

ಎಲ್ಲರೂ ಒಂದಾಗಿ ಬದುಕುವುದೇ ಧರ್ಮ

ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಭಾಷಣಕ್ಕೆ ಸೀಮಿತವಾಗಬಾರದು: ಮಾಜಿ ಸಿಎಂ ಸಿದ್ದರಾಮಯ್ಯ



> **ಗ್ರಾಮೀಣ ಜನರು ಚೆಂಡಾಟ, ಅಳಿಗುಳಿ ಮನೆ, ಗಟ್ಟೆ ಮನೆ, ಹುಲಿ ಕಲ್ಲುಗಳಂತಹ ದೇಸಿ ಆಟಗಳನ್ನು ಮರೆತಿದ್ದಾರೆ. ಶ್ರೀಮಠ ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕ ನೆಲೆಗಟ್ಟಿನಲ್ಲಿ ಜನರನ್ನು ಒಗ್ಗೂಡಿಸುವ ಜೊತೆಗೆ ದುಂದು ವೆಚ್ಚದ ಮದುವೆಗಳಿಗೆ ಕಡಿವಾಣ ಹಾಕಿ ಬಡವರಿಗೆ ನೆರವಾಗಿದ್ದಲ್ಲದೆ ಅಂತರ್ಜಾತಿ ಮದುವೆಗಳ ಮೂಲಕ ಎಲ್ಲರೂ ಒಂದೇ ಎಂಬ ಸಂದೇಶ ಸಾರುತ್ತಿದೆ.**
> **- ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ.**

ನಂಜನಗೂಡು, ಜ.20– ಧರ್ಮ ಬೋಧನೆಯಿಂದ ಬದುಕು ಹಸನಾಗುವುದಿಲ್ಲ. ಧರ್ಮಕ್ಕಾಗಿ ಜನರಿಲ್ಲ, ಜನರಿಗಾಗಿ ಧರ್ಮವಿದೆ. ಜಾತಿ ವಿಭಜನೆಗೆ ಧರ್ಮದ ಚೌಕಟ್ಟು ಕೊಟ್ಟಿದ್ದಾರೆ. ಧರ್ಮ ದೇವರು ಮಾಡಿದ್ದಲ್ಲ ನಾವೇ ಮಾಡಿದ್ದು, ಎಲ್ಲರೂ ಒಂದಾಗಿ ಬದುಕಬೇಕೆಂಬ ನೀತಿ ಹೇಳುವುದೇ ಧರ್ಮ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ದೇಸಿ ಆಟಗಳು, ಚಿತ್ರಕಲಾ ಸ್ಪರ್ಧೆ ಹಾಗೂ ಗಾಳಿಪಟ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು. 2 ಸಾವಿರ ವರ್ಷಗಳ ಹಿಂದೆ ವೇದಗಳ ಕಾಲದಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನವಿತ್ತು. ಪ್ರಸ್ತುತ ಮಹಿಳೆ ಮನೆಗೆ ಸೀಮಿತ ಎಂಬಂತಾಗಿದೆ. ಮಹಿಳೆಯರಿಗೆ ಶಿಕ್ಷಣ ದೊರಕಿದ್ದು ಬಸಾವದಿ ಶರಣರಿಂದ. ಸಂವಿಧಾನ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ್ದು, ಸಾವಿರಾರು ವರ್ಷಗಳಿಂದ ಶೋಷಣೆಗೊಳಗಾದ ಜನರಿಗೆ ಸಮಾನ ಅವಕಾಶ ನೀಡದಿದ್ದರೆ ಜನರೆ ವ್ಯವಸ್ಥೆಯ ಸೌಧ ಧ್ವಂಸಗೊಳಿಸಲಿದ್ದಾರೆ ಎಂದು ಅಂಬೇಡ್ಕರ್ ಹೇಳಿದ್ದರು. ಆದರೆ ಸ್ವತಂತ್ರ ಬಂದು 75 ವರ್ಷಗಳಾದರೂ ಅಸಮಾನತೆ ದೂರವಾಗಿಲ್ಲ. ಸಾಮಾಜಿಕ, ಆರ್ಥಿಕ ಸಮಾನತೆಯಿಂದ ಮಾತ್ರ ಸಾಮಾಜಿಕ ವ್ಯವಸ್ಥೆ ಚಲನೆಗೊಳ್ಳುತ್ತದೆ. ಸಂಪತ್ತು, ಅಧಿಕಾರಗಳು ಒಂದೇ ಕಡೆ ಕೇಂದ್ರೀಕೃತವಾಗಬಾರದು. ಹಂಚಿಕೆಯಾಗಬೇಕು. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂಬಂತೆ ಬರೀ ಭಾಷಣಕ್ಕೆ ಮಾತ್ರ ಸೀಮಿತಗೊಳ್ಳಬಾರದು. ಅದು ಅಕ್ಷರಃ ಸಹ ಜಾರಿಗೊಳ್ಳಬೇಕು ಎಂದರು.

ಮನುಷ್ಯನ ಬದುಕಿಗೆ ಕ್ರೀಡೆ ಮುಖ್ಯ. ಕ್ರೀಡೆಗಳು ಬದುಕನ್ನು ಕ್ರಿಯಾಶೀಲಗೊಳಿಸುತ್ತವೆ. ಈ ಹಿಂದೆ ದೇಸಿ ಆಟಗಳಾದ ಲಗೋರಿ, ಉಯ್ಯಾಲೆ ಸೇರಿದಂತೆ ಇನ್ನಿತರ ಆಟ ಆಡುತ್ತಿದ್ದೆವು. ಇಂದಿನವರು ಅದನ್ನು ಮರೆತಿದ್ದಾರೆ. ಬೆಳಗ್ಗೆಯಿಂದ ಸಂಜೆವರೆಗೂ ಇಸ್ಪೀಟ್ ಆಟದಲ್ಲಿ ತೊಡಗಿದ್ದಾರೆ. ದೇಸಿ ಕ್ರೀಡೆಗಳಿಗೆ ಉತ್ತೇಜನ ದೊರಕಬೇಕು ಎಂದರು.

ಶಾಸಕ ಎನ್.ಮಹೇಶ್ ಮಾತನಾಡಿ, ಭಾರತೀಯ ಪರಂಪರೆಯ ಅದ್ಭುತಗಳಲ್ಲಿ ಸುತ್ತೂರು ಜಾತ್ರೆ ಒಂದಾಗಿದೆ. ರೈತಾಪಿ ಜನ 6 ತಿಂಗಳು ಕೆಲಸ ಮಾಡಿ 1 ತಿಂಗಳು ನಿರಂತರವಾಗಿ ಊರಹಬ್ಬ, ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ತೊಡಗಿಕೊಳ್ಳುವ ವೈಭವ ಕಾಣುತ್ತದೆ ಎಂದರು.

ಮಾಜಿ ಸಚಿವ ಪಿ.ಜಿ. ಆರ್. ಸಿಂಧ್ಯಾ, ಶಾಸಕ ಕುಮಾರ್ ಬಂಗಾರಪ್ಪ ಮಾತನಾಡಿದರು. ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಆರ್ಯ ಈಡಿಗ ಮಹಾಸಂಸ್ಥಾಪನ ಪೀಠದ ಶ್ರೀವಿಖ್ಯಾತನಂದ ಸ್ವಾಮೀಜಿ, ಈಶಪ್ರಿಯ ತೀರ್ಥ ಶ್ರೀಪಾದಂಗಳು, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಸಮಾರಂಭದಲ್ಲಿ ಶಾಸಕರಾದ ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಯಣ್ಣ, ಎ.ಆರ್.ಕೃಷ್ಣಮೂರ್ತಿ, ಸೋಮಶೇಖರ್, ವೆಂಕಟೇಶ್, ಪದ್ಮಶ್ರೀ ಪುರಸ್ಕೃತೆ ಡಾ.ಮಂಜಮ್ಮ ಜೋಗತಿ, ಮಾಜಿ ಸಚಿವೆ ಗೀತಾ ಮಹದೇವಪ್ರಸಾದ್, ಕಾಡಾ ಅಧ್ಯಕ್ಷ ನಿಜಗುಣರಾಜು, ಮಾಜಿ ಜಿಪಂ ಅಧ್ಯಕ್ಷ ಬಿ.ಎಂ.ರಾಮು, ಮರೀಗೌಡ, ಪುಷ್ಪ ಅಮರ್‌ನಾಥ್ ಇನ್ನಿತರರಿದ್ದರು.

ಇಂದು ರಾಜ್ಯಕ್ಕೆ ಮತ್ತೆ ಜೆ.ಪಿ.ನಡ್ಡಾ

ಬೂತ್ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ



ಬೆಂಗಳೂರು: ವಿಧಾನಸಭೆ ಚುನಾವಣೆ ಸಮೀಪ ಬರುತ್ತಿರುವಂತೆಯೇ ರಾಜ್ಯಕ್ಕೆ ಬಿಜೆಪಿ ವರಿಷ್ಠರ ಆಗಮನವೂ ಹೆಚ್ಚಾಗುತ್ತಿದೆ. ಇತ್ತೀಚೆಗಷ್ಟೇ ಕೊಪ್ಪಳಕ್ಕೆ ಆಗಮಿಸಿದ್ದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಜ.21 ಶನಿವಾರ ಮತ್ತೆ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ.

ವಿಜಯನಗರದಲ್ಲಿ ಬಿಜೆಪಿಯ ಬೂತ್ ವಿಜಯ ಸಂಕಲ್ಪ ಅಭಿಯಾನಕ್ಕೆ ಶನಿವಾರ ಜೆ.ಪಿ ನಡ್ಡಾ ಚಾಲನೆ ನೀಡಲಿದ್ದಾರೆ. ಬೂತ್ ವಿಜಯ ಸಂಕಲ್ಪ ಅಭಿಯಾನದಲ್ಲಿ ಬೂತ್‌ಗಳ ಮಟ್ಟದಲ್ಲಿ ಡಬಲ್ ಇಂಜಿನ್ ಸರ್ಕಾರಗಳ ಸಾಧನೆಗಳ ರಿಪೋರ್ಟ್‌ಕಾರ್ಡ್ ಅನ್ನು ಜನತೆ ಮುಂದಿಡಲಾಗುತ್ತದೆ. ಆ ಮೂಲಕ ಸರ್ಕಾರದ ಕಾರ್ಯಕ್ರಮಗಳ ಕುರಿತು ಜನತೆಗೆ ಮನವರಿಕೆ ಮಾಡಿಕೊಡುವ ಪ್ರಯತ್ನಕ್ಕೆ ಬಿಜೆಪಿ ಕೈಹಾಕಿದೆ.

ಶನಿವಾರ ಬೆಳಗ್ಗೆ ವಿಶೇಷ ವಿಮಾನದಲ್ಲಿ ದೆಹಲಿಯಿಂದ ಕಲಬುರಗಿಗೆ ಆಗಮಿಸುವ ಜೆ.ಪಿ ನಡ್ಡಾ, ಬಳಿಕ ವಿಜಯಪುರದಲ್ಲಿ ಜ್ಞಾನಯೋಗಾಶ್ರಮಕ್ಕೆ ಭೇಟಿ ನೀಡಲಿದ್ದಾರೆ. ಶ್ರೀಸಿದ್ಧೇಶ್ವರ ಮಹಾಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಿದ್ದಾರೆ. ಜ್ಞಾನಯೋಗಾಶ್ರಮದ ಅಧ್ಯಕ್ಷ ಶ್ರೀಬಸವಲಿಂಗ ಮಹಾಸ್ವಾಮೀಜಿ ಈ ಸಂದರ್ಭದಲ್ಲಿ ಹಾಜರಿರಲಿದ್ದಾರೆ. ನಾಳೆ ಮಧ್ಯಾಹ್ನ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ವಿಜಯ ಸಂಕಲ್ಪ ಅಭಿಯಾನವನ್ನು ಜೆ.ಪಿ.ನಡ್ಡಾ ಉದ್ಘಾಟಿಸಲಿದ್ದಾರೆ. ಆ ಬಳಿಕ ಮನೆ ಮನೆಗೆ ಭೇಟಿ, ಕರಪತ್ರ ವಿತರಣೆ, ಗೋಡೆ ಬರಹ, ಮಿಸ್ಡ್ ಕಾಲ್ ಸದಸ್ಯತ್ವ ಅಭಿಯಾನದಲ್ಲೂ ನಡ್ಡಾ ಭಾಗವಹಿಸಲಿದ್ದಾರೆ.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮಾಜವಾದಿ ಚಿಂತಕ ಪ.ಮಲ್ಲೇಶ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿದರು. ಲಲಿತಾದ್ರಿಪುರದಲ್ಲಿರುವ ರುದ್ರಭೂಮಿಯಲ್ಲಿ ಪ.ಮಲ್ಲೇಶ್ ಅವರ ಅಂತ್ಯಕ್ರಿಯೆ ಶುಕ್ರವಾರ ನೆರವೇರಿತು.

ಡಾ.ವಿಷ್ಣು ಸ್ಮಾರಕ ಉದ್ಘಾಟನೆ ಹಿನ್ನೆಲೆ: ಭಾರೀ ಮೆರವಣಿಗೆ

ಮೈಸೂರು, ಜ.20(ಎಂಟಿವೈ)- ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಸ್ಮಾರಕ ಉದ್ಘಾಟನೆಯ ಹಿನ್ನೆಲೆಯಲ್ಲಿ ಜ.29ರಂದು ಮೈಸೂರಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಬೃಹತ್ ಮೆರವಣಿಗೆ ಆಯೋಜಿಸಲಾಗಿದೆ ಎಂದು ವಿಷ್ಣು ಸೇನಾ ಸಮಿತಿ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ. 29ರಂದು ಉದ್ಬೂರು ಗೇಟ್ ಬಳಿಯ ವಿಷ್ಣು ಸ್ಮಾರಕ ಲೋಕಾರ್ಪಣೆ ಮಾಡಲಾಗುತ್ತಿದೆ. ಸರ್ಕಾರದ ವತಿಯಿಂದ ನಡೆಯುತ್ತಿರುವ ಕಾರ್ಯಕ್ರಮದ ಬಗ್ಗೆ ಇದುವರೆಗೂ ಅಧಿಕೃತವಾಗಿ ಮಾಹಿತಿ ನೀಡಿಲ್ಲ. ಹೀಗಾಗಿ ನಿರ್ದಿಷ್ಟ ಮಾಹಿತಿ ನೀಡಿದರೆ ಅನ್ನಸಂತರ್ಪಣೆ ಆಯೋಜಿಸಲು ನೆರವಾಗುತ್ತದೆ ಎಂದರು. ಡಾ.ವಿಷ್ಣುವರ್ಧನ್ ಅಭಿಮಾನಿಗಳು ಬೆಂಗಳೂರಿಂದ ಮೈಸೂರುವರೆಗೆ ನೂರಾರು ಕಟೌಟ್ ಹಾಕಲು ನಿರ್ಧರಿಸಿದ್ದಾರೆ. ಮೈಸೂರಲ್ಲಿ ಅದ್ಧೂರಿ ಮೆರವಣಿಗೆ ಆಯೋಜಿಸಿ ನೆಚ್ಚಿನ ನಟನಿಗೆ ಗೌರವ ಸೂಚಿಸಲಾಗುತ್ತದೆ. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ 20 ಸಾವಿರ ಅಭಿಮಾನಿಗಳಿಗೆ ಊಟದ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಸಮಿತಿಯ ಲೋಹಿತ್‌ಗೌಡ, ಕುಮಾರ್, ರಮೇಶ್, ಹರೀಶ್, ದರ್ಶನ್, ಮಹೇಶ್ ಇದ್ದರು.

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀನಿವಾಸ್ (ದಾಸಪ್ಪ)
ನಜರಬಾದ್, ಮೊ: 9740709045

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ನಗರದ, ಜೆ.ಪಿ.ನಗರ ಬಡಾವಣೆಯ 'ಎ' ಬ್ಲಾಕ್‌ನಲ್ಲಿ 2ನೇ ಮುಖ್ಯ ರಸ್ತೆ, 11ನೇ ಅಡ್ಡರಸ್ತೆಯಲ್ಲಿರುವ ಮನೆ ನಂ.116ರಲ್ಲಿ ವಾಸವಾಗಿರುವ ಶ್ರೀಮತಿ ಚಂದ್ರಲೇಖಾ ಮತ್ತು ಅವರ ಸೋದರ ಅನೂಪ್ ಎಸ್ ಅರಸ್ ರವರ ಇರಾದೆಯ ಮೇರೆಗೆ ಈ ಪತ್ರಿಕಾ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿದ ಷೆಡ್ಯೂಲ್ ಸ್ವತ್ತು ನನ್ನ ಕಕ್ಷಿದಾರರಿಗೆ ಪಿತ್ರಾರ್ಜಿತವಾಗಿ ಬಂದಿರುವ ಸ್ವತ್ತಾಗಿರುತ್ತದೆ. ಈ ಮಧ್ಯೆ ಕೆಲವರು ಈ ಸ್ವತ್ತು ತಮ್ಮ ಹೆಸರಿಗೆ ಖಾತೆ ಆಗಿರುವುದಾಗಿ ಹೇಳಿಕೊಂಡು ಸದರಿ ಸ್ವತ್ತಿನಲ್ಲಿ ನಿವೇಶನ ಅಭಿವೃದ್ಧಿಪಡಿಸಿರುವುದಾಗಿ ಹೇಳುತ್ತಾ ಮಾರಾಟ ಮಾಡುವುದಾಗಿ ಹೇಳಿಕೊಂಡು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಸಾರ್ವಜನಿಕರನ್ನು ವಂಚಿಸಲು ಯತ್ನಿಸುತ್ತಿದ್ದಾರೆಂಬ ವಿಚಾರ ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ.

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸದರಿ ಷೆಡ್ಯೂಲ್ ಸ್ವತ್ತು ನನ್ನ ಕಕ್ಷಿದಾರರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದನ್ನು ಅವರು ಬೇರೆ ಯಾರಿಗೂ ಮಾರಾಟ, ಪರಭಾರೆ, ಭೋಗ್ಯ, ಗುತ್ತಿಗೆ, ಯಾವುದನ್ನೂ ಮಾಡಿರುವುದಿಲ್ಲ. ಬೇರೆ ಯಾರಿಗೂ ಷೆಡ್ಯೂಲ್ ಸ್ವತ್ತಿನ ಪರಿವರ್ತನೆ, ಮಾರಾಟ, ಪರಭಾರೆಯ ಹಕ್ಕು, ಅಧಿಕಾರವನ್ನು ನೀಡಿರುವುದಿಲ್ಲ. ಸಾರ್ವಜನಿಕರು ಯಾರೂ ಈ ಸ್ವತ್ತಿನ ವಿಚಾರದಲ್ಲಿ ಖರೀದಿಗೆ ಮುಂದಾಗಿ ಮೋಸ ಹೋಗಬಾರದು ಈ ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ವ್ಯವಹಾರ ನಡೆಸಿದಲ್ಲಿ ನ್ಯಾಯಾಲಯದಲ್ಲಿ ದಾವೆ ಸೇರಿದಂತೆ ಕಾನೂನು ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮದ ಸರ್ವೆ ನಂ.17ರಲ್ಲಿರುವ ವಿಸ್ತೀರ್ಣ 5 ಎಕರೆ 17 ಗುಂಟೆ ಜಮೀನಿನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ನಜರ್‌ಉಲ್ಲಾರವರ ಜಮೀನು, ಪಶ್ಚಿಮಕ್ಕೆ: ಹಂಚ್ಯಾ ಗ್ರಾಮ ಠಾಣಾ, ಉತ್ತರಕ್ಕೆ: ಗೋಮಾಳ ಮತ್ತು ಹನುಮಂತಪ್ಪರವರ ಜಮೀನು, ದಕ್ಷಿಣಕ್ಕೆ: ಸ್ವಂತ ಜಮೀನು ಸರ್ವೆ ನಂ.21.

ಸಹಿ/-ನಾಗರಾಜಸ್ವಾಮಿ, ವಕೀಲರು, ನಂ.26/1, ವಿಚಿಲಾ ಕಾಂಪ್ಲೆಕ್ಸ್, ನ್ಯೂಕಾಂತರಾಜ ಅರಸ್ ರಸ್ತೆ, ಮೈಸೂರು. ಮೊ. ನಂ 9972688059

ದಿನಾಂಕ: 20.01.2023
ಸ್ಥಳ: ಮೈಸೂರು

ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ (ನಿ), ಮೈಸೂರು



ಸಭೆಯ ಆಹ್ವಾನ ಪತ್ರಿಕೆ

22 ಜನವರಿ 2023, ಭಾನುವಾರ ಬೆಳಗ್ಗೆ 11.00ಕ್ಕೆ,
ಸ್ಥಳ: ಅಲ್ಲಮಪ್ರಭು ಸಭಾಂಗಣ (ಶಾಲೆಯ ಆವರಣ), ಸುತ್ತೂರು ಶ್ರೀ ಕ್ಷೇತ್ರ

ದಿವ್ಯ ಆಶೀರ್ವಾದಗಳೊಂದಿಗೆ
ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು,
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

ಅಧ್ಯಕ್ಷತೆ: ಶ್ರೀ ಎಲ್ ರೇವಣ್ಣಸಿದ್ದಯ್ಯ, ಪೊಲೀಸ್ ಮಹಾನಿರ್ದೇಶಕರು (ನಿ),ಅಧ್ಯಕ್ಷರು,
ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ

ಜ್ಞಾನಯೋಗಾಶ್ರಮದ ಸಂತ ಶ್ರೀ ಸಿದ್ದೇಶ್ವರಸ್ವಾಮಿಗಳ ನುಡಿನಮನ
ಪ್ರೊ.ಎಸ್.ಸಿದ್ದಪ್ಪ, ವಿಶ್ರಾಂತ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ

ಮುಖ್ಯ ಅತಿಥಿಗಳು: ಡಾ.ಡಿ.ಬಿ.ನಟೇಶ್ ಕೆ.ಎ.ಎಸ್ ಹಿರಿಯ ಶ್ರೇಣಿ ಅಧಿಕಾರಿಗಳು, ಕರ್ನಾಟಕ ಸರ್ಕಾರ

ಸನ್ಮಾನಿತರು: ಡಾ.ಬಿ.ಎಸ್ ಬಸವರಾಜಯ್ಯ ನಿವೃತ್ತ ಪ್ರಾಚಾರ್ಯರು, ತಾಂತ್ರಿಕ ವಿದ್ಯಾಲಯ, ಸುರತ್ಕಲ್
ಡಾ.ಎಂ ನಂಜುಂಡಪ್ಪ ನಿವೃತ್ತ ಪ್ರಾಚಾರ್ಯರು, ಜೆಎಸ್‌ಎಸ್ ಕಾಲೇಜು, ಮೈಸೂರು.

ತಮಗೆ ಆದರದ ಸ್ವಾಗತ

PUBLIC NOTICE

Under instructions from my client Mohammed Shahid Ayaz S/o Late Ashfaq Hussain, (Mob 9916252102) has filed a suit in OS No 61/2023 on the file of Principal Senior Civil Judge Mysuru for the recovery of Rs. 8,98,156/- together with court coat and current interest against Smt. Neelufer Banu W/o late Mohammed Haneef and her children and also prayed for recovery of the above amount by the sale of the schedule property. General public are hereby notified not to enter into any transaction pertaining to schedule property till the Final disposal of the case by Hon'ble court.

SCHEDULE

House bearing No. 66/2B situate at SIHS, Rajendranagar Extension Extension, Extension, Kesare, N R Mohalla, Mysuru and bounded on

East : House No 69/1 B
West : House No 66/2A
North : MUDA House
South : Road

In Which measuring east to west 7.50 meter and North to South 15.00 meters and in which a ECC residential house is there.

Date: 13.01.2023 K. Eswarabhat, B.A., L.L.B.
Advocate

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ನಂ.ಸಿಇಎಸ್‌ಟಿ(4):ಸಿಆರ್:60:2022-2023 **ಅಧಿಸೂಚನೆ** ಆಯುಕ್ತರವರ ಕಛೇರಿ, ದಿನಾಂಕ: 19.01.2023.

ಕರ್ನಾಟಕ ಮಹಾನಗರ ಪಾಲಿಕೆಗಳು (ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಾಮಾನ್ಯ ನೇಮಕಾತಿ) ನಿಯಮಗಳು, 2011ರಂತೆ ಮೈಸೂರು ಮಹಾನಗರ ಪಾಲಿಕೆಗೆ ಮಂಜೂರಾಗಿರುವ **'ಪೌರಕಾರ್ಮಿಕರ ಹುದ್ದೆ' ಗಳ** ಪೈಕಿ ನೇರ ನೇಮಕಾತಿಯಡಿ ಖಾಲಿ ಇರುವ 205 **ಪೌರಕಾರ್ಮಿಕರ** ಹುದ್ದೆಗಳಿಗೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2022ರ ರೀತ್ಯಾ **ಪೌರಕಾರ್ಮಿಕರ** ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡಲು ಮೈಸೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಪೌರಕಾರ್ಮಿಕರು, ಲೋಡರ್ ಅಥವಾ ಕ್ಲೀನರ್ ಹುದ್ದೆಗಳಲ್ಲಿ ಕನಿಷ್ಠ ಎರಡು(2) ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿವರ	ದಿನಾಂಕ	ಅರ್ಜಿ ನಮೂನೆ ಪಡೆಯುವ ವಿಳಾಸ
ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ	20.01.2023	ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು-570004
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	20.02.2023	

ನಗರ ಸ್ಥಳೀಯ ಸಂಸ್ಥೆಯ ಹೆಸರು	ಹುದ್ದೆಯ ಹೆಸರು ಹಾಗೂ ವೇತನ ಶ್ರೇಣಿ	ಭರ್ತಿ ಮಾಡಲು ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ	ನಿಗಧಿಪಡಿಸಲಾದ ಕನಿಷ್ಠ ವಿದ್ಯಾರ್ಹತೆ / ಅರ್ಹತೆಗಳು
ಮೈಸೂರು ಮಹಾನಗರ ಪಾಲಿಕೆ	ಪೌರಕಾರ್ಮಿಕ (ರೂ.17000-28950)	205	1. ವಿದ್ಯಾರ್ಹತೆ ಅನ್ವಯಿಸುವುದಿಲ್ಲ. 2. ಕನ್ನಡ ಮಾತನಾಡಲು ಬಲ್ಲವರಾಗಿರಬೇಕು. 3. ಮೈಸೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ನೇರಪಾವತಿ/ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ / ಹೊರಗುತ್ತಿಗೆ ಆಧಾರದಲ್ಲಿ ಪೌರಕಾರ್ಮಿಕ ಅಥವಾ ಲೋಡರ್ ಅಥವಾ ಕ್ಲೀನರ್ ಹುದ್ದೆಯಲ್ಲಿ ಕನಿಷ್ಠ ಎರಡು (2) ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮಾತ್ರ ಅರ್ಹರಿರುತ್ತಾರೆ. 4. ಅರ್ಜಿ ಸಲ್ಲಿಸಲು ಸರ್ಕಾರ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 18 ವರ್ಷ ಪೂರ್ಣಗೊಂಡಿದ್ದು, ಗರಿಷ್ಠ ವಯೋಮಿತಿ 55 ವರ್ಷ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಡಿ ಖಾಲಿ ಇರುವ 205 ಪೌರಕಾರ್ಮಿಕರ ಹುದ್ದೆಗಳಿಗೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಇಲಾಖೆಯು ಹೊರಡಿಸಿರುವ ಆದೇಶ ಸಂಖ್ಯೆ ಸಿಆಸುಇ : 01 : ಸೇಹಿಮ : 2022, ಬೆಂಗಳೂರು, ದಿನಾಂಕ: 28.12.2022 ರಂತೆ ರೋಸ್ಟರ್ ಬಿಂದುಗಳನ್ನು ವರ್ಗೀಕರಿಸಿಸುವ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಯೋ.ನಿ	ಕ.ಮಾ.ಅ	ಅಂ.ವಿ	ತೃ.ಲಿಂ.	ಒಟ್ಟು
1	ಪ.ಜಾ	05	12	09	03	01	02	02	01	35
2	ಪ.ಪಂ	02	06	04	01	–	01	01	–	15
3	ಪ್ರ.-1	02	03	03	–	–	–	01	–	09
4	ಪ್ರ-2(ಎ)	04	10	08	03	01	01	02	01	30
5	ಪ್ರ-2(ಬಿ)	03	03	02	–	–	–	01	–	09
6	ಪ್ರ-3(ಎ)	02	03	02	–	–	–	01	–	08
7	ಪ್ರ-3(ಬಿ)	01	03	03	01	–	–	01	–	09
8	ಸಾ.ಅ.	15	29	23	09	04	04	05	01	90
	ಒಟ್ಟು	34	69	54	17	06	08	14	03	205

ಅರ್ಜಿ ಸಲ್ಲಿಸುವ ವಿಧಾನ: ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗಧಿತ ಅರ್ಜಿ ನಮೂನೆಯನ್ನು ಮೈಸೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಿಂದ ಪಡೆದು, ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ , ಅದರ ಮೇಲೆ ಎಡಗೈ ಹೆಬ್ಬೆಟ್ಟಿನ ಗುರುತು ಮಾಡುವುದು ಹಾಗೂ ಅರ್ಜಿಯ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಸಹಿ / ಹೆಬ್ಬೆಟ್ಟಿನ ಗುರುತು ಮಾಡುವುದು. ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆ, ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದು, ಅವುಗಳ ನಕಲು ಪ್ರತಿಗಳನ್ನು ಸಂಬಂಧಪಟ್ಟ ಶಾಖಾ ಮುಖ್ಯಸ್ಥರಿಂದ ದೃಡೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು ಮೈಸೂರು ಮಹಾನಗರ ಪಾಲಿಕೆ ಮೈಸೂರು ಇವರಿಗೆ ದಿನಾಂಕ: 20.02.2023ರ ಸಂಜೆ 5.30 ಗಂಟೆಯೊಳಗೆ ನೇರವಾಗಿ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು. ಅಂಚೆ ಮೂಲಕ ಅಥವಾ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅವಧಿ/ಸಮಯ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ: ನೇಮಕಾತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಪಾಲಿಕೆ ವೆಬ್‌ಸೈಟ್ http://www.mysurucity.mrc.gov.in ಅಥವಾ ಮಹಾನಗರ ಪಾಲಿಕೆ ಕೇಂದ್ರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಅಧ್ಯಕ್ಷರು, ಆಯ್ಕೆ ಮತ್ತು ನೇರನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು,
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸ್ಥಳ: ಮೈಸೂರು, ದಿನಾಂಕ: 19.01.2023